॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀ ಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ,
ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀ ಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀ ಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀ ಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಮುದ್ರಕರು:
**ಶ್ರೀ ವೀರಾಂಜನೇಯ ಪ್ರಕಾಶನ, ಬಂಗಾರಮಕ್ಕಿ**

## ಒಳಪುಟಗಳಲ್ಲಿ

ಸಚ್ಚಿಂತನ........ 2
ಸಂಪಾದಕೀಯ........ 3
ವಕಾಲತ್........ 4
ಆಚಾರ-ವಿಚಾರ........ 5
ಚಿಂತನ-ಮಂಥನ........ 6
ಬದುಕಲೊಂದಿಷ್ಟು ಆಪ್ತಮಾತುಗಳು........ 6
ಸಂದೇಶ ಸನ್ನಿಧಿ........ 7
ಮಕ್ಕಳಿಗಾಗಿ ನೀತಿ ಕಥೆಗಳು........ 9
ಸಂಪ್ರದಾಯ ........ 10
ಭಾರತ ದರ್ಶನ ........ 11
ಧರೆಗಿಳಿದ ದಿವ್ಯತೇಜ........ 13
ಶ್ರೀರಾಮ ಕಥಾ ಸಾರ........ 15
ಮನೆ ಮದ್ದು........ 16
ಮಧುರ ಪ್ರಕಾಶನದ ಸೌಜನ್ಯದೊಂದಿಗೆ........ 18
ನಿತ್ಯೋಪಯೋಗಿ ಮಂತ್ರಗಳು........ 19
ಶ್ರೀಧರ ಸ್ಮರಣೆ........ 21
ವಚನಭಾಗವತ........ 22
ಆಮಂತ್ರಣ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯು ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಆ್ಯಡಂ ಸೇತುವೆ - ಮನ್ನಾರ್ ದ್ವೀಪ ಮತ್ತು ಧನುಷ್ಕೋಟಿ ಮಧ್ಯದಲ್ಲಿನ ಮಾರ್ಗ.

# ಹೃದಯ ದೌರ್ಬಲ್ಯಂ...... ಮನ ಶ್ಯೈಥಿಲ್ಯಂ......



ಜಗತ್ತಿನಲ್ಲಿ ಕಾಲಘಟ್ಟ ಬದಲಾಗುತ್ತಿರುತ್ತದೆ. ಅಂತೆಯೇ ನಮ್ಮ ಕಾಲವನ್ನು "ವಿಜ್ಞಾನಯುಗ" ಅಥವಾ ಬುದ್ಧಿಪ್ರಧಾನ ಕಾಲ ಎಂದು ಕರೆಯುತ್ತೇವೆ. ಆದರೆ ಒಂದು ಭಾಗದಲ್ಲಿ ಬುದ್ಧಿ ಪ್ರಭಲವಾಗಿದ್ದರೆ ಇನ್ನೊಂದು ಭಾಗದಲ್ಲಿ ಮನಸ್ಸು ದುರ್ಬಲವಾಗಿಯೂ ಇದೆ. ಅಲ್ಲದೇ ಕಷ್ಟ ಬೇಡವೆನ್ನುತ್ತದೆ ನಮ್ಮ ಈ ಕಾಲ. ಕಷ್ಟವಾದದ್ದು ಬೇಡ, ಎಲ್ಲವೂ ಸುಲಭವಾದದ್ದಿರಲಿ–"ಸುಲಿದ ಬಾಳೆಹಣ್ಣಿನಂದದಿ." ಇದು ಈಗಿನ ಜನರ ಮನೋಗತ.

ಇದು ನಮ್ಮ ವಿದ್ಯಾಶಾಲೆಯಲ್ಲಿಯೇ ಪ್ರಾರಂಭ. ವರ್ಣಮಾಲೆಯಲ್ಲಿ ಛ,ಭ,ಕ್ಷ,ಹ್ರ,ಝ, ಇಂಥಾ ಅಕ್ಷರಗಳು ಬೇಡ, ಅವು ಮಕ್ಕಳಿಗೆ ಶ್ರಮ ಕೊಡುತ್ತವೆ ಎಂದು ತಿಳುವಳಿಕೆಯುಳ್ಳವರೇ ವಾದಿಸುತ್ತಾರೆ. ವಿದ್ಯಾರ್ಥಿಗಳನ್ನು ದಂಡಿಸುವುದು ಬೇಡ. ಅವರಿಗೆ ಮಿಠಾಯಿ ಅಲ್ಲದೇ ಅನೇಕ ಕೊಡುಗೆಯನ್ನು ಕೊಟ್ಟು ಅವರನ್ನು ತಿದ್ದಬೇಕು. ಚಿತ್ತವಿಲ್ಲದೇ ತಿದ್ದಲಾಗದೇ ಹೋದರೆ ಅವರಿರುವಂತೆ ಇದ್ದುಕೊಳ್ಳಲಿ ಎನ್ನುವ ಭಾವನೆ.

ಮೈಗೆ ಗಾಳಿ ಬಿಸಿಲು ತಾಗಿದರೆ ಚರ್ಮ ಒಡೆಯುತ್ತದೆ. ಅದು ಬೇಡ. ಎಲ್ಲಕ್ಕೂ ಯಾವಾಗಲೂ ಬಟ್ಟೆಸುತ್ತಿರಲಿ.

ಮುಖ ತೊಳೆದು ತಿಂಡಿ ತಿನ್ನು ಎಂದರೆ ಘಾಸಿಯಾಗುತ್ತದೆ. ಯಾವಾಗಬೇಕೆಂದರೆ ಆವಾಗ ತಿನ್ನಲಿ. ಇಷ್ಟ ಬಂದಾಗ ಹಲ್ಲುಜ್ಜಲಿ.

ಪರೀಕ್ಷೆಯಲ್ಲಿ ನೂರಕ್ಕೆ ನಲವತ್ತು ಸಂಖ್ಯೆಯನ್ನೇಕೆ ತೆಗೆಯಬೇಕು?

ಹತ್ತು ತೆಗೆದುಕೊಂಡರೆ ಸಾಕು.

ಹೀಗೆ ಹರಿಯುತ್ತಿದೆ ಕರುಣಾಪ್ರವಾಹ.

ಕಸ್ತೂರಿ ಮಾರುವವನ ಪಕ್ಕದಲ್ಲಿ ಗೊಬ್ಬರದವನು ಅಂಗಡಿ ಇಡಲಿ. ಅದೇ ಸಮಾನತ್ವ. ನಿತ್ಯ ಸ್ನಾನಿಯ ಮೈಯನ್ನು ನೀರು ಸೋಕದವನು ತಿಕ್ಕಲಿ. ಅದೇ ಅಲ್ಲವೇ ಸೋದರತ್ವ? ಸಾವಿರ ಸಾವಿರ ಸಂಬಳವಿಲ್ಲದ ಗಂಡನು ತನಗೆ ಬೇಕಿಲ್ಲವೆಂದು ಮಗಳು ಹೇಳಿದರೆ ನೂರು ಸಂಬಳದವನನ್ನು ಮದುವೆಯಾಗು ಎಂದು ಆಕೆಗೆ ಹೇಳಬಹುದೇ? ಹಾಗೆ ಬಲಾತ್ಕಾರ ಮಾಡಿದರೆ ಆಗ ವ್ಯಕ್ತಿ ಸ್ವಾತಂತ್ರ್ಯವೇನಾಗುತ್ತದೆ? ದೇಶವಿದೇಶಗಳಲ್ಲಿ ಅನ್ಯಾಯ ನಡೆದರೆ, ಯುದ್ಧ ಸಂಭವಿಸಿದರೆ, ಯುದ್ಧದ ಮಾತು ಬೇಡ! ಶಸ್ತ್ರಾಸ್ತ್ರಗಳು ತುಕ್ಕು ತಿಂದು ಹೋಗಲಿ! ಸಮಾಧಾನದ ಭಾಷಣ ಮಾಡೋಣ ಎಂದರೆ ಹೇಗೆ......? ಹೀಗೆ ನಮ್ಮ ಮನಸ್ಸುಗಳಲ್ಲಿ ದೌರ್ಬಲ್ಯವು ಹೊಗೆಯಾಡುತ್ತಿದೆ. ಅದರೂ ನಾವು ನಮ್ಮನ್ನು ಹೆಗ್ಗಳಿಕೆಯಿಂದ ಹೇಳಿಕೊಳ್ಳುತ್ತೇವೆ. ಇದು "ವಿಜ್ಞಾನಯುಗ" ಅತ್ಯಂತ ಮುಂದುವರಿಯುತ್ತಿರುವ ಯುಗ. ಮಾನಸಿಕವಾಗಿ ಖಿನ್ನರಾಗಿ, ಹೃದಯದಲ್ಲಿ ದೌರ್ಬಲ್ಯವನ್ನು ಹೊಂದಿ ಅದೇನು ಸಾಧಿಸಿದ್ದೇವೆ? ಅದೇನು ಮುಂದುವರಿದಿದ್ದೇವೆ? ಇದನ್ನು ತಿಳುವಳಿಕೆಯುಳ್ಳವರೇ ಹೇಳಬೇಕು.

ಬ್ರಹ್ಮನು ಜನಕ್ಕೆ ಕಾಲುಗಳನ್ನೇಕೆ ಕೊಡುತ್ತಿದ್ದಾನೆ. ಕಾಲಿದ್ದರೆ ನಡೆಯುವ ಆಯಾಸ. ಅದಕ್ಕೆ ಬದಲಾಗಿ ವಾಹನವು ತಾನೇ ಮನುಷ್ಯನನ್ನೆತ್ತಿ ಒಳಗೆ ಕೂಡಿಸಿಕೊಂಡು ಎಲ್ಲಿಗೆ ಬೇಕೋ ಅಲ್ಲಿಗೆ ಪ್ರಯಾಣಿಸುವಂತೆ ಯಂತ್ರವನ್ನೇ ಅಳವಡಿಸಲಿ.

ಬ್ರಹ್ಮನು ಕುದುರೆಗಳನ್ನೇಕೆ ಸೃಷ್ಟಿ ಮಾಡಬೇಕು? ಕುದುರೆ ಸವಾರಿ ಆಯಾಸ ಮತ್ತು ಅಪಾಯ. ಮನುಷ್ಯನಿಗೆ ರೆಕ್ಕೆಗಳನ್ನು ಕೊಡಲಿ. ಚಕ್ಕುಲಿ, ಕಾಯಿ, ವಡೆ, ಕಡಲೆ ಎಂದರೆ ಹಲ್ಲುಗಳಿಗೆ ಪ್ರಯಾಸ. ಇದೇಕೆ ಬೇಕು? ರುಚಿರುಚಿಯಾದ ಗುಳಿಗೆಗಳನ್ನು ಚಪ್ಪರಿಸಲಿಕ್ಕೆ ಕೊಟ್ಟರೆ ಸುಲಭವಲ್ಲವೇ? ಸಾಲ ತೆಗೆದುಕೊಂಡವರು ತೀರಿಸದಿದ್ದರೆ ಹಾಗೆ ಬಿಟ್ಟುಬಿಡಿ–ಅವನಿಗೆ ಬಂಧೀಖಾನೆಯ ಭಯಬೇಡ. ಭಯವೇ ಹಿಂಸೆ. ಅವನಿಗೆ ಕನಿಕರಿಸಿ ಇನ್ನಷ್ಟು ಸಾಲ ಕೊಡಬಹುದಲ್ಲವೇ?

ಕೊಲೆ ಪಾತಕನಿಗೆ ಮರಣ ಶಿಕ್ಷೆ ಬೇಡ. ಅದೂ ಭಯವೇ! ಅವನಿಗೆ ಆ ದುಃಖ ಜ್ಞಾಪಕಕ್ಕೆ ಬಾರದಂತೆ ಧರ್ಮಛತ್ರದಲ್ಲಿ ಊಟ ಮಾಡಿಸಬಹುದಲ್ಲ!.....?

ದರೋಡೆಕಾರನನ್ನು ಪೋಲೀಸರು ಹಿಡಿದು ಬಡಿದು ನೋಯಿಸಬಾರದು.

ದಮ್ಮಯ್ಯ ಹಾಗೆ ಮಾಡಬೇಡಾ– ಎಂದು ಬೇಡಿಕೊಳ್ಳಬೇಕು.

ಜೀತಗಾರರು ತಾವು ಜೀತ ಮಾಡುವವರೆಂಬ ಸಂಕೋಚದಿಂದ ಕುಗ್ಗದೇ ತಾವೇ ಯಜಮಾನರೆಂದುಕೊಂಡು ಹಿಗ್ಗುವಂತೆ ಆಗಬೇಕು. ಬಂಡವಾಳ ಕರಗಿದರೆ ಕರಗಲಿ; ಬಂಡಾಯಗಾರರು ಸಂತುಷ್ಟರಾಗಿರಬೇಕು.

ರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದ್ದು ಕಲ್ಲೆದೆಯ ಕ್ರೂರತನ. ಅಂಥಾ ರಾಮನನ್ನೇಕೆ ಪೂಜಿಸಬೇಕು?

ಹೀಗೆ ಅನೇಕ ರೀತಿಯಲ್ಲಿ ಇಂದಿನ ಮುಂದುವರಿದ ವಿಜ್ಞಾನಯುಗದ ಕರುಣಾಲಹರಿ. ಇದೇ ಆತ್ಮ ದೌರ್ಬಲ್ಯ, ಇದೇ ಮನ ಶ್ಯೈಥಿಲ್ಯ; ಇದನ್ನು ಪೌರುಷವೆನುವಂತಿಲ್ಲ.

ಮನುಷ್ಯನ ಆತ್ಮವು ಬಲಿಷ್ಠವಾಗಬೇಕಾದರೆ ಅದರಲ್ಲಿ ಕಷ್ಟದ ಸಿದ್ಧತೆ ಅಥವಾ ಕಷ್ಟದ ಪೆಟ್ಟು ಇರಬೇಕು.



ಆಗ್ರಾ (ಉತ್ತರ ಪ್ರದೇಶ) – ಪ್ರಸಿದ್ಧ ತಾಜಮಹಲ್ ಇರುವ ನಗರ. ಅಕ್ಬರ್ ಸಮಾಧಿ ಇಲ್ಲಿವೆ.

**ನಾಯಮಾತ್ಮಾ ಬಲಹೀನೇನ ಲಭ್ಯಃ ॥**

ಧರ್ಮವು ಹೇಡಿಗೆ ಸಿಕ್ಕುವುದಲ್ಲ, ದಕ್ಕುವುದಲ್ಲ, ಧರ್ಮವು ಒಂದು ಧೀರತನವನ್ನು ಅಪೇಕ್ಷಿಸುತ್ತದೆ. ಯಾರು ಕಷ್ಟ ಪಡನೋ ಅವನ ಮೂಳೆ ಬಲಿಯದು. ಯಾರು ಯುದ್ಧಕ್ಕೆ ಸಿದ್ಧನಲ್ಲವೋ ಅವನು ಧರ್ಮವನ್ನು ರಕ್ಷಿಸಲಾರ.

ಹೀಗೆ ಇದನ್ನೆಲ್ಲ ಇಂದಿನ ಯುವ ಸಮಾಜಕ್ಕೆ, ಅಥವಾ ಮುಂದುವರಿದ ವಿಜ್ಞಾನ ಯುಗದ ವಿಚಾರವಾದಿಗಳಿಗೆ ತಿಳಿ ಹೇಳುವುದು ಅಸಾಧ್ಯ. ಅಂಥ ತಿಳಿ ಹೇಳುವವರು ವಿರಳ. ಆದರೂ ಭವಿಷ್ಯದ ಬುನಾದಿಯಾದ ಮಕ್ಕಳಲ್ಲಿ ಉತ್ತಮೋತ್ತಮ ಚಿಂತನೆಗಳನ್ನ ಬಿತ್ತರಿಸಿ ಅಧೀರತೆಯನ್ನೂ, ಹೃದಯ ದೌರ್ಬಲ್ಯತೆಯನ್ನೂ, ಅಲ್ಲದೇ ಮನ ಶೈಥಿಲ್ಯತೆಯನ್ನೂ ಹೋಗಲಾಡಿಸುವ ಪ್ರಯತ್ನ ಮಾಡಬೇಕಾಗಿದೆ.

**ಶ್ರೀರಾಮಸ್ಮರಣಂ**
**ಪರಮ ಪೂಜ್ಯ ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ**

ಸಂಪಾದಕೀಯ

# ಉತ್ತಮ ಸಂಸ್ಕಾರಕ್ಕೆ ದೇವಾಲಯಗಳ ಪ್ರಭಾವ

ಈ ಜಗದ ಸಕಲ ಜೀವಿಗಳಲ್ಲಿ ಮನುಷ್ಯನಿಗೆ ವಿವೇಚನಾ ಶಕ್ತಿಯನ್ನು ವಿಶೇಷವಾಗಿ ದೇವರು ಅನುಗ್ರಹಿಸಿದ್ದಾನೆ. ಅದೊಂದು ವಿಚಾರ ಬಿಟ್ಟರೆ ಸಮಯ–ಸಂದರ್ಭ ಸಿಕ್ಕಾಗ ಆತನ ವರ್ತನೆಗಳು ಪ್ರಾಣಿಗಳಂತೆ. ಪ್ರಾಣಿಗಳು ಅವುಗಳ ಆಹಾರ ಸಂಪಾದನೆ ಮತ್ತು ಪ್ರಾಣಕ್ಕೆ ಕುತ್ತು ಬರುವ ಸಂದರ್ಭಗಳಲ್ಲಿ ವ್ಯಗ್ರಗೊಂಡು ಉಪಟಳ ಮಾಡುತ್ತವೆ. ಆದರೆ ಮಾನವ ಸದಾ ಉಪಟಳ ಮಾಡುವ ಪ್ರವೃತ್ತಿ ಹೊಂದಿದ್ದಾನೆ. ಪುರಾಣಕಾಲದಿಂದಲೂ ದೇವತೆಗಳು–ರಾಕ್ಷಸರು ಎಂಬ ಎರಡು ಗುಂಪು ಇತ್ತು. ಮಾನವೀಯ ಗುಣಗಳನ್ನು ಹೊತ್ತ ಜನಪರ ಸೇವೆ ಮಾಡುವ ಗುಂಪು ದೇವತೆಗಳದ್ದು, ಸದಾ ಉಪಟಳ ನೀಡಿ ಸಾಮಾಜಿಕ ಅಶಾಂತಿ, ಭೋಗ, ಲಾಲಸೆಗಳಿಂದ ಕೂಡಿದ ಗುಂಪೇ ರಾಕ್ಷಸರ ಗುಂಪು.

ಕಾಮ, ಕ್ರೋಧಾದಿಗಳಿಂದ ಕೂಡಿದ ಮನುಷ್ಯ ಸಹಜವಾಗಿ ಮಿತಿ ಮೀರಿದ ವರ್ತನೆ ತೋರುತ್ತಾನೆ. ಹುಟ್ಟುವ ವೇಳೆಗೆ ಮುಗ್ಧತೆ ಹೊಂದಿದ್ದರೆ ದಿನಕಳೆದಂತೆ ಅದು ಬೇಕು, ಇದು ನನ್ನದು, ಇನ್ನೊಂದರ ಮೇಲಿನ ಮೋಹ ಮುಂತಾದ ಭಾವನೆಗಳನ್ನು ಹೊರಗೆಡುವುತ್ತಾನೆ. ಇಂತಹ ಸ್ಥಿತಿ ಅರಿತೇ ಋಷಿ ಮುನಿಗಳು ಅದನ್ನು ಹತೋಟಿಗೆ ತರಬಲ್ಲ ವಿಧಾನವನ್ನು ಕಂಡುಹಿಡಿದರು. ಅದು ತಪಸ್ಸು, ತ್ಯಾಗ, ಅನುಭವಗಳು ಮತ್ತು ಮನಕ್ಕೆ ಆನಂದ ನೀಡುವ ಶೋಧನೆಯಾಗಿತ್ತು. ಅದೇ ಪೂಜಾ ಪದ್ಧತಿ. ತಾನು ನಂಬಿದ ದೇವನ ರೂಪದ ಬಿಂಬವನ್ನು ಆರಾಧಿಸುವುದು. ಮಾನವನಿಗೆ ತನ್ನ ಮನಕೆ ಸಕಲ ಬಯಕೆಗಳನ್ನು ಪ್ರಾರ್ಥಿಸಿಕೊಂಡು ನಂಬಿಕೆಯಿಂದ ಬಾಳುವುದು ಸಂತಸ ನೀಡಿತು, ತೃಪ್ತಿ ನೀಡಿತು.

ತಾನು ಪೂಜಿಸುವ ಪೂಜಾಕೇಂದ್ರಗಳನ್ನು ತನ್ನ ಸಾಮರ್ಥ್ಯದಿಂದ ಬೆಳೆಸಿದ. ತನ್ನ ನಂಬಿಕೆಗಳನ್ನು ದೃಢಗೊಳಿಸಿದ. ಇಂತಹ ದೇವಮಂದಿರಗಳು ತಾನು ಕಂಡುಕೊಂಡ ಎಲ್ಲಾ ಸತ್ಯಗಳ, ನಂಬಿಕೆಗಳ ಕೇಂದ್ರಗಳಾದವು. ಅದು ಪ್ರಕೃತಿಯ ಸೃಷ್ಠಿ–ಸ್ಥಿತಿ–ಲಯ ಇವುಗಳನ್ನು ಮೀರಿ ನಿಲ್ಲಬೇಕೆಂಬ ಉನ್ನತ ಕಲ್ಪನೆಯಿಂದ ಬೆಳೆದವು. ಪ್ರತಿಗ್ರಾಮಗಳು ಒಂದೊಂದು ದೇವಾಲಯಗಳನ್ನು ಹೊಂದಿದವು. ದೇವಾಲಯವೆಂದರೆ ಅದು ಸಂಸ್ಕಾರ ಕೇಂದ್ರಗಳು. ಮಾನವ ಜೀವಿ ಹೇಗಿರಬೇಕೆಂದು ಬಯಸುವ ಎಲ್ಲಾ ವಿಚಾರಗಳು ಅಲ್ಲಿದ್ದವು. ದೇವಾಲಯಗಳೆಂದರೆ ಭಕ್ತಿ–ತ್ಯಾಗಗಳ ಭವ್ಯ ಸ್ಥಾನಗಳಾಗಿದ್ದವು. ದೇವ ಮಂದಿರಗಳೆಂದರೆ ವಿದ್ಯಾಲಯ, ಔಷಧಾಲಯ, ನ್ಯಾಯಾಲಯಗಳಾಗಿದ್ದವು.

ದೇವಾಲಯಗಳಲ್ಲಿ ನೈತಿಕ ಶಿಕ್ಷಣದ ಪಾಠಗಳು, ಜೀವನವು ಧರ್ಮಮಾರ್ಗದಲ್ಲಿ ಹೇಗೆ ಸಾಗಬೇಕೆಂಬ ಅರಿವು ಅಲ್ಲಿ ದೊರೆಯುತ್ತಿತ್ತು. ಹಿಂದಿನ ಶಿಕ್ಷಣದಲ್ಲಿ ಬರಹ, ಓದು ಇವುಗಳಿಗೆ ಪ್ರಾಮುಖ್ಯತೆ ಇರಲಿಲ್ಲ. ಇಂದಿನಂತೆ ಮುದ್ರಣ ಕ್ರಾಂತಿ ಇಲ್ಲದಿದ್ದುದು ಇದಕ್ಕೊಂದು ಕಾರಣ. ಎಲ್ಲವನ್ನು ರೂಢಿಯಲ್ಲಿ, ಅನುಷ್ಠಾನದಲ್ಲಿ ಪಾಲಿಸುತ್ತಿದ್ದರು. ಧಾರ್ಮಿಕ ವಿದ್ಯೆಯೇ ಪ್ರಧಾನವಾಗಿತ್ತು. ಹೀಗಾಗಿ ದೇವಾಲಯವು ವಿದ್ಯಾಲಯವೂ ಆಯಿತು. ಹಾಗೆಯೇ ದೇವರ ಪ್ರಸಾದ, ಪ್ರಾರ್ಥನೆ, ಆಶೀರ್ವಾದ, ಹರಕೆ, ಸೇವೆ, ಗಂಧಪ್ರಸಾದ, ತೀರ್ಥ ಇವುಗಳೇ ಔಷಧಗಳಾಗಿ ಪರಿಣಮಿಸುತ್ತಿದ್ದವು. ಅರ್ಚಕರು ಮಂತ್ರಮಾಡಿ ಕಟ್ಟುವ ದಾರ–ಭಸ್ಮಗಳೇ ಎಷ್ಟೋ ಸಂದರ್ಭದಲ್ಲಿ ಕಾಯಿಲೆಯ ಔಷಧಿಗಳಾಗಿದ್ದವು. ವಿವಿಧ ಹಬ್ಬಗಳಂದು ಸೇವಿಸಲ್ಪಡುವ ಸಸ್ಯಮೂಲ ಔಷಧಿಗಳು ರೋಗನಿರೋಧಕ ಶಕ್ತಿ ನೀಡುತ್ತಿದ್ದವು. ಪ್ರಸಾದಗಳು ಆರೋಗ್ಯವರ್ಧಕಗಳೇ ಎಂಬುದು ವೈಜ್ಞಾನಿಕ ಸತ್ಯ. ವಾದ–ವಿವಾದ, ಜಗಳ, ಆಸ್ತಿ, ಬದುಕಿನ ವ್ಯಾಜ್ಯಗಳು ಇಂದಿಗೂ ಕೆಲ ದೇವಾಲಯಗಳಲ್ಲಿ ಇತ್ಯರ್ಥವಾಗುವ ಪದ್ಧತಿ ಇದೆ. ಹಿಂದೆ ಊರ ವ್ಯಾಜ್ಯಗಳ ತೀರ್ಮಾನಗಳು ದೇವರ ಸನ್ನಿಧಿಯಲ್ಲಿ ಬಗೆಹರಿಯುತ್ತಿದ್ದವು. ಪ್ರಮಾಣ, ಹರಕೆ ಇತ್ಯಾದಿಗಳು ನ್ಯಾಯ ತೀರ್ಮಾನದ ಭಾಗಗಳಾಗಿದ್ದವು.

ಹೀಗೆ ದೇವಾಲಯಗಳೆಂದರೆ ಊರ ಜನರ ಸಂಸ್ಕಾರ ಕೇಂದ್ರ. ಊರ ಜನರೆಲ್ಲ ಒಟ್ಟು ಸೇರುವ, ಐಕ್ಯತೆ ಉಳಿಸಿಕೊಳ್ಳುವ, ಮಾನಸಿಕ ಸಂತೋಷ ಕಂಡುಕೊಳ್ಳುವ ಶ್ರದ್ಧಾಕೇಂದ್ರಗಳಾಗಿದ್ದವು. ಹಬ್ಬ–ಹರಿದಿನಗಳು ಎಲ್ಲರೂ ಸೇರಿ ಅಲ್ಲಿ ಆಚರಿಸಲ್ಪಡುತ್ತಿದ್ದವು. ಎಲ್ಲಾ ವ್ರತಗಳಲ್ಲಿಯೂ ಅವುಗಳದ್ದೇ ಆದ ವೈಶಿಷ್ಟ್ಯಗಳಿದ್ದವು. ಒಟ್ಟಿನಲ್ಲಿ ದೇವಾಲಯಗಳೆಂದರೆ ದೈಹಿಕ, ಮಾನಸಿಕ, ಸಾಮಾಜಿಕ, ಕೌಟುಂಬಿಕ ಪರಿಶುದ್ಧತೆ ಮೂಡಿಸಬಲ್ಲ ಕೇಂದ್ರಗಳು, ಸಂಸ್ಕಾರ ಕೇಂದ್ರಗಳು. ಅಹಂ ಮತ್ತು ಕಾಮಕ್ರೋಧಾದಿಗಳನ್ನು ತೊರೆದು ಸತ್ಯ, ತ್ಯಾಗ, ಅಹಿಂಸೆ, ಸಹನೆ ಮೂಡಿಸುವ ಪವಿತ್ರ ಶ್ರದ್ಧಾ ಕೇಂದ್ರಗಳು.

**–ಸಂಪಾದಕರು.**



ಅಹಮ್ಮದ್ ನಗರ (ಮಹಾರಾಷ್ಟ್ರ) – ಇದು ಕೈಮಗ್ಗ ಮತ್ತು ಸಣ್ಣ ಕೈಗಾರಿಕೆಗೆ ಪ್ರಸಿದ್ಧ.

ವಕಾಲತ್...

# ಜೈವಿಕ ತಂದೆ (Biological Father)

ಲೇ: ನಾಗರಾಜ ನಾಯಕ.

Borned to mother is reality, Borned to Father is belief. ತಾಯಿಗೆ ಹುಟ್ಟಿದ್ದು ಸತ್ಯ, ಆದರೆ ತಂದೆಗೆ ಹುಟ್ಟಿದ್ದು ನಂಬಿಕೆ. ತಾಯಿ ಹೇಳಿದ್ದರಿಂದಲೋ ಅಥವಾ ತಾಯಿ ಆ ರೀತಿ ನಡೆದು ಕೊಂಡಿದ್ದರಿಂದಲೋ ತಂದೆಗೆ ಮಾನ್ಯತೆ ನೀಡುವುದು.

ಈ ಹುಟ್ಟೇ ಹಾಗೇ. ಹುಟ್ಟಿನ ಕುರಿತು ಎಷ್ಟೆಲ್ಲಾ ತಲೆ ಕೆಡಿಸಿಕೊಳ್ಳುವ ಜನ ಇಲ್ಲ! ಅವನು ಅಪ್ಪನಿಗೆ ಹುಟ್ಟಿದ್ದು ಅಲ್ಲವಂತೆ ಎಂದು ಹೇಳುವ, ಹಾಗೇ ಹೇಳಿ ಸಂತೋಷ ಪಡುವ ಜನರಿಗೆ ಎಷ್ಟೊಂದು Confidence ತಮ್ಮ ಹುಟ್ಟಿನ ಬಗ್ಗೆ! ಹಾಗೆ ನೊಡಿದರೆ, ಮಹಾನ್ ಪುರುಷರ ಹುಟ್ಟುಗಳೆಲ್ಲಾ ವಿವಾದಾತ್ಮಕವೇ. 'ವಾಲೀ–ಸುಗ್ರೀವ' ತಾಳ ಮದ್ದಲೆಯಲ್ಲಿ ಒಮ್ಮೆ ವಾಲಿಯ ಪಾತ್ರ ವಹಿಸಿದವನೊಬ್ಬ, ರಾಮನ ಪಾತ್ರ ವಹಿಸಿದವನನ್ನು ಉದ್ದೇಶಿಸಿ, 'ಅಯ್ಯಾ ರಾಮ! ನಿಜವಾಗಿ ಹೇಳು, ನೀನು ಹುಟ್ಟಿದ್ದು ದಶರಥನಿಗೋ ಅಥವಾ ಪಾಯಸಕ್ಕೋ' ಎಂದು ಬಿಡುವುದೇ? ಯಾಕೆಂದರೆ, 'ವಾಲಿ–ಸುಗ್ರೀವ' ಪ್ರಸಂಗದಲ್ಲಿ ರಾಮನ ಬಾಣದಿಂದ ಘಾಸಿಗೊಳಗಾದ ವಾಲಿಯು, 'ನೀನೇ ದಶರಥನೆಂಬ ರಾಜನ ಸೂನು...' ಎಂದು ಜರೆಯುವ ಪದ್ಯವಿದೆ. ಬೃಹಸ್ಪತ್ಯಾಚಾರ್ಯ ಎಂಬ ತನ್ನ ಗುರುವಿನ ಮಡದಿಯನ್ನು ಚಂದ್ರ ಸೇರಿದ್ದರಿಂದಲೇ ಅಲ್ಲವೇ ಬುಧ ಜನಿಸಿದ್ದು. ಕೌರವನಂತೂ ಪಾಂಡವರು ತಮ್ಮ ವಂಶಜರಲ್ಲ ಎಂಬ ಕಾರಣದಿಂದಲೇ ಅವರಿಗೆ ರಾಜ್ಯ ಕೊಡಬಾರದು ಎಂಬ ಹಗೆ ಬೆಳೆಸಿಕೊಂಡಿದ್ದ ಎಂಬುದು ಕೆಲ ಮಹಾಭಾರತ ವಿಶ್ಲೇಷಕರ ಅಭಿಪ್ರಾಯ. ಹಾಗೆ ನೋಡಿದರೆ ಕೌರವನ ತಂದೆ ಧೃತರಾಷ್ಟ್ರನ ಹುಟ್ಟೂ ಸಹ ವಿಚಿತ್ರವೀರ್ಯನಿಂದ ಆದುದ್ದಲ್ಲ. ಬದಲಿಗೆ ವೇದವ್ಯಾಸರಿಂದ ಆದದ್ದು. ಕೇವಲ ಮಕ್ಕಳಿಗಾಗಿ (ಕಾಮಕ್ಕಾಗಿ ಅಲ್ಲ) ಇನ್ನೊಬ್ಬ ಗಂಡಸುವನ್ನು ಕೂಡುವುದಕ್ಕೆ 'ನಿಯೋಗ' ಎಂದು ಹೆಸರಿಟ್ಟರು.

ಏಸುಕ್ರಿಸ್ತನ ತಾಯಿಯ ಹೆಸರು ಮೇರಿ. ಜೋಸೆಫ್ ಎನ್ನುವವನ ಜೊತೆ ಅವಳ ಮದುವೆಯ ನಿಶ್ಚಯವಾಯಿತು. ಆದರೆ ಮದುವೆಯ ಮೊದಲೇ ಅವಳ ಹೊಟ್ಟೆಯಲ್ಲಿ ಮಗುವೊಂದು ಬೆಳೆಯುವುದು ಅರಿವಾಯಿತು. ಇದರಿಂದ ಮದುವೆ ಮುರಿದುಕೊಳ್ಳುವ ನಿರ್ಧಾರಕ್ಕೆ ಜೋಸೆಫ್ ಬಂದಾಗ, ದೇವರಿಂದ ನಿಜಸ್ಥಿತಿಯ ಅರಿವಾಗಿ, ಮೇರಿಯ ಹೊಟ್ಟೆಯಲ್ಲಿ ಬೆಳೆಯುವ ಮಗು ದೇವರದೆಂದು ತಿಳಿಯಿತು. ಆದರೆ ಸಮಾಜದ ದೃಷ್ಟಿಯಲ್ಲಿ ಕ್ರಿಸ್ತನಿಗೆ ಜೋಸಫ್ ತಂದೆಯಾಗಿದ್ದ.

ಗತಕಾಲದಿಂದಲೂ ಹುಟ್ಟಿನ ಕುರಿತು ಬಹಳಷ್ಟು ವಿವಾದಗಳು ನಡೆದೇ ಇವೆ. ಇಂದಿನ ದಿನಗಳಲ್ಲಿಯೂ ಸಹ ಅನೇಕ ಪ್ರಕರಣಗಳಲ್ಲಿ ಆ ಮಗು ತನ್ನದಲ್ಲ, ತನಗೆ ಹುಟ್ಟಿದ್ದಲ್ಲ ಎಂದು ನ್ಯಾಯಾಲಯಗಳಲ್ಲಿ ಹೋರಾಟ ನಡೆದಿರುತ್ತದೆ. ಭಾರತೀಯ ಸಾಕ್ಷ್ಯ ಅದಿನಿಯಮ (Evidence Act) ಕಲಂ 112 ರಲ್ಲಿ ಕಾನೂನು ಸಮ್ಮತ ವೈವಾಹಿಕ ಸಂಬಂಧ ಮತ್ತು ಆ ಸಂಬಂಧ ಮುಂದುವರೆಯುತ್ತಿರುವಾಗ ಅಥವಾ ವಿವಾಹ ವಿಘಟಿತವಾದ ತರುವಾಯ 280 ದಿವಸಗಳೊಳಗೆ ಜನಿಸಿದ ಮಕ್ಕಳು ಕಾನೂನು ಸಮ್ಮತವಾದ ಮಕ್ಕಳು ಎಂದು ಪೂರ್ವಭಾವನೆ ಮಾಡಬೇಕು. ಮತ್ತು ಆ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದ್ದು ಎಂದು ಹೇಳಲಾಗಿದೆ. ಈ ಕಲಂ ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಮಾಡಲಾಗಿದೆ. ಲಗ್ನವಾದ ನಂತರ ಗಂಡ ಹೆಂಡತಿ ಕೂಡಿ ಒಂದೇ ಮನೆಯಲ್ಲಿರಬಹುದು. ಅಥವಾ ಬೇರೆ ಬೇರೆ ಊರುಗಳಲ್ಲಿರಬಹುದು. ಆದರೆ ಒಬ್ಬರಿಗೊಬ್ಬರು ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಾರೆ ಎಂದೇ ಪೂರ್ವಭಾವನೆ ಮಾಡಬೇಕಾಗುತ್ತದೆ. ಯಾಕೆಂದರೆ ಲೈಂಗಿಕ ಸಂಪರ್ಕ ಬೇರೆ ಯಾರದೇ ಎದುರಿನಲ್ಲಿ ಮಾಡಲು ಸಾಧ್ಯವಿಲ್ಲ. ಲೈಂಗಿಕ ಸಂಪರ್ಕ ಹೊಂದಿರಲಿಲ್ಲ ಎಂದು ಸಿದ್ಧ ಪಡಿಸುವ ಜವಾಬ್ದಾರಿ ಗಂಡನ ಮೇಲಿರುತ್ತದೆ.

ನ್ಯಾಯಾಲಯಗಳು ಯಾವುದೇ ವ್ಯಕ್ತಿಯನ್ನು ರಕ್ತಪರೀಕ್ಷೆಗೆ ಒಳಗಾಗುವಂತೆ ಒತ್ತಾಯಿಸುವಂತಿಲ್ಲ. ರಕ್ತ ಪರೀಕ್ಷೆಗೆ ನಿರ್ದೇಶಿಸುವಾಗ ರಕ್ತ ಪರೀಕ್ಷೆಯಿಂದಾಗುವ ಪರಿಣಾಮಗಳ ಕುರಿತು ನ್ಯಾಯಾಲಯ ವಿವೇಚಿಸಬೇಕಾಗುತ್ತದೆ. ಮಗುವನ್ನು ಹಾದರಕ್ಕೆ ಹುಟ್ಟಿದ್ದು (Basterd), ತಾಯಿಯನ್ನು ಹಾದರಗಿತ್ತಿ ಎಂದು ರಕ್ತಪರೀಕ್ಷೆಗಳು ಹಣೆಪಟ್ಟಿ ಕಟ್ಟುವದುಂಟು. ಯಾವುದೇ ಪಾಪವನ್ನು ಮಾಡದ ಮಗುವಿಗೆ Basterd ಪಟ್ಟವನ್ನು ಕಟ್ಟುವುದರಲ್ಲಿ ಮತ್ತು ಆ ಮೂಲಕ ಅವನ ಭವಿಷ್ಯ ಹಾಳು ಮಾಡುವುದನ್ನು ತಪ್ಪಿಸಲು ಕಲಂ 112ನ್ನು ರೂಪಿಸಲಾಗಿದೆ. ರಕ್ತ ಪರೀಕ್ಷೆಯೂ ಸಹ ಇತರ ತಜ್ಞರ ಸಾಕ್ಷಿಯಂತೆ ಪರಿಪೂರ್ಣವಾದುದು ಮತ್ತು ನಿರ್ಣಾಯಕವಾದುದು ಎಂದು ಹೇಳಲಾಗದು ಎಂದು ಮದ್ರಾಸ್ ಉಚ್ಚ ನ್ಯಾಯಾಲಯ AIR 1959 Mad.356 ರಲ್ಲಿ ಅಭಿಪ್ರಾಯ ಪಟ್ಟಿದೆ. ಒಬ್ಬ ತಾಯಿಗೆ ಹುಟ್ಟಿದ ಅವಳಿ ಮಕ್ಕಳು ಬೇರೆ ಬೇರೆ ತಂದೆಗೆ ಹುಟ್ಟಿದ್ದು ಎಂದು ರಕ್ತ ಪರೀಕ್ಷಾ ವರದಿಗಳು ತೋರಿಸಿದ ನಿದರ್ಶನವಿದೆ. ಇದನ್ನು ಸೃಷ್ಟಿಯ ವೈಚಿತ್ರವೆನ್ನುವದೋ ಅಥವಾ ಪರೀಕ್ಷಾ ವಿಧಾನದ ಲೋಪವೆನ್ನುವುದೋ?

ಈ ಜೈವಿಕ ತಂದೆ ಮತ್ತು ತಾಯಿಯ ಗಂಡ (Presumed Father) ಇವರಲ್ಲಿ ನಿಜವಾದ ತಂದೆ ಯಾರಾಗುತ್ತಾರೆ ಎಂಬ ಬಗ್ಗೆ 9–3–2004 ರಂದು ಕ್ಯಾಲಿಫೋರ್ನಿಯಾದ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಜೆಸುಸಾ ಎಂಬ ಮಗುವಿನ ತಾಯಿಗೆ ಹೆರಿಬೆರ್ಟೋ ಎಂಬುವವ ಹೊಡೆದು ಬಡೆದು ಅತ್ಯಾಚಾರ ಮಾಡುತ್ತಾನೆ. ಈ ಅತ್ಯಾಚಾರದಿಂದ ಜೆಸುಸಾ ಇವಳ ಜನನವಾಗುತ್ತದೆ. ಆದರೆ ಜೆಸುಸಾಳ ತಾಯಿ ಅತ್ಯಾಚಾರದ ಸಮಯದಲ್ಲಿ ಫೌಲ್ ಎನ್ನುವವನನ್ನು ಮದುವೆಯಾಗಿರುತ್ತಾಳೆ.

ಜೆಸುಸಾಳು ತನ್ನ ಅತ್ಯಾಚಾರದಿಂದಲೇ ಹುಟ್ಟಿದ ಮಗು ಎಂದು ಒಪ್ಪಿಕೊಂಡ ಹೆರಿಬೆರ್ಟೋ ತಾನೇ ಜೆಸುಸಾಳ ತಂದೆಯೆಂದು ನ್ಯಾಯಾಲಯ ಘೋಷಣೆ ನೀಡಬೇಕು ಎಂಬುದಾಗಿ ವಾದಿಸುತ್ತಾನೆ. ಜೆಸುಸಾಳ ತಾಯಿಯ ಗಂಡ ತಾನಾಗಿದ್ದರಿಂದ ತನ್ನನ್ನೇ ಜೆಸುಸಾಳ ತಂದೆಯೆಂದು ಘೋಷಿಸಬೇಕು ಎಂದು ಫೌಲ್ ವಾದವಿಡುತ್ತಾನೆ. ಹೆರಿಬೆರ್ಟೋನ ವೀರ್ಯದಿಂದ ಜೆಸುಸಾಳ ಜನನ. ಆದರೆ ಜೆಸುಸಾಳ ತಾಯಿಯ ಗಂಡನಲ್ಲ. ಫೌಲ್ ಜೆಸುಸಾಳ ತಾಯಿಯ ಗಂಡ, ಆದರೆ ಆತನ ವೀರ್ಯದಿಂದ ಜೆಸುಸಾ ಜನಿಸಿದ್ದಲ್ಲ. ಅಂದ ಮೇಲೆ ಪಿತೃತ್ವ (Fatherhood) ನಿರ್ಧರಿಸುವುದು ಹೇಗೆ? ನಮ್ಮ ಸಾಕ್ಷ್ಯ ಅದಿನಿಯಮ ಕಲಂ 112 ರ ಪ್ರಕಾರದ ಕ್ಯಾಲಿಫೋರ್ನಿಯಾ ಕಾಯಿದೆಯಂತೆ ಫೌಲನನ್ನೇ ಜೆಸುಸಾಳ ನಿಜವಾದ ತಂದೆಯೆಂದು ಘೋಷಿಸಲಾಯಿತು. ಹೆರಿಬೆರ್ಟೋ ಎಂಬ ಜೈವಿಕ ತಂದೆ ತನ್ನ ಸ್ಥಾನ ಕಳೆದುಕೊಂಡ.

ಹೇಗೆ ಹುಟ್ಟಿದ ಎಂಬುದಕ್ಕಿಂತ ಹೇಗೆ ಬದುಕಿದೆ ಎನ್ನುವುದು ಮುಖ್ಯ. ರಾಜನಿಗೆ ಹುಟ್ಟಿ ನಾಯಿಯಂತೆ ಬದುಕಿದರೆ ಪ್ರಯೋಜನವೇನು? ಹುಟ್ಟಿನ ಮೇಲೆ ವ್ಯಕ್ತಿಯ ಅರ್ಹತೆ ಅಳೆಯುವುದಲ್ಲ. ಹೇಗೆ ಅತ್ಯಾಚಾರದಿಂದ, ಹಾದರದಿಂದ ಹುಟ್ಟಿದ ಮಕ್ಕಳ ಕುರಿತು ತಿರಸ್ಕಾರಕ್ಕಿಂತ ಅನುಕಂಪ ತೋರಿಸುವುದು ಮುಖ್ಯ. ಯಾರ್ಯಾರಿಗೋ ಹುಟ್ಟಿದ ಪಾಂಡವರೇ ಮಹಾಭಾರತ ಗೆದ್ದದ್ದು!

ಆಚಾರ–ವಿಚಾರ...

# ಭಕ್ತಿ–ಮುಕ್ತಿ

**–ಲೇ: ರಸಿಕ ಪುತ್ತಿಗೆ**

'ಮುಕ್ತಿಃ ನೈಜಸುಖಾನುಭೂತಿಃ ಅಮಲಾ ಭಕ್ತಿಶ್ಚ ತತ್ ಸಾಧನಂ' ಎಂದು ಮಧ್ವಾಚಾರ್ಯರು ತಮ್ಮ ಮತದ ಸೂತ್ರ ಹೇಳುತ್ತ ತಿಳಿಸಿದರು. ಅಂದರೆ ನಿಜವಾದ ಸುಖದ ಅನುಭೂತಿ ಮುಕ್ತಿ. ಅದನ್ನು ಪಡೆಯುವ ಸಾಧನ ನಿರ್ಮಲವಾದ ಭಕ್ತಿ ಎಂದು. ಈ ಮಾತನ್ನು ಸುಲಭವಾಗಿ ವಿವರಿಸಲು ಸಾಧ್ಯವಿಲ್ಲ. ಆದರೂ ಪ್ರಯತ್ನ ಮಾಡುವ ನೈಜಸುಖದ ಅನುಭೂತಿ ಮುಕ್ತಿ ಎಂದರಲ್ಲ? ಹಾಗೆಂದರೇನು? ಸುಖದಲ್ಲಿ ನೈಜಸುಖ–ಕೃತಕಸುಖ ಅಂತ ಇದೆಯೇ? ಸುಖದ ಅನುಭೂತಿ ಅಂದರಲ್ಲ? ಅದು ಹೇಗೆ?

ಅಂದದ ಅರಮನೆ, ಅಂದಣ, ಅಲಂಕಾರ, ಆಸನ, ಅಧಿಕಾರ, ಅರಸೊತ್ತಿಗೆ ಇವೆಲ್ಲ ಸುಖವೆಂದು ನಾವು ತಿಳಿದಿದ್ದೇವೆ. ನಿಜ ಹಾಗಲ್ಲ. ಇವೆಲ್ಲ ಕೃತಕ. ಇಂದು ಇದ್ದು ನಾಳೆ ಇಲ್ಲವಾಗುವಂಥವು. ಸುಂದರಿಯಾದ ಹೆಂಡತಿ ಮುದುಕಿಯಾದಾಗ ಕುರೂಪಿಯಾಗಬಹುದು. ಅಪಘಾತದಲ್ಲಿ ಹಲ್ಲು ಉದುರಿ ಹೋಗಬಹುದು. ನಮ್ಮ ಮಾರ ಸುಕುಮಾರ ಶರೀರ ಖಾಯಿಲೆಯಿಂದ ಕಜ್ಜಿಯ ಭಂಡಾರವಾಗಬಹುದು. ಇಂಥ ಕೃತಕ ಸುಖವೆಲ್ಲ ದುಃಖಕ್ಕೆ ಕಾರಣ. ಅವೆಲ್ಲ ನೈಜಸುಖ ಅಲ್ಲ.

ತುಂಬ ದಣಿದು ಬಂದಿದ್ದೇವೆ. ಒಂದು ಮರದಡಿ ಕುಳಿತಿದ್ದೇವೆ. ತಂಪುಗಾಳಿ ಬೀಸುತ್ತದೆ. 'ಹಾಯ್' ಎನಿಸುತ್ತದೆ. ಅದು ನೈಜಸುಖ, ತುಂಬ ಹಸಿವಾಗಿದೆ. ಉಣ್ಣಲು ಬಿಸಿಬಿಸಿ ಗಂಜಿ ಸಿಗುತ್ತದೆ–'ಹಾಯ್' ಅನ್ನಿಸುತ್ತದೆ–ಅದು ಸುಖ. ಒಂದು ಸುಂದರವಾದ ಹೂವು ಅರಳಿದೆ, ನೋಡುತ್ತೇವೆ. 'ಆಹ್' ಅನ್ನಿಸುತ್ತದೆ–ಅದು ಸುಖ. ಭಾರೀ ಆಪತ್ತು ಇದಿರಿಗಿದೆ. ಪಕ್ಕನೆ ಪಾರಾಗುತ್ತೇವೆ, 'ಆಹಾ' ಅನ್ನುತ್ತೇವೆ, ಅದು ಸುಖ ನಮ್ಮ ಕೈಯಲ್ಲಿ ಎರಡು ಬಾಳೆಹಣ್ಣು ಇದೆ–ಒಂದು ಮಗು ಕೈ ಚಾಚುತ್ತದೆ. ಒಂದು ಕೊಡುತ್ತೇವೆ–ಅದನ್ನು ಪಡೆದು ಅದು ನಗುತ್ತದೆ. ನಮಗೆ 'ಖುಶಿ' ಆಗುತ್ತದೆ. ಅದು ಸುಖ. ಒಬ್ಬ ಮನುಷ್ಯ ನೀರಿನಲ್ಲಿ ಮುಳುಗುತ್ತಿದ್ದಾನೆ. ನಾವು ನೀರಿಗೆ ಧುಮುಕಿ ಆತನನ್ನು ಎತ್ತುತ್ತೇವೆ. ಆತ ಬದುಕಿದ. ಆಗ ನಮಗೆ ದೊರೆಯುವುದು ಸುಖ. ದಿನವಿಡೀ ದುಡಿದು ಮಲಗುತ್ತೇವೆ. ಗಾಢನಿದ್ರೆ ಬರುತ್ತದೆ. ಎಚ್ಚರವಾದಾಗ ಸೂರ್ಯ ಮೂಡುತ್ತಿರುತ್ತಾನೆ. 'ಹಾ' ಅನ್ನಿಸುತ್ತದೆ. ಅದು ಸುಖ. ಹೀಗೆ ಅಪ್ರತ್ಯಾಶಿತವಾಗಿ ನಾವು ಬಯಸದೇ ಬರುವ ನೆಮ್ಮದಿ ಸುಖ. ಆ ಸುಖದ ಸವಿ ಸುಖದ ಅನುಭೂತಿ. ಇದೇ ಕ್ರಮದಲ್ಲಿ ದೇವರ ದಯೆ, ದೇವರ ಸರ್ವಶಕ್ತಿತ್ವಗಳ ಅನ್ನಿಸಿಕೆಯೂ ನೈಜಸುಖದ ಅನುಭೂತಿ. ಅದು ಮನುಷ್ಯನನ್ನು ಈ ಜಗತ್ತಿನ ಜಂಜಡದಿಂದ ಕ್ಷಣಕಾಲ ಮುಕ್ತನನ್ನಾಗಿಸುತ್ತದೆ. ಈ ಕ್ಷಣ ಕಾಲಗಳು ಬೆಳೆದು ನಂತರ ಶಾಶ್ವತ ಮುಕ್ತಿಗೆ ದಾರಿ ಮಾಡುತ್ತವೆ.

ಇಂಥ ಮುಕ್ತಿ–ಬಿಡುಗಡೆ–ಯನ್ನು ಪಡೆಯಲು 'ಭಕ್ತಿ' ಸಾಧನವಾಗುತ್ತದೆ ಎಂದರು ಆಚಾರ್ಯರು. ಆದರೆ ಆ ಭಕ್ತಿಯು ನಿರ್ಮಲವಾಗಿರಬೇಕು ಎಂಬ ಒಂದು ನಿಬಂಧನೆ ಹಾಕಿದರು. ನಿರ್ಮಲವಾದುದು ನಿಶ್ಚಲವಾಗಿರುತ್ತದೆ. ನಿಶ್ಚಲವಾಗಿರಬೇಕು. ಆಗ ಮಾತ್ರ ಅದು 'ಮಲ' ರಹಿತವಾಗಿರುವುದು ಸಾಧ್ಯ. ನಿಶ್ಚಲ ಭಕ್ತಿ ಎಂದರೆ ಹೇಗೆ? ದ್ರೌಪದಿಯ ಸೀರೆ ಸೆಳೆವ ಪ್ರಸಂಗದಲ್ಲಿ ಆಕೆ ಆಸ್ಥಾನದ ಹಿರಿಯರ ಕಡೆ ನೋಡಿ ಕೂಗಿ ಕೂಗಿ ಮೊರೆ ಇಡುತ್ತ ಒಂದು ಕೈಯಿಂದ ಸೆರಗು ಹಿಡಿದುಕೊಂಡು ಕೂಗುತ್ತಿದ್ದಳು. ಯಾರೂ ಕಾಪಾಡಲಿಲ್ಲ. ನಂತರ ಶ್ರೀಕೃಷ್ಣನ್ನನು ಕರೆಯುತ್ತ ಎರಡೂ ಕೈಗಳನ್ನು ಬಿಟುನಿಂತಳು. 'ದೇವರೇ ಕಾಪಾಡು'–ಎಂದು ನಿರ್ಮಲ ಭಕ್ತಿಯಿಂದ ಕೂಗಿದಳು. ಶ್ರೀಕೃಷ್ಣನ ಅನುಗ್ರಹದಿಂದ ಅವಳ ಸೀರೆ ಅಕ್ಷಯವಾಯಿತು. ಈ ರೀತಿಯ ನಿಶ್ಚಲ–ಅನನ್ಯ, ನಿರ್ಮಲ ಭಕ್ತಿ ಅಗತ್ಯ. ಆಗ ಸುಖದ ಅನುಭೂತಿ ಉಂಟಾಗುತ್ತದೆ.



ಭಾಕ್ರಾ (ಪಂಜಾಬ್) – ಒಂದು ಹಳ್ಳಿ. ಇಲ್ಲಿಯೇ ಸತ್ಲಜ್ ನದಿಗೆ ಅಣೆಕಟ್ಟು ಕಟ್ಟಲಾಗಿದೆ.

'ಅನ್ಯಥ ಶರಣಂ ನಾಸ್ತಿ, ತ್ವಮೇವ ಶರಣಂ ಮಮ. ತಸ್ಮಾತ್ ಕಾರುಣ್ಯ ಭಾವೇನ ರಕ್ಷ ರಕ್ಷ ಜನಾರ್ಧನ' ಎಂಬ ಒಂದು ನಮಸ್ಕಾರಕಾಲದ ಪ್ರಾರ್ಥನೆ ಇದೆ. 'ಬೇರೆ ಆಶ್ರಯವಿಲ್ಲ. ನೀನೇ ಗತಿ. ಹಾಗಾಗಿ ಕರುಣೆ'ಯಿಂದ ನನ್ನನ್ನು ರಕ್ಷಿಸು' ಎಂದರ್ಥ, ಈ ಅನನ್ಯ ಶರಣತ್ವದ ಭಕ್ತಿಯೇ ಮುಕ್ತಿಯ ನೈಜ ಸುಖಾನುಭೂತಿಯ ಸಾಧನ, ನಮ್ಮ ನಂಬಿಕೆ ಬಲವಾಗಿದ್ದರೆ ದೇವರ ದಯೆ ತಪ್ಪದೆ ಇರುತ್ತದೆ. ಒಂದಿಷ್ಟು ತಡವಾಗಬಹುದು, ಹಾಗೆಂದು ತಪ್ಪಿ ಹೋಗುವುದು ಖಂಡಿತ ಸಾಧ್ಯವಿಲ್ಲ.

ಚಿಂತನ–ಮಂಥನ...

# ಹಿತಶತ್ರುಗಳು

**–ಲೇ: ಪ್ರೊ.ವಿಷ್ಣು ಜೋಶಿ.**

"ಮಧು ತಿಷ್ಠತಿ ಜಿಹ್ವಾಗ್ರೇ ಹೃದಯೇತು ಹಲಾ ಹಲಃ"– ನಾಲಿಗೆಯ ಮೇಲೆ ಜೇನು ಹೃದಯದಲ್ಲಿ ವಿಷ. ಇದು ಕೇವಲ ಒಂದು ಉಕ್ತಿಯಲ್ಲ, ಜಗತ್ತಿನ ಸತ್ಯ. ಈ ಪ್ರಪಂಚದಲ್ಲಿ ಏನನ್ನಾದರೂ ಅರ್ಥಮಾಡಿಕೊಳ್ಳಬಹುದು. ಆದರೆ ಮನುಷ್ಯರನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ನಂಬಿಸಿ ಮೋಸ ಮಾಡುವುದು ಇದು ವಿಶ್ವಾಸಘಾತುಕದಲ್ಲಿಯೂ ಹೀನಾಯವಾದದ್ದು. ಆದರೆ ರಾಜಕಾರಣದಲ್ಲಿ ಏನು ಮಾಡಿದರೂ ನಡೆಯುತ್ತದೆ. ಅಲ್ಲಿ ಎಲ್ಲವೂ ಸಾಧುವಾದದ್ದೆ. ಅಲ್ಲಿ ಯಾರಿಗೂ ಯಾರೂ ಶಾಶ್ವತ ವೈರಿಗಳೂ ಅಲ್ಲ. ಶಾಶ್ವತ ಮಿತ್ರರೂ ಅಲ್ಲ. ಈ ಜಗತ್ತಿನಲ್ಲಿ ಕೆಲವರ ಪಾಲಿಗೆ ಗೆಳೆತನ ಎನ್ನುವುದೂ ಒಂದು ಒಪ್ಪಂದವಿದ್ದಂತೆ. ಇಂತಹ ವ್ಯವಹಾರ ಮೂಲವಾದ ಪ್ರಪಂಚದಲ್ಲಿ ಸರ್ವ ವಿಶ್ವಾಸವನ್ನೂ ಸಂಶಯದಿಂದಲೇ ನೋಡಬೇಕಾಗುತ್ತದೆ. ಆದರೆ ವಿಶ್ವಾಸಘಾತುಕತನ ಅಥವಾ ನಯ ವಂಚನೆಗೆ ಪಾಪಮುಗ್ಧರೇ ಬಲಿಪಶುಗಳಾಗುತ್ತಾರೆ. ಶಕುನಿ ಕೌರವನ ಮಾವ. ಆದರೆ ಅವನು ಹಿತೈಷಿಯಂತೆ ನಟಿಸಿ, ಶತ್ರುವಿನ ಕೆಲಸವನ್ನು ಅವನೇ ಮಾಡಿ ಮುಗಿಸಿಲ್ಲವೇ? ರಾಮಾಯಣದ ಮಂಥರೆಯೂ ಹಿತಶತ್ರುವೇ ಆದಳು. ಇತಿಹಾಸದಲ್ಲಿ "ಮೀರ ಸಾಧಕ್"ನನ್ನು ಮೀರಿಸಿದ ಹಿತಶತ್ರುಗಳು ಯಾರಿದ್ದಾರೆ? ಆದರೆ ಅಂದು ಒಬ್ಬ ಮೀರ ಸಾಧಕ್‌ನಿದ್ದರೆ ಇಂದು ಹೆಜ್ಜೆ–ಹೆಜ್ಜೆಗೂ ಇಂತವರು ಅನೇಕರಿದ್ದಾರೆ. ನಾವು ಎಷ್ಟು ಎಚ್ಚರಿಕೆ ವಹಿಸಿದರೂ ಸಾಲದು. "ತಸ್ಮಾತ್ ಜಾಗೃತ ಜಾಗೃತ" ಯಾಕೆಂದರೆ ಮೋಸಹೋದ ನಂತರ ಪರಿತಪಿಸುವುದಕ್ಕಿಂತ ಮೋಸಹೋಗದಂತೆ ಎಚ್ಚರಿಕೆ ವಹಿಸುವುದೇ ಸೂಕ್ತ ಮಹರ್ಷಿ ವಾಲ್ಮೀಕಿಗಳು ಇಂತಹ ಹಿತಶತ್ರುಗಳ ಬಗ್ಗೆ ಅಂದೇ ಎಚ್ಚರಿಸಿದ್ದಾರೆ. ರಾಮಾಯಣದಲ್ಲಿ ಒಂದು ಗಂಭೀರ ಸನ್ನಿವೇಶ. ಸೀತಾದೇವಿಯನ್ನು ಮರಳಿ ಶ್ರೀರಾಮಚಂದ್ರನಿಗೆ ಒಪ್ಪಿಸುವುದೇ ಸೂಕ್ತ ಎಂದು ವಿಭೀಷಣ ವಾದಿಸುತ್ತಾನೆ. ಈ ಮಾತು ವಿಕಾರವಶನಾದ ರಾವಣನಿಗೆ ಪಥ್ಯವಾಗಲಿಲ್ಲ. ವಿಭೀಷಣನಿಗೆ ಕಠೋರವಾದ ಮಾತನ್ನು ಆಡುತ್ತಾನೆ. "ವಿನಾಶ ಕಾಲೇ ವಿಪರೀತ ಬುದ್ಧಿ" ಅಲ್ಲವೇ? ವಿಭೀಷಣನಿಗೆ ನುಡಿಯುತ್ತಾನೆ:

**ವಸೇತ್ಸಹ ಸಪತ್ನೇನ ಕ್ರುದ್ಧೇನಾಶೀವಿಷೇಣ ವಾ**
**ನ ತು ಮಿತ್ರ ಪ್ರವಾದೇನ ಸಂವಸೇಚ್ಛತ್ರುಸೇವಿನಾ** (ಯುದ್ಧಕಾಂಡ, ಸರ್ಗ–16, ಶ್ಲೋಕ–2)

ಶತ್ರುಗಳ ಸಂಗಡ ವಾಸಮಾಡಬಹುದು, ಕೆರಳಿದ ಸರ್ಪದ ಸಂಗಡ ಇರಬಹುದು.
ಆದರೆ ಹಿತಶತ್ರುವಿನ ಸಂಗಡ ಇರಬಾರದು.

ಬದುಕಲೊಂದಿಷ್ಟು ಆಪ್ತಮಾತುಗಳು...

# ಸ್ವ–ಪ್ರೇರಣೆಯ ಅವಶ್ಯಕತೆ

**–ಲೇ:ಬಿ.ಎನ್.ರಮೇಶ ಬೊಂಗಾಳೆ.**
**(ಎಂ.ಎ., ಬಿ.ಇಡಿ., ಆರ್.ಬಿ.ಪಿ.)**

ಆತ್ಮಪ್ರೇರಣೆ (ಸ್ವ–ಪ್ರೇರಣೆ)ಯಲ್ಲಿ ದೊಡ್ಡ ಶಕ್ತಿಯಿದೆಯೆಂಬುದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು. ನಮ್ಮ ಮನಸ್ಸಿನಲ್ಲಿ ಯಾವಾಗಲೂ ಗೆಲುವಿನ ಸಮೃದ್ಧಿಯ ಹಾಗೂ ಉನ್ನತಿಯ ವಿಚಾರಗಳು ವಿಕಸನಗೊಳ್ಳುವಂತಹ ನಡವಳಿಕೆಯನ್ನು ನಾವು ರೂಢಿಸಿಕೊಳ್ಳಬೇಕು. ಜನರ ಬಾಯಿಯಲ್ಲಿ "ನಾವು ಅತಿ ವೇಗದಲ್ಲಿ ಉನ್ನತಿ ಹೊಂದುತ್ತಿದ್ದೇವೆ, ಮಹಾನರಾಗಲು ಹೊರಟಿದ್ದೇವೆ, ಸಮಾಜದಲ್ಲಿ ನಮ್ಮ ಮಹತ್ವ ಹೆಚ್ಚಾಗುತ್ತಿದೆ" ಎನ್ನುವ ಮಾತುಗಳು (ನಮ್ಮ ಬಗ್ಗೆ) ಪ್ರಚಲಿತವಾಗಬೇಕು. ಇದರಲ್ಲಿ ನಾವು ಸಫಲರಾದೆವೆಂದರೆ ಆ ಮಾತುಗಳೇ ಸ್ವತಃ ನಮಗೆ ಪ್ರೇರಣೆ ನೀಡುತ್ತವೆ. ಅದೊಂದು ದಿನ ಯಾವುದೋ ವ್ಯಕ್ತಿಯೋರ್ವನನ್ನು ನಾವು ಸಂಧಿಸಿದಾಗ ನಮ್ಮ ವೈಚಾರಿಕ ಪ್ರಭಾವ ಆತನ ಮೇಲಾಗತೊಡಗಿ "ತಾವಂತೂ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಲೇ ಹೋಗುತ್ತಿದ್ದೀರ" ಆಗ ನಾವು ನಿಜವಾಗಿಯೂ ಜಾಣರೆಂದುಕೊಳ್ಳಬಹುದು. ಆ ರೀತಿಯ ವಿಚಾರಗಳು ಹೊರಹೊಮ್ಮುತ್ತಿದ್ದಂತೆಯೇ ಆತ ಸ್ವತಃ ನಮಗೆ ಸಹಾಯ ಹಸ್ತ ಚಾಚಲು ಅಣಿಯಾಗುತ್ತಾನೆ.



ಭೀಮಶಂಕರ (ಮಹಾರಾಷ್ಟ್ರ) – ಮಹಾರಾಷ್ಟ್ರದಲ್ಲಿರುವ ಐದು ಜ್ಯೋತಿರ್ಲಿಂಗಗಳಲ್ಲಿ ಒಂದು.

ನಾವು ನಮ್ಮೊಳಗೆ ಕಾರ್ಯವೆಸಗುವ ಸಾಮರ್ಥ್ಯದ ವಿಕಸನವಾಗಬೇಕೆಂದೇನಾದರೂ ಬಯಸಿದ್ದರೆ ಈ ಕೂಡಲೇ ನಮ್ಮ ಮನಸ್ಸನ್ನು ಚಿಂತೆ, ದ್ವೇಷ ಮತ್ತು ಅಂಜಿಕೆಗಳಂತಹ ತೊಡರುಗಳಿಂದ ಮುಕ್ತವಾಗಿರಿಸಬೇಕು. ಅವುಗಳ ಕತ್ತನ್ನು ಹಿಡಿದು ಹೊರದಬ್ಬಬೇಕು. ಇದರಲ್ಲಿ ನಾವು ಸೋತೆವೆಂದರೆ ನಮ್ಮಲ್ಲಿ ಏನೊಂದೂ ಉಳಿದಿರುವುದಿಲ್ಲ. ಅಸೂಯೆ ಮತ್ತು ದ್ವೇಷ ಮನುಷ್ಯನ ಮನಸ್ಸನ್ನು ಹೆಚ್ಚು ವಿಷಕಾರಿಯನ್ನಾಗಿಸುತ್ತವೆ. ದ್ವೇಷದ ಕಾರಣದಿಂದ ಕೋಟ್ಯಾಂತರ ಮಂದಿಯನ್ನು ಹತ್ಯೆಗೈಯ್ದ, ದೊಡ್ಡ-ದೊಡ್ಡ ಮೇಧಾವಿಗಳು ಮತ್ತು ಸಮರ್ಥರು, ಇಹಲೋಕ ತ್ಯಜಿಸಿದ, ರಕ್ತದ ಹೊಳೆ ಹರಿದ, ಸಹೋದರರೇ ಪರಸ್ಪರ ಶತ್ರುಗಳಾದ, ರಾಷ್ಟ್ರಗಳು ಮಣ್ಣು ಪಾಲಾದ ಅನೇಕ ಉದಾಹರಣೆಗಳು ಇರಿಹಾಸದ ಪುಟಗಳಲ್ಲಿರುವುದೇ ಅದಕ್ಕೆ ಸಾಕ್ಷಿಯಾಗಿದೆ.

ಸಮಾಜದ ಅಗತ್ಯತೆಗಳನ್ನು ಗಮನಿಸಿಯೂ ನಾವು ಸ್ವಯಂ ಪ್ರೇರಣೆಯಿಂದ ಅವುಗಳನ್ನು ಪೂರ್ಣಗೊಳಿಸುವತ್ತ ಹೆಜ್ಜೆಗಳನ್ನಿರಿಸಬಹುದು. ಉದಾಹರಣೆಗೆ-ರಕ್ತದಾನ ಶಿಬಿರಗಳಲ್ಲಿ ಭಾಗವಹಿಸುವುದು, ಏಡ್ಸ್ ಕುರಿತಾದ ಭೀಕರತೆಯ ಬಗ್ಗೆ ಜಾಗೃತಿ ಮೂಡಿಸುವುದು, ಸಾಕ್ಷರ ಜಾಥಾಗಳಲ್ಲಿ ಪಾಲ್ಗೊಳ್ಳುವುದು, ಪರಿಸರದ ಕಾಳಜಿ ಮೂಡಿಸುವುದು ಇತ್ಯಾದಿ.

---

ಸಂದೇಶ ಸನ್ನಿಧಿ...

# ಮನದೊಡತಿ-ಮನೆಯೊಡತಿ

**-ಲೇ: ಸಂದೀಪ.ಎಸ್.ಭಟ್**

ಮನೆಗೊಬ್ಬಳು ಮನೆಯಾಕೆ ಬೇಕು. ಮನದಾಕೆ ಬೇಕು. ವಾತ್ಸಲ್ಯ, ಪ್ರೇಮ, ಪ್ರೀತಿ, ಕಾಳಜಿಗಳ ಮತ್ತೊಂದು ಹೆಸರೇ ಗೃಹಿಣಿಯಲ್ಲವೆ?! ಗೃಹಿಣಿಯಿಂದಲೇ ಅದು ಗೃಹ ಎಂದು ಕರೆಸಿಕೊಳ್ಳುವುದು. "ನ ಗೃಹಂ ಗೃಹಮಿತ್ಯಾಹುಃ ಗೃಹಿಣೀ ಗೃಹಮುಚ್ಯತೇ" ಒಳ್ಳೆಯ ಮನದಾಕೆ ಮನೆಯಾಕೆ ಇಡೀ ಮನೆಯನ್ನೇ ಉದ್ಧರಿಸಬಲ್ಲಳು. ಗೃಹಿಣಿಯಿಲ್ಲದ ಮನೆ ಮನೆಯೇ ಅಲ್ಲ ಅದು ಶರೀರಗಳ ಅಂಗಡಿ. ಎಷ್ಟೋ ಮನೆಗಳು ಸಜ್ಜನ ಸ್ತ್ರೀಯಿಂದಲೇ ಏಳ್ಗೆ ಹೊಂದುವುದನ್ನು ಕಾಣುತ್ತೇವೆ, ಕೇಳುತ್ತೇವೆ. "ಮದುವೆಯಾದ ಮೇಲೆ ಅವನ ದೆಶೆಯೇ ಬದಲಾಗಿ ಹೋಯಿತು" ಎಂದು ಹಲವರನ್ನು ನೋಡಿ ಆಡಿಕೊಳ್ಳುತ್ತೇವೆ.

ಪ್ರಕೃತಿ ಸಹಜವಾಗಿಯೇ ಸ್ತ್ರೀಯರಿಗೆ ಅನೇಕ ಗುಣಗಳು ಒಲಿದಿರುತ್ತವೆ. ಪುರುಷರಿಗೆ ಹೋಲಿಸಿದಾಗ ಕರುಣೆ, ಸಹನೆ, ಸೌಂದರ್ಯ, ಅಂತಃಕರಣ, ಮೃದುತ್ವಕ್ಕೆ ಮಹಿಳೆಯರೇ ಒಂದು ಕೈ ಮೇಲೆ. "ಪುರಂಧ್ರೀಣಾಂ ಚಿತ್ತಂ ಕುಸುಮ ಸುಕುಮಾರಂ ಹಿ ಭವತಿ" ಮಹಿಳೆಯರ ಮನಸ್ಸು ಹೂವಿನಂತೆ ಮೃದುವೆನ್ನುತ್ತಾನೆ ಭವಭೂತಿ ತನ್ನ ಉತ್ತರರಾಮಚರಿತೆಯಲ್ಲಿ. ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸುವ ಗೃಹಿಣಿಯ ಪರಿ ನಿಜಕ್ಕೂ ಅನನ್ಯ, ಅಹಲ್ಯೆ, ದ್ರೌಪದಿ, ಸೀತೆ, ಮಂಡೋದರಿ, ಸಾವಿತ್ರಿಯಂಥವರು ಇಂದಿಗೂ ಅಮರವಾಗಿ ನಿಲ್ಲುತ್ತಾರೆ.

**ದೇವರಿಗೆ ಸಿಟ್ಟು ಬಂದರೆ ಇಲ್ಲ ಭೀತಿ**
**ಶ್ರೀಮತಿಗೆ ಸಿಟ್ಟು ಬಂದರೆ ಬಲು ಫಜೀತಿ**
**ಗಂಡನಿಗೆ ಸರಿಯಾದ ಊಟ ಸಿಗಲಾರ**
**ಸಂಸಾರವಾಗುವುದು ವಿಪರೀತ ಖಾರ- ದಿನಕರದೇಸಾಯಿ.**

ಉಮಾ ಮಹೇಶ್ವರ, ಲಕ್ಷ್ಮೀನಾರಾಯಣ, ರಾಧಾಕೃಷ್ಣ, ಸೀತಾರಾಮ ಹೀಗೆ ಗಂಡಂದಿರ ಹೆಸರಿನ ಪೂರ್ವಾರ್ಧವೇ ಆಗಿ ಹೋದ ಗೃಹಿಣಿ ತನ್ನೆಲ್ಲಾ ನೋವು ಮರೆತು ನಲಿವು ಹಂಚುತ್ತಾಳೆ. ಹೆಣ್ಣು, ಹೊನ್ನು, ಮಣ್ಣು, ಒಲಿಯುವುದಕ್ಕೆ ನೂರಾರು ಜನ್ಮದ ಪುಣ್ಯ ಬೇಕೆಂದು ಹಿರಿಯರು ಹೇಳುವುದನ್ನು ಕೇಳಿದ್ದೇನೆ. ಮನದೊಡತಿ ಮನೆಗೆ ದೀಪ ಹಚ್ಚಬಲ್ಲಳು. ಎಲ್ಲರಿಗಿಂತ ಮುಂಚೆ ಎದ್ದು ಎಲ್ಲ ಮಲಗಿದ ಮೇಲೆ ಮಲಗುವ ಗೃಹಿಣಿ ಲೋಕವನ್ನುದ್ಧರಿಸುವ ಲೋಕಮಾತೆ. ಕವಿತ್ವದ ಸ್ಫೂರ್ತಿ. ನಾರಿಯಿಲ್ಲದ ಮನೆ ಚಂದ್ರನಿಲ್ಲದ ಬಾಂದಳದಂತೆ.

ಮನೆಯ ಸುಖದುಃಖಗಳೆರಡೂ ನಿಂತಿರುವುದು ಸತಿಯ ಮೇಲೆಯೇ. ತಾಳ್ಮೆಯ ಪ್ರತಿರೂಪವಾದ ಸತಿ ಮೊಂಡು ಪತಿಯನ್ನೂ ತಿದ್ದಿತೀಡಬಲ್ಲಳು. ಮನವನ್ನು ನಂದನಗೊಳಿಸಬಲ್ಲಳು. ಅರಿಶಿನ ಕುಂಕುಮವನಿಟ್ಟು ಮಲ್ಲಿಗೆ ಮುಡಿದು ನವಿರಾದ ನೂಪುರದ ನಾದದೊಂದಿಗೆ ಮನೆಯೆಲ್ಲಾ ಓಡಾಡುತ್ತಿದ್ದರೆ ಅದಕ್ಕಿಂತ ಹೆಚ್ಚಿನ ಸೌಭಾಗ್ಯವಿಲ್ಲ ಎಂದುಕೊಳ್ಳುತ್ತೇನೆ. ಪತಿಯ ಸುಖದುಃಖಗಳಲ್ಲಿ, ಲಾಭಾಲಾಭಗಳಲ್ಲಿ, ಜಯಾಪಜಯಗಳಲ್ಲಿ ಸಮನಾಗಿ ಪಾಲ್ಗೊಳ್ಳುವ ಈಕೆ ಕ್ಷಮಯಾ ಧರಿತ್ರಿ.

**ಕಾರ್ಯೇಷು ಮಂತ್ರಿ ಕರುಣೇಷು ದಾಸಿ**
**ಭೋಜ್ಯೇಷು ಮಾತಾ ಶಯನೇಷು ರಂಭಾ**



ಭುವನೇಶ್ವರ (ಒರಿಸ್ಸಾ) - ಒರಿಸ್ಸಾದ ರಾಜಧಾನಿ ಇಲ್ಲಿನ ಲಿಂಗರಾಜ ದೇವಾಲಯ ಪ್ರಸಿದ್ಧ.

**ಧರ್ಮೇ ಅನುಕೂಲಾ ಕ್ಷಮಯಾ ಧರಿತ್ರಿ**
**ಷಡ್ ಗುಣ್ಯಯುಕ್ತಾ ಕುಲಮುದ್ಧರಿತಿಃ ॥**

ಪತಿಯ ಕಾರ್ಯಗಳಲ್ಲಿ ಮಂತ್ರಿಯಾಗಿ, ಪರಿಚಾರಿಕೆಯಲ್ಲಿ ದಾಸಿಯಾಗಿ, ಉಣಬಡಿಸುವಲ್ಲಿ ತಾಯಾಗಿ, ಶಯನದಲ್ಲಿ ರಂಭೆಗೆ ಸರಿಯಾಗಿ, ಧರ್ಮಕಾರ್ಯಗಳಲ್ಲಿ ಧರ್ಮಮೂರ್ತಿಯಾಗಿ, ಕ್ಷಮಾಗುಣದಲ್ಲಿ ಭೂಮಾತೆಯಾಗಿ ಹೀಗೆ ಆರು ಗುಣಗಳಿಂದ ಕೂಡಿದವಳೇ ಕುಲವನ್ನು ಉದ್ಧರಿಸಬಲ್ಲಳು ಎಂದು ನುಡಿಯುತ್ತದೆ ಸುಭಾಷಿತ. ಕವಿ ಬೇಂದ್ರೆಯಾದ್ದು ಓರ್ವ ಸದ್ಗೃಹಿಣಿಯಿಂದ. ಮೈಸೂರು ಮಲ್ಲಿಗೆಯ ಕಂಪಿನ ಕವಿ ನರಸಿಂಹ ಸ್ವಾಮಿಯವರ ಸಾಲುಗಳಲ್ಲಂತೂ ಸದಾ ಅವರ ಮನೆಯಾಕೆ ಮನದಾಕೆ ಮನೆಮಾಡಿಕೊಂಡೇ ಇರುತ್ತಾಳೆ.

ಹತ್ತಿಪ್ಪತ್ತು ವರುಷ ಬೇರೆಡೆಯಲ್ಲಿ ಬೆಳೆದು, ಆ ಸಂಸ್ಕೃತಿ, ಸಂಪ್ರದಾಯ, ಭಾಷೆ, ಸಂಬಂಧ, ಎಲ್ಲವನ್ನೂ ಮೀರಿ ನಿಂತು ಬೇರೆಯದೇ ಆದ ಮತ್ತೊಂದಕ್ಕೆ ತಾನು ಹೊಂದಿಸಿಕೊಳ್ಳುವುದಿದೆಯಲ್ಲಾ ಅದು ಅಕ್ಷರಗಳಿಗೆ ನಿಲುಕದ ಅಂತರ್ಯ. "ಹೆಂಡತಿಯೊಡನೆ ಬಡತನ ದೊರೆತರೆ ಏನೂ ಭಯವಿಲ್ಲಾ ಹೆಂಡತಿಯೊಲುಮೆಯ ಭಾಗ್ಯವನರಿಯದ ಗಂಡಿಗೆ ಜಯವಿಲ್ಲ." ಎಂಬ ಕೆ.ಎಸ್.ಎನ್.ರ ಸಾಲುಗಳು ನಿತ್ಯನೂತನ. Lovely relations are like a ring. If we wear it, it will hold our finger tightly. If we remove it, it will surely make us to feel its absence. ಪ್ರೀತಿಯ ಬಾಂಧವ್ಯಗಳು ಉಂಗುರವಿದ್ದ ಹಾಗೆ. ಅದನ್ನು ನಾವು ತೊಟ್ಟುಕೊಂಡರೆ ಅದು ನಮ್ಮ ಬೆರಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತದೆ. ಅದನ್ನು ನಾವು ಕಳಚಿದರೆ ಅದರ ಇಲ್ಲದಿರುವಿಕೆಯನ್ನು ಅದು ನಮಗೆ ತಿಳಿಸದೇ ಇರದು. ಒಂದು ದಿನ ಇಲ್ಲದಿದ್ದರೂ ಸದ್ಗೃಹಿಣಿಯ ಅನುಪಸ್ಥಿತಿ ಎದ್ದು ತೋರದೇ ಇರದು. ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯರಿವ ಸತಿಯಿದ್ದರೆ ಸ್ವರ್ಗಕ್ಕೆ ಕಿಚ್ಚುಹಚ್ಚೆಂದು ನುಡಿಯುತ್ತಾನೆ ಸರ್ವಜ್ಞ. ಮನೆಯ ಹೊಸ್ತಿಲಕೆ ಶುಭ ಬರೆಯುವಾಕೆ, ಮಂಗಳವ ಬಾರೆಂದು ಕರೆಯುವಾಕೆ, ಬಾಳ ಸುಳಿಯಲ್ಲಿ ಬೆಳಕು ತೋರುವಾಕೆ, ದಿನದಿನವು ನವಜಯವ ಕೋರುವಾಕೆ, ಅಕ್ಕರೆಯ ದನಿಯಾಕೆ, ಸಕ್ಕರೆಯ ಮನದಾಕೆ, ಮನೆಯೊಡತಿಯಾದರೆ ಮನೆಯೇ ಚೆಂದ. ಮನದೊಡತಿಯಾದರೆ ಬದುಕೇ ಅಂದ.

## ಸ್ವಾತಂತ್ರ್ಯ ದಿನಾಚರಣೆ ವರದಿ.

**ಧ್ವಜಾರೋಹಣ ಸಮಾರಂಭ:–**

ದಿನಾಂಕ 15–08–2016ರಂದು ಮುಂಜಾನೆ ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್‌ನ ವಿದ್ಯಾರ್ಥಿಗಳು ಸಂಸ್ಥೆಯ ಅಧ್ಯಕ್ಷರಾದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿಯವರನ್ನು ಹಾಗೂ ಗಣ್ಯರನ್ನು ಪಥ ಸಂಚಲನದ ಮೂಲಕ ಧ್ವಜ ಸ್ತಂಭದ ಬಳಿ ಕರೆ ತಂದರು. ನಂತರ ಶ್ರೀಗುರೂಜಿಯವರು ಧ್ವಜಾರೋಹಣವನ್ನು ನೆರವೇರಿಸಿದರು. ರಾಷ್ಟ್ರಗೀತೆಯೊಂದಿಗೆ ರಾಷ್ಟ್ರ ಹಾಗೂ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಲಾಯಿತು.

**ಸಭಾ ಕಾರ್ಯಕ್ರಮ :–**

ಸಭಾ ಕಾರ್ಯಕ್ರಮವು ವೇದಘೋಷದೊಂದಿಗೆ ಆರಂಭವಾಯಿತು. ಶಿಕ್ಷಕಿಯರಾದ ಕು.ವನಿತಾ ಖಾರ್ವಿ ಹಾಗೂ ಕು.ಗೌರಿ ಹೆಗಡೆಯವರು ಸಭೆಯ ನಿರೂಪಣೆಯನ್ನು ವಹಿಸಿದ್ದರು. ಪ್ರಾಂಶುಪಾಲರಾದ ಶ್ರೀ.ಜಿ.ಟಿ ಹೆಗಡೆಯವರು ನೆರೆದಿದ್ದ ಸಮಸ್ತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಗಣ್ಯರು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಭಾಷಣಗಳನ್ನು ಹಾಗೂ ದೇಶಭಕ್ತಿ ಗೀತೆಗಳನ್ನು ಹಾಡುವುದರ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀಗುರೂಜಿಯವರು, ಕಾರ್ಯದರ್ಶಿಗಳು, ಶ್ರೀ ಗಣೇಶ ಸವೇದ ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯರು, ಶಾಲೆಯ ಶೈಕ್ಷಣಿಕ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಶಾಲೆಯ ಶೈಕ್ಷಣಿಕ ನಿರ್ದೇಶಕರಾದ ಶ್ರೀಯುತ ಎಸ್.ಜೆ.ಕೈರನ್‌ರವರು ಮಾತನಾಡಿ ನಮ್ಮ ದೇಶಕ್ಕಾಗಿ ರಕ್ತ ಹರಿಸಿದವರಿಗಾಗಿ ಒಂದು ಕ್ಷಣ ಅಮೃತರ್ಪಣ ಮಾಡೋಣ ಎಂಬ ಮಾತನ್ನು ತಿಳಿಸಿ ಬಾಬು ರಾಜೇಂದ್ರ ಪ್ರಸಾದ್‌ರವರು ಹೇಳಿದ ಮಧ್ಯರಾತ್ರಿಯ ಗಂಟೆ ಹೊಡೆಯುತ್ತಿದ್ದಂತೆ ದುಃಖಿಸುವ ಕಾಲ ಹೋಯಿತು ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಕಳೆದಿದ್ದೇವೆ ಎಂಬ ಮಾತನ್ನು ತಿಳಿಸಿ ಹೇಳಿದರು. ಜಗತ್ತಿಗೆ ಸಂಸ್ಕೃತಿಯನ್ನು ನೀಡಿದ ದೇಶ ನಮ್ಮ ಭಾರತ ದೇಶ ಎನ್ನುವ ಮಾತಿನಿಂದ ದೇಶದ ಹಿರಿಮೆಯನ್ನು ಎತ್ತಿ ಹಿಡಿದು ನೆಲ ಒಂದೇ ಜಲ ಒಂದೇ ಮತ್ತೆ ಯಾಕೆ ಭೇದ ಎನ್ನುವ ಮಾತಿನ ಮೂಲಕ ಅತ್ಯುತ್ತಮವಾಗಿ ಸ್ವಾತಂತ್ರ್ಯದ ಹಿರಿಮೆಯನ್ನು ತಿಳಿಸಿದರು. ನಂತರ ಶ್ರೀಗುರೂಜಿಯವರು ಆಶೀರ್ವಚನವನ್ನು ನೀಡುತ್ತ ಸ್ವಾತಂತ್ರ್ಯದ ಸುದಿನ ಆತ್ಮಾವಲೋಕನಕ್ಕೆ ಆಹ್ವಾನವಾಗಿಯೂ ಸ್ವಾತಂತ್ರ್ಯದ ಹೆಸರಿನಲ್ಲಿ ಪಾರತಂತ್ರ್ಯ ಮಾಡದೆ ಬದುಕಲು ಹಾಗೂ ತ್ರಿವರ್ಣ ಧ್ವಜದ ಹಿರಿಮೆಯನ್ನು ತಿಳಿಸಿದರು. ಹಾಗೂ ಶಾಲೆಯ ಕುರಿತು ಶ್ಲಾಘನೆ ವ್ಯಕ್ತಪಡಿಸುತ್ತ ಸಮಸ್ತರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳನ್ನು ಕೋರಿದರು.

ಶಿಕ್ಷಕಿ ಶ್ರೀಮತಿ ಶಕುಂತಲಾ ಸಾರಂಗರವರ ವಂದನೆಗಳೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.



ಚಿತ್ತರಂಜನ್ (ಪಶ್ಚಿಮ ಬಂಗಾಳ) – ರೈಲ್ವೆ ಎಂಜಿನ್ನುಗಳ ಉತ್ಪಾದನೆಗೆ ಹೆಸರಾಗಿದೆ.

ಮಕ್ಕಳಿಗಾಗಿ ನೀತಿ ಕಥೆಗಳು...

# ದಡ್ಡ ಮಕ್ಕಳನ್ನು ಜಾಣರನ್ನಾಗಿ ಮಾಡುವುದು ಹೇಗೆ?

–ಲೇ: ಅರ್ಚನಾ ಭಾರದ್ವಾಜ.

( ತಂದೆ, ತಾಯಿಗಳ ಜೀನ್ಸ್ ಮಕ್ಕಳಲ್ಲಿ ಸಹ ಇರುವುದು. ಸಂತಾನ ಭಾಗ್ಯ ಉಂಟಾಗಲು ತಾಯಿ, ತಂದೆಯ ಅಂಶ ತುಂಬಾ ಮುಖ್ಯ. ಅದೇ ರೀತಿ ಗುಣ, ಜಾಣತನ, ಸ್ವಭಾವ ಸಹ ಅಪ್ಪ, ಅಮ್ಮನಿಂದ ಹರಿದು ಬರುವುದು ಎಂದು ಮರೆಯಬಾರದು.)

ವಿಜ್ಞಾನಿಗಳು ಹೇಳುವಂತೆ ಹುಟ್ಟಿದಾಗ ಪ್ರತಿಯೊಂದು ಮಕ್ಕಳು ಒಂದೇ ತೆರನಾದ ಬುದ್ಧಿವಂತಿಕೆಯನ್ನು ಹೊಂದಿರುತ್ತಾರೆ ಎನ್ನುವರು. ಈ ಅಂಶವನ್ನು ಸತ್ಯ ಮಾಡುವ ಪ್ರಯೋಗಗಳು ಸಹ ನಡೆದಿದೆ. ಹುಟ್ಟಿದ ಪ್ರತಿಯೊಂದು ಒಂದು ರೀತಿಯ ಬುದ್ಧಿವಂತಿಕೆಯನ್ನು ಹೊಂದಿರುತ್ತದೆ ಎಂದು ವಿಜ್ಞಾನ ಸಾಬೀತುಪಡಿಸಿದೆ. ಆದರೆ ಬೆಳೆಯುತ್ತಾ ಪ್ರತಿಯೊಂದು ಮಗುವು ವಿಭಿನ್ನವಾಗುತ್ತದೆ. ಒಂದೇ ತಾಯಿಯ ಗರ್ಭದಲ್ಲಿ ಬೆಳೆದ ಎರಡು ಮಕ್ಕಳು ಒಂದೇ ತರಹ ಬುದ್ಧಿವಂತಿಕೆಯನ್ನು ಹೊಂದಿರುವುದಿಲ್ಲ. ಕೆಲವು ಮಕ್ಕಳು ಜಾಣ ಮಕ್ಕಳು. ಉಳಿದ ಕೆಲವು ಮಕ್ಕಳು ದಡ್ಡರಾಗಿ ಬೆಳೆಯುತ್ತಾರೆ. ಈ ರೀತಿ ದಡ್ಡ ಮಕ್ಕಳನ್ನು ಇಂದಿನ ಸಮಾಜ ಯಾವ ರೀತಿ ನೋಡುವುದು. ಅದೇ ರೀತಿ ಅಂತಹ ದಡ್ಡ ಮಕ್ಕಳು ಎಂದಿಗೂ ಬುದ್ಧಿವಂತರಾಗಲು ಸಾಧ್ಯವೇ ಇಲ್ಲವೇ?

ಸಾಧ್ಯ. ದಡ್ಡ ಮಕ್ಕಳನ್ನು ಸಹ ಜಾಣರನ್ನಾಗಿ ಮಾಡಬಹುದು. ಅಂತಹ ತಾಳ್ಮೆ, ಸಹನೆ ಮೊದಲು ತಂದೆ, ತಾಯಂದಿರಿಗೆ ಇರಬೇಕು. ಮುಂದಿನ ಸರದಿ ಗುರುಗಳಿಗೆ ಸೇರುವುದು. ಮಕ್ಕಳು ತಮ್ಮ ತಂದೆ, ತಾಯಂದಿರು ಅಥವಾ ಕುಟುಂಬದ ಸದಸ್ಯರನ್ನು ಹೋಲುವುದು ಸರ್ವೇಸಾಮಾನ್ಯ.

ಆದರೆ ಒಂದು ಅಂಶವನ್ನು ಪ್ರತಿಯೊಬ್ಬರೂ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಅಪ್ಪ–ಅಮ್ಮ ತಮ್ಮ ಮಕ್ಕಳಿಗೆ ಜನ್ಮ ನೀಡುವಾಗ ಕೇವಲ ಉಸಿರನ್ನು ಮಾತ್ರ ಬಳುವಳಿಯಾಗಿ ಕೊಡುವುದಿಲ್ಲ. ವಂಶಪಾರಂಪರ್ಯವಾಗಿ ಹರಿದು ಬರುವ ಗುಣ, ನಡತೆ, ಸ್ವಭಾವ, ಬಣ್ಣ, ಜಾಣತನವನ್ನು ಸಹ ಉಡುಗೊರೆಯಾಗಿ ನೀಡುವರು. ತಂದೆ ಮಹಾನ್ ಬುದ್ಧಿವಂತನಾಗಿದ್ದರೆ, ಮಗನು ಸಹ ಅತಿ ಬುದ್ಧಿವಂತನಾಗುವ ಅವಕಾಶ ಇರುತ್ತದೆ. ಆದರೆ ತಂದೆ ತುಂಬಾ ದಡ್ಡನಾಗಿದ್ದರೆ ಅತಿ ಬುದ್ಧಿವಂತ ಮಕ್ಕಳು ಜನಿಸುವರು ಎಂದು ನಂಬುವುದಾದರೂ ಹೇಗೆ? ಆದರೆ ಕೆಲವು ಪ್ರತ್ಯೇಕ ಕಾರಣಗಳಿಂದ ಹಲವಾರು ಸಂದರ್ಭಗಳಲ್ಲಿ ತಂದೆ, ತಾಯಿಗಳಿಗಿಂತ ಮಕ್ಕಳು ವಿಭಿನ್ನವಾಗಿ ವರ್ತಿಸುವರು. ಆದರೆ ತಂದೆ, ತಾಯಿಗಳು ಮಕ್ಕಳನ್ನು ದಡ್ಡ ಎಂದು ಹೀಯಾಳಿಸುವ, ತಿರಸ್ಕಾರ ಮಾಡುವ ಮೊದಲು ತಮ್ಮನ್ನು ತಾವು ಒಂದು ಬಾರಿ ಅವಲೋಕನ ಮಾಡಿಕೊಳ್ಳುವುದು ಒಳ್ಳೆಯದು.

ಆದರೆ ವಾತಾವರಣ, ಸ್ವಪ್ರಯತ್ನ, ಆತ್ಮವಿಶ್ವಾಸದಿಂದ ಇರುವ ಮಕ್ಕಳು ತಂದೆ, ತಾಯಂದಿರ ಜೀನ್ಸ್ ಹೇಗೆ ಇರಲಿ, ತಾವು ಮುಂದೆ ಬರುವುದು ಖಚಿತ. ತಾವು ಹಾಕಿಕೊಂಡ ಗುರಿಗಳನ್ನು ತಲುಪುವುದು ನಿಶ್ಚಿತ. ತಂದೆ, ತಾಯಂದಿರು ಹೆಮ್ಮೆಪಡುವಂತೆ ಆಕಾಶದೆತ್ತರಕ್ಕೆ ಬೆಳೆಯುವರು. ತಂದೆ, ತಾಯಂದಿರು ತಮ್ಮ ಮಕ್ಕಳನ್ನು ಬೇರೆಯವರ ಜೊತೆ ಹೋಲಿಸುವ ಕೆಲಸ ಮಾಡಬಾರದು. ಮಕ್ಕಳ ಮನಸ್ಸು ಕುಗ್ಗುವುದು. ಮಕ್ಕಳು ಬೇಸರ, ಖಿನ್ನತೆಗೆ ಒಳಗಾಗುವರು. ತಂದೆ, ತಾಯಂದಿರು ತಮ್ಮ ಮಕ್ಕಳನ್ನು ಖಿನ್ನತೆಗೆ ತಳ್ಳಿದರೆ, ಅಂತಹ ಸ್ಥಿತಿಯಿಂದ ಮಕ್ಕಳನ್ನು ಹೊರತರುವವರು ಯಾರು? ಒಂದು ಮಗುವಿಗೆ ಇನ್ನೊಂದು ಮಗು ಹೋಲಿಕೆಯಾಗಬಾರದು. ಪ್ರತಿಯೊಂದು ಮಗುವಿಗೂ ತನ್ನದೇ ಆದ ಪ್ರತ್ಯೇಕತೆ ಇರುತ್ತದೆ. ಎಲ್ಲಾ ಮಕ್ಕಳಲ್ಲಿಯೂ ಒಂದೊಂದು ತೆರನಾದ ಕಲೆ ಇರುವುದು. ಅಂತಹ ಕಲೆಯನ್ನು ಗುರುತಿಸಿ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಆಗ ಮಕ್ಕಳು ಅಭಿವೃದ್ಧಿ ಹೊಂದುವರು. ಗೆಲುವಿನ ಶಿಖರವನ್ನು ತಲುಪಲು ತಂದೆ, ತಾಯಿಗಳ ಸಹಕಾರ ತುಂಬಾ ಮುಖ್ಯ. ತಂದೆ, ತಾಯಂದಿರು ಐಷಾರಾಮಿ ಬದುಕನ್ನು ಮಕ್ಕಳಿಗೆ ನೀಡುವುದಕ್ಕಿಂತ ಆತ್ಮವಿಶ್ವಾಸವನ್ನು ಕೊಡುವುದು ಲೇಸು. ಆಗ ಮಕ್ಕಳು ತಮ್ಮ ಸ್ವಂತಿಕೆಯನ್ನು ಬೆಳೆಸಿಕೊಳ್ಳುವರು. ದಡ್ಡ ಮಕ್ಕಳು ಸಹ ಜಾಣರಾಗುವ ಹಾದಿ ಎಂದರೆ ಸಕಾರಾತ್ಮಕವಾದ ಧೋರಣೆ ಎನ್ನಬಹುದು. ಅಂತಹ ಭಾವನೆಯನ್ನು ನಿಮ್ಮ ಮಕ್ಕಳ ಮನಸ್ಸಿನಲ್ಲಿ ತುಂಬಿರಿ. ಮಕ್ಕಳ ಗೆಲುವಿಗಾಗಿ ಶ್ರಮಿಸಿ.

**ಅಣಿಮುತ್ತು: "ಪ್ರತ್ಯೇಕತೆಯನ್ನು ಗುರುತಿಸಿ, ಪ್ರೋತ್ಸಾಹಿಸಿ."**

## ಸಿಲೆಕ್ಟ್ ಫೌಂಡೇಶನ್(ರಿ.), ಶ್ರೀಕ್ಷೇತ್ರ ಬಂಗಾರಮಕ್ಕಿ
## ಸಹಕಾರ:– ಸುವಿಧಾ ಟ್ರಸ್ಟ್(ರಿ.), ಹೊನ್ನಾವರ
## ಉಚಿತ ರಕ್ತ ಗುಂಪು ತಪಾಸಣಾ ಶಿಬಿರ ವರದಿ

ಅರೇಅಂಗಡಿಯ **ಸಿರಿ ಬಿ.ಎಸ್.ಡಬ್ಲೂ.** ಕಾಲೇಜಿನಲ್ಲಿ ಶನಿವಾರದಂದು ಸಿಲೆಕ್ಟ್ ಫೌಂಡೇಶನ್(ರಿ.) ಶ್ರೀಕ್ಷೇತ್ರ ಬಂಗಾರಮಕ್ಕಿ, ಗೇರುಸೊಪ್ಪ, ಹೊನ್ನಾವರ ಹಾಗೂ ಸುವಿಧಾ ಟ್ರಸ್ಟ್(ರಿ.) ಹೊನ್ನಾವರ ಇವರ ಸಹಯೋಗದಲ್ಲಿ ಉಚಿತ ರಕ್ತ ಗುಂಪು ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಉದ್ಘಾಟಕರಾಗಿ ಆಗಮಿಸಿದ ಶ್ರೀ ವಿನಾಯಕ ನಾಯ್ಕ್ ಇವರು ಕಾರ್ಯಕ್ರಮ ಉದ್ಘಾಟಿಸಿ ರಕ್ತದ ಗುಂಪು, ರಕ್ತ ತಪಾಸಣೆ ಕುರಿತು ನೆರದಿರುವ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಸಿರಿ ಬಿ.ಎಸ್.ಡಬ್ಲೂ ಕಾಲೇಜಿನ ಪ್ರಾಂಶುಪಾಲರು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಶ್ರೀ ರಾಘವೇಂದ್ರ, ತಂತ್ರಜ್ಞರು ಶರಾವತಿ ಲ್ಯಾಬೋರೇಟರಿ ಹೊನ್ನಾವರ, ಇವರು ಆಗಮಿಸಿದ್ದರು. ಸುಮಾರು 72 ಜನ ವಿದ್ಯಾರ್ಥಿಗಳು ಈ ಶಿಬಿರದ ಫಲಾನುಭವಿಗಳಾದರು.



ದಲಾಲ್ ಓಣಿ (ಮುಂಬೈ) – ಮುಂಬೈನಲ್ಲಿರುವ ಷೇರು ವಿನಿಮಯ ಮಾರುಕಟ್ಟೆ.

॥ಸಂಪ್ರದಾಯ॥

# ಯಾವ ದಾನವನ್ನು ಯಾವದಿನ ಮಾಡಬೇಕು.

–ಲೇ:ಜಿ.ವಿ.ಶರ್ಮಾಪಂಡಿತ್.ಎಮ್.ಎ.

**ಶ್ಲೋ॥ ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುಚ್ಯತೇ**

**ದ್ವಾಪರೇಯಜ್ಞ ಮೇವಾಹುಃ "ದಾನಮೇಕಂ ಕಲೌಯುಗೇ ॥ –ಪರಾಶರ ಧರ್ಮಶಾಸ್ತ್ರ.**

"ಕೃತಯುಗದಲ್ಲಿ ತಪಸ್ಸು ಮುಖ್ಯವಾಗಿತ್ತು. ತ್ರೇತಾಯುಗದಲ್ಲಿ ಜ್ಞಾನವೇ ಮುಖ್ಯವಾಗಿತ್ತು. ದ್ವಾಪರಯುಗದಲ್ಲಿ ಯಜ್ಞ ಯಾಗಗಳು ಮುಖ್ಯವಾಗಿದ್ದವು. ಕಲಿಯುಗದಲ್ಲಿ ಮಾತ್ರ ದಾನವೇ ಶ್ರೇಷ್ಟವಾಗಿದೆ."

ದಾನವೆಂದರೇ ರಾತ್ರಿ ಉಳಿದಿರುವ ಆಹಾರ ಪದಾರ್ಥಗಳನ್ನು ಬೆಳಗ್ಗೆ ಬಂದಿರುವ ಯಾಚಕರಿಗೆ ನೀಡುವುದಲ್ಲ. ದಾನವೆಂದರೆ ರಸ್ತೆಯಲ್ಲಿ ಕೈಚಾಚಿದವರಿಗೆ ಒಂದೆರಡು ರೂಪಾಯಿ ಬಿಸಾಡುವುದಲ್ಲ.

ದಾನ ಮಾಡುವುದೆಂದರೇ ಜ್ಞಾನವೃದ್ಧರು ಅಥವಾ ವಯೋವೃದ್ಧರು ಅಥವಾ ವೇದ ಪಂಡಿತರಾದ ನಿಷ್ಠಾವಂತರನ್ನು ಮನೆಗೆ ಕರೆಯಿಸಿ ಮಂತ್ರ ಪೂರ್ವಕವಾಗಿ ಭಕ್ತಿಯಿಂದ ಕೊಡುವುದನ್ನು ದಾನವೆನ್ನುತ್ತಾರೆ. ಅಥವಾ ನಾವೇ ಅವರಬಳಿಗೆ ಹೋಗಿ ವಿನಯ ಪೂರ್ವಕದಿಂದ ಸಂತೋಷವಾಗಿ ಕೊಡುವುದನ್ನು ದಾನವೆನ್ನುತ್ತಾರೆ. ಇಂಥಾ ದಾನಗಳಿಂದ ನಾವು ತಿಳಿದೂ ಅಥವಾ ತಿಳಿಯದೇ ಮಾಡಿದ ಅನೇಕ ಪಾಪಗಳಿಂದಲೂ, ದುಷ್ಟ ಗ್ರಹ ಪೀಡೆಗಳಿಂದಲೂ ವಿಮುಕ್ತರಾಗುತ್ತೇವೆ.

ಆದರೆ ಅಯೋಗ್ಯರಿಗೆ ದಾನ ಮಾಡುವುದರಿಂದ ಫಲವಿಲ್ಲ. ಸಾಧಾರಣವಾಗಿ ವೃದ್ಧರಾದ ಪಂಡಿತರಿಗೇ ದಾನ ಮಾಡಬೇಕು.

* ಭಾನುವಾರ ಗೋಧಿಯನ್ನು ದಾನಮಾಡಿದರೆ ಸೋಮಾರಿತನ ದೂರವಾಗಿ ಮಂದಬುದ್ಧಿಯಿಂದ ವಿಮುಕ್ತರಾಗುತ್ತಾರೆ.
* ಸೋಮವಾರ ಅಕ್ಕಿಯನ್ನು ದಾನಮಾಡಿದರೆ ಸಾಂಸಾರಿಕ ಕಲಹಗಳಿಂದ ವಿಮುಕ್ತರಾಗಿ ಸತಿಪತಿಯರು ಆತ್ಮೀಯತೆಯಿಂದ ಕೂಡಿ ಬಾಳುತ್ತಾರೆ.
* ಮಂಗಳವಾರ ತೊಗರಿ ಕಾಳನ್ನು ದಾನಮಾಡಿದರೆ ವಿದ್ಯಾಜೀವನ ಸುಗಮವಾಗಿದ್ದು ವಿದ್ಯಾವಂತರಾಗುತ್ತಾರೆ. ಅಧಿಕಾರ ಪದವಿಯನ್ನು ಪಡೆಯುತ್ತಾರೆ.
* ಗುರುವಾರ ದಿನದಂದು ಕಡಲೇಕಾಳು (ಬೇಳೆ)ಗಳನ್ನು ಬೆಲ್ಲದ ಸಹಿತ ದಾನ ಮಾಡಿದರೆ ಅಖಂಡ ಸ್ಥಿತಿವಂತರಾಗುತ್ತಾರೆ. ಧನವಂತರಾಗಿ ಸುಖಪಡುತ್ತಾರೆ.
* ಶುಕ್ರವಾರ ಬಿಳಿವಸ್ತ್ರಗಳನ್ನು ಧರಿಸಿ ಅವರೆ ಕಾಳುಗಳನ್ನು ದಾನಮಾಡಿದರೆ ಸಂಸಾರ ಸುಖಗಳನ್ನು, ಅಷ್ಟಭೋಗ ಭಾಗ್ಯಗಳನ್ನು ಅಧಿಕಾರವನ್ನು ಪಡೆಯುತ್ತಾರೆ.
* ಶನಿವಾರದಿನ ಶುಚಿಸ್ನಾನಮಾಡಿ ಕರೀ ಎಳ್ಳುಗಳನ್ನು ದಾನಮಾಡಿದರೇ ದರಿದ್ರದಿಂದ ವಿಮುಕ್ತರಾಗಿ ಕಷ್ಟ ನಷ್ಟಗಳಿಂದ ವಿಮುಕ್ತರಾಗಿ ಸಮಾಧಾನಕರ ಜೀವನವನ್ನು ಪಡೆಯುತ್ತಾರೆ.

ಯಾವ ದಾನ ಮಾಡಿದರೂ ನೂರಾ ಒಂದು ರೂಪಾಯಿ ದಕ್ಷಿಣೆ ತಪ್ಪದೇ ಕೊಡಬೇಕು. ಇದೇ ರೀತಿ

ಪಿತೃದೇವತಾ ಪ್ರೀತ್ಯರ್ಥವಾಗಿ ಗೋದಾನ ಭೂದಾನಗಳನ್ನು ಮಾಡುತ್ತಾರೆ. (ಅನೇಕಾನೇಕ ಮಹತ್ತರ ದಾನಗಳಿವೆಯಾದರೂ ಸ್ಥಳಾಭಾವದಿಂದ ಸರಳವಾದ ದಾನಗಳನ್ನು ಬರೆಯಲಾಗಿದೆ) ಪೂಜೆಗಿಂತಲೂ ದಾನವೇ ಶ್ರೇಷ್ಟವಾಗಿದೆ. ಮೂಕಪ್ರಾಣಿಗಳಿಗೆ ಆಹಾರವನ್ನು ದಾನಮಾಡಿದರೇ ಪರಮಶಿವನು ಸಂತೃಪ್ತನಾಗುತ್ತಾನೆ.

'ದಾನ'ವನ್ನು ಯಾಕೆ ಮಾಡಬೇಕು?

ದಾನ ಧರ್ಮಗಳನ್ನು ಮಾಡಬೇಕೆಂದು ವೇದಗಳು ಹೇಳುತ್ತಿವೆ. ಹಿಂದೂ ಧರ್ಮವು ವೇದಗಳಿಂದ ಹುಟ್ಟಿದೆ. ಹಿಂದೂ ಮತಕ್ಕೆ ವೇದಗಳೇ ಬುನಾದಿ. ವೇದಾಧಾರದಿಂದಲೇ ನಮ್ಮ ಆಚಾರಗಳು ಸಂಪ್ರದಾಯ ಪದ್ಧತಿಗಳು ಜನ್ಮತಾಳಿವೆ. ವೇದ ಮಾರ್ಗವನ್ನು ಹಿಂದೂಗಳು ತಿರಸ್ಕರಿಸಬಾರದು.

ದಾನ ಯಾರು ಮಾಡಬೇಕು ?

ಶ್ರೀಮಂತರು, ಬಡವರು, ಎಲ್ಲರೂ ದಾನವನ್ನು ಮಾಡಬೇಕು.

ಯಾವದಾನವನ್ನು ಮಾಡಬೇಕು?

ಶ್ರೀಮಂತರು ಧನ ದಾನ್ಯಗಳನ್ನು ದಾನಮಾಡಬೇಕು. ಬಡವರಾದವರು ಶ್ರಮದಾನ ಮಾಡಬೇಕು. ವಿದ್ಯಾವಂತ ಪಂಡಿತರು ವಿದ್ಯಾದಾನ ಮಾಡಬೇಕು. ಮಧ್ಯಮ ವರ್ಗದವರು ಅನ್ನದಾನ ಮಾಡಬೇಕು. ಭೂಸ್ವಾಮಿಗಳು ಭೂದಾನ ಮಾಡಬೇಕು. ಗೋ ಸ್ವಾಮಿಗಳು ಗೋದಾನ ಮಾಡಬೇಕು. ಗೃಹಸ್ಥರು ವಂಶಾಭಿವೃದ್ಧಿಗಾಗಿ ಕನ್ಯಾದಾನ ಮಾಡಬೇಕು. ವ್ಯಾಪಾರ ವರ್ಗದ ಜನರು ವಸ್ತ್ರದಾನ ಮಾಡಬೇಕು. ವೈದ್ಯರು ಔಷಧ ದಾನ ಮಾಡಬೇಕು. ಹಸಿವಾದವನಿಗೆ ಎಲ್ಲರೂ ಅನ್ನದಾನ ಮಾಡಬೇಕು.

ಈ ದಾನಗಳ ಒಳಗುಟ್ಟು ಏನು?

ನಾವೆಲ್ಲರೂ ಸಮಾಜ ಜೀವಿಗಳು. ಸಮಾಜಕ್ಕೆ ಪ್ರತಿಯೊಬ್ಬರೂ ಮುಖ್ಯವೇ. ಅನೇಕ ಜನರ ಸಮಾಹಾರವೇ ಸಮಾಜ. ಕಂಬಾರ, ಕುಂಬಾರ, ಬಡಿಗೇರ, ಚರ್ಮಗಾರ, ಕಂಚುಗಾರ, ನೇಕಾರ, ಕಲ್ಲೋಜ, ಮುದ್ದುಗಾರ ಕೂಲಿಗಾರ, ಹೀಗೆ ವಿವಿಧ ವೃತ್ತಿಗಾರರು ಬುದ್ಧಿ ಜೀವಿಗಳು, ಶ್ರಮಜೀವಿಗಳು ಕೂಡಿ ಬಾಳುವ ಸಮಾಜದಲ್ಲಿ ನಾವು ಸದಸ್ಯರು. ನಮ್ಮಲ್ಲಿ ಯಾರೂ ಬಾಧಾತಪ್ತರು ಅನ್ನಾರ್ತರು ಇರಬಾರದು. ನಮಗೆ ಬಹಳ ಇದ್ದುದ್ದರಲ್ಲಿ ನಮ್ಮವರಿಗೆ ಸ್ವಲ್ಪ ಹಂಚುವುದು ನ್ಯಾಯ. ಈ ನ್ಯಾಯದಿಂದ ದಂಗೆ ದರೋಡೆಗಳನ್ನು ನಿಯಂತ್ರಿಸಬಹುದೆಂದು ಹಿರಿಯರ ಯೋಚನೆ, ಒಗ್ಗಟ್ಟೇ ಇದರ ಒಳಗುಟ್ಟು.

ದಾನಗಳನ್ನು ಮಾಡದಿದ್ದರೇ?

ದಾನಧರ್ಮಗಳನ್ನು ಮಾಡದೇ ತಾನೊಬ್ಬನೇ ಹೊಟ್ಟೆಯ ತುಂಬಾ ಉಂಡು ಮಲಗುವ ಮನುಷ್ಯರು ಮತ್ತೇ ಮರುಜನ್ಮದಲ್ಲಿ ಭಿಕ್ಷುಕರಾಗಿ ಹುಟ್ಟಿ ನರಳುತ್ತಾರೆಂದು ಧರ್ಮಶಾಸ್ತ್ರಗಳು ಎಚ್ಚರಿಸುತ್ತಿವೆ.

**ಶ್ಲೋ॥ ದ್ವಾರದ್ವಾರ ಮಟನ್ ಭಿಕ್ಷುಃ, ಶಿಕ್ಷತ್ಯೇವಂ ಸಯಾಚತೇ**

**ಆದತ್ವ ಮಾದೃಶೋ ಮಾಭೂಃ ದತ್ತಾತ್ವಂ ತಾದೃಶೋಭವ ॥ – ಕುವಲಯಾನಂದಮ್.**

ಒಬ್ಬ ಭಿಕ್ಷುಕನು ಬಿಕ್ಷಾರ್ಥಿಯಾಗಿ ತಿರುಗುತ್ತಾ ಮೇಲಿನ ಶ್ಲೋಕ ಹೇಳಿದ್ದಾನೆ. ಈ ಶ್ಲೋಕದ ವಿವರಣೆ ಏನೆಂದರೇ.

"ಪುಣ್ಯಾತ್ಮರೇ! ಗತ ಜನ್ಮದಲ್ಲಿ ನೀವೆಲ್ಲರೂ ದಾನ ಧರ್ಮಗಳನ್ನು ಮಾಡಿದ್ದರಿಂದ ನಿಮ್ಮನ್ನು ದಾತಗಳಾಗಿ ದೇವರು ಹುಟ್ಟಿಸಿದ್ದಾನೆ. ಗತಜನ್ಮದಲ್ಲಿ ನಾನು ಸ್ವಾರ್ಥಿಯಾಗಿ ಬದುಕಿದ್ದರಿಂದ ದೇವರು ಭಿಕ್ಷುಕನಾಗಿ ನನ್ನನ್ನು ಹುಟ್ಟಿಸಿದ್ದಾನೆ. ಮುಂದಿನ ಜನ್ಮದಲ್ಲಿ ನೀವೆಲ್ಲರೂ ನನ್ನಂತೆ ಭಿಕ್ಷುಕರಾಗಿ ಹುಟ್ಟ ಬೇಡಿರಿ. ಪುಣ್ಯಾತ್ಮರೇ ಭಿಕ್ಷೆ ನೀಡಿರಿ! ಭವತೀ ಭಿಕ್ಷಾಂದೇಹಿ!"

---

**ಭಾರತ ದರ್ಶನ...**

# ಪಾಟಲಿಪುತ್ರ (ಪಾಟ್ನಾ)

**–ಲೇ: ಬಿ.ವಿ.ವಿದ್ಯಾನಂದ ಶೆಣೈ**

ಈ ಪ್ರಾಚೀನ ನಗರ, ಇಂದು ಬಿಹಾರದ ರಾಜಧಾನಿ. ಈ ನಗರವನ್ನು ಪುಷ್ಪಪುರ, ಕುಸುಮಪುರ ಮುಂತಾಗಿ ಕರೆದಿದ್ದಾರೆ. ಇತಿಹಾಸ ಕಾಲದಲ್ಲಿ ಇದು ಮಗಧ ಸಾಮ್ರಾಜ್ಯದ ರಾಜಧಾನಿಯಾಗಿತ್ತು ಬೌದ್ಧ ಧರ್ಮದ ಕೇಂದ್ರವಾಗಿಯೂ ಇದು ಮಹತ್ವ ಪಡೆದಿತ್ತು. ಕಥಾಸರಿತ್ಸಾಗರದಲ್ಲಿ ಸೋಮಪ್ರಭೆಯ ಕಥೆಯಲ್ಲಿ ಪಾಟಲಿಪುತ್ರವನ್ನು ಪೃಥ್ವಿಯ ಭೂಷಣ ಎಂದು ಕರೆದಿದ್ದಾರೆ.

ಈ ನಗರದ ಹೆಸರಿನ ಕುರಿತು ಒಂದು ಕಥೆ ರೂಢಿಯಲ್ಲಿದೆ. 'ಪಾಟಲಿ' ಎಂಬುವವಳು ಗಾಧಿ ಮಹಾರಾಜನ ಮಗಳು ಮತ್ತು ವಿಶ್ವಾಮಿತ್ರನ ಸಹೋದರಿ. ಆಕೆಯ ಇಚ್ಛೆಯಂತೆ ತನ್ನ ತಪೋಬಲದಿಂದ ಋಷಿ ಕೌಂಡಿನ್ಯರು ಈ ನಗರವನ್ನು ನಿರ್ಮಿಸಿದರಂತೆ. ಇನ್ನೊಂದು ಕಥೆಯಂತೆ ಪುತ್ರಕ ಎಂಬ ಹೆಸರಿನ ದಕ್ಷಿಣಾಪಥಸ್ಥ ಬಡ ಬ್ರಾಹ್ಮಣ ತರುಣನು ಪಾಟಲಿ ಎಂಬ ರಾಜಕನ್ಯೆಯನ್ನು ವಿವಾಹವಾದನು. ಇವರಿಬ್ಬರ ಹೆಸರನ್ನು ಸೇರಿಸಿ ಈ ನಗರವನ್ನು 'ಪಾಟಲಿಪುತ್ರ' ಎಂದು ಕರೆಯಲಾಯಿತು.

ಇತಿಹಾಸಕ್ಕೆ ತಿಳಿದಂತೆ ಪಾಟಲಿಪುತ್ರ ಕ್ರಿ. ಪೂ. 480ರಲ್ಲಿ ನಿರ್ಮಾಣವಾಯಿತು. ಪ್ರಾಚೀನ ಮಗಧದ ರಾಜನಾದ ಅಜಾತಶತ್ರುವಿನಿಂದ ಈ ರಾಜಧಾನಿ ಸ್ಥಾಪಿತವಾಯಿತು. ಇದರ ಮುಂಚೆ 'ರಾಜಗೃಹ'ವು ಅವನ ರಾಜಧಾನಿಯಾಗಿತ್ತು. ಆದರೆ ಮುಂದೆ ಸಾಮ್ರಾಜ್ಯ ರಕ್ಷಣೆ ಮತ್ತು ವಿಸ್ತರಣೆಯ ದೃಷ್ಟಿಯಿಂದ ರಾಜಗೃಹವನ್ನು ಬದಲಿಸುವುದು ಅವನಿಗೆ ಅನಿವಾರ್ಯವಾಯಿತು. ಆದ್ದರಿಂದ ಗಂಗೆಯ ದಡದಲ್ಲಿದ್ದ ಈ ಸುರಕ್ಷಿತ ಸ್ಥಳದಲ್ಲಿ ರಾಜಧಾನಿಯನ್ನು ಕಟ್ಟಿಸಲು ನಿಶ್ಚಯಿಸಿದನು. ಅಜಾತಶತ್ರುವಿನ ಇಬ್ಬರು ಮಂತ್ರಿಗಳಾದ ಸುನೀಧ ಮತ್ತು ವಸ್ಸಾಕರರು ರಾಜಧಾನಿಯ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದರು.

ನಗರನಿರ್ಮಾಣದ ಹಂತದಲ್ಲಿಯೇ ಮಹಾಪರಿನಿರ್ಮಾಣಕ್ಕಾಗಿ ಹೊರಟಿದ್ದ ಭಗವಾನ್ ಬುದ್ಧನು ಅಜಾತಶತ್ರುವಿನ ಮಂತ್ರಿಗಳ ಆಹ್ವಾನವನ್ನು ಮನ್ನಿಸಿ ಪಾಟಲಿಪುತ್ರಕ್ಕೆ ಆಗಮಿಸಿದನು. ಅವನು ನಲಂದಾದಿಂದ ವೈಶಾಲಿಯ ಕಡೆಗೆ ಹೊರಟಿದ್ದನು. ಆಗ ಬುದ್ಧನ ಗೌರವಾರ್ಥ ಒಂದು ಔತಣವನ್ನು ಈ ನಗರದಲ್ಲಿ ನೀಡಲಾಗಿತ್ತು. ಈ ಸಂದರ್ಭದಲ್ಲಿ ಬುದ್ಧನು ರಾಜಾ ಅಜಾತಶತ್ರು ಮತ್ತು ಅವನ ಮಂತ್ರಿಗಳನ್ನು ಪ್ರಶಂಸಿಸಿ, ಈ ನಗರವು ಭವಿಷ್ಯದಲ್ಲಿ ಆರ್ಯಾವರ್ತದ ಶ್ರೇಷ್ಠ ರಾಜಧಾನಿಯಾಗುವುದಾಗಿಯೂ ವ್ಯಾಪಾರ ಉದ್ಯಮಗಳಿಗೆ ಪ್ರಸಿದ್ಧವಾಗುವುದಾಗಿಯೂ ಭವಿಷ್ಯ ನುಡಿದಿದ್ದನು. ಆದರೆ ಬೆಂಕಿ, ನೀರು ಮತ್ತು ಅಂತಃಕಲಹಗಳಿಂದಾಗಿ ಈ ನಗರವು ನಾಶವಾಗುವ ಭೀತಿ ಇರುವುದರಿಂದ ಎಚ್ಚರಿಕೆ ಅಗತ್ಯ ಎಂದಿದ್ದನು. ನಂತರ ಬುದ್ಧನು ವೈಶಾಲಿಯ ಕಡೆ ತೆರಳಿದನು. ನಗರ ನಿರ್ಮಾಣ ಪೂರ್ಣವಾದ ಬಳಿಕ ಬುದ್ಧನ ಭೇಟಿಯ ಪಾವನಸ್ಮೃತಿಗಾಗಿ ನಗರದ ಒಂದು ದ್ವಾರವನ್ನು 'ಗೌತಮದ್ವಾರ' ಎಂಬುದಾಗಿಯೂ



ದಂಡಿ (ಗುಜರಾತ್) – 1930ರಲ್ಲಿ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ 'ಉಪ್ಪಿನ ಸತ್ಯಾಗ್ರಹ' ನಡೆದ ಸ್ಥಳ.

ಗಂಗೆಯ ಒಂದು ಘಟ್ಟವನ್ನು 'ಗೌತಮತೀರ್ಥ' ಎಂಬುದಾಗಿಯೂ ಕರೆಯಲಾಯಿತು ಬುದ್ಧನ ಮಹಾಪರಿನಿರ್ಮಾಣದ ನಂತರ ಅವನ ಕಮಂಡಲವನ್ನು ಪಾಟಲಿಪುತ್ರಕ್ಕೆ ತಂದು ಸಮಾಧಿ ಮಾಡಲಾಯಿತು.

ಈ ನಗರವು ಗಂಗಾ ಮತ್ತು ಶೋಣಭದ್ರ ನದಿಗಳ ಸಂಗಮಕ್ಷೇತ್ರದಲ್ಲಿದೆ. ಇದು ಒಂಭತ್ತು ಮೈಲಿ ಉದ್ದ ಮತ್ತು ಎರಡು ಮೈಲಿ ಅಗಲವಾಗಿತ್ತು. ನಗರದ ಸುತ್ತ ಮರದ ದಿಮ್ಮಿಗಳಿಂದ ಗೋಡೆಯನ್ನು ನಿರ್ಮಿಸಲಾಗಿತ್ತು. ಇದರಲ್ಲಿ 64 ಬಾಗಿಲುಗಳು ಮತ್ತು 570 ಬುರುಜುಗಳು ಇದ್ದವು. ತತ್ಕಾಲೀನ ಭಾರತದಲ್ಲಿ ಪಾಟಲೀಪುತ್ರವೇ ಪ್ರಮುಖ ದೊಡ್ಡ ಮತ್ತು ಸಂಪದ್ಭರಿತ ನಗರವಾಗಿತ್ತು ಎಂದು ಗ್ರೀಕ್ ಇತಿಹಾಸಕಾರ ಮೆಗಸ್ಥನೀಸನು ಅಭಿಪ್ರಾಯ ಪಟ್ಟಿದ್ದಾನೆ.

ಅಜಾತಶತ್ರುವಿನ ನಂತರ ಅವನ ಮೊಮ್ಮಗನಾದ ಉದಯಾಶ್ವನು ಮಗಧದ ಚಕ್ರವರ್ತಿಯಾದ. ಇವನು ರಾಜ್ಯವಿಸ್ತಾರದ ಜೊತೆಗೆ ನಗರವನ್ನು ವಿಸ್ತರಿಸಿದ. ಇವನ ಬಳಿಕ ಶಿಶುನಾಗ ಮತ್ತು ನಂದವಂಶದ ಅನೇಕರು ಇಲ್ಲಿ ಆಳಿದರು. ನಂದರನ್ನು ಕೊನೆಗಾಣಿಸಿ ಚಂದ್ರಗುಪ್ತ ಮೌರ್ಯನು ಕ್ರಿ.ಪೂ.321ರಲ್ಲಿ ತನ್ನ ಪ್ರಭುತ್ವವನ್ನು ಇಲ್ಲಿ ಪ್ರಾರಂಭ ಮಾಡಿದನು. ಈ ನಗರದಲ್ಲಿ ಒಂದು ವಿಶಾಲವಾದ ಅರಮನೆಯನ್ನು ಅವನು ಕಟ್ಟಿಸಿದ. ಅತ್ಯಂತ ಕಲಾತ್ಮಕವಾಗಿದ್ದ ಈ ಪ್ರಾಸಾದವು ಮರದಿಂದ ತಯಾರಿಸಲಾಗಿತ್ತು. ಇವನ ಕಾಲದಲಿಯೇ ಕ್ರಿ.ಪೂ.305ರಲ್ಲಿ ಗ್ರೀಕ್ ರಾಯಭಾರಿಯಾಗಿ ಮೆಗಸ್ಥನೀಸನು ಭಾರತಕ್ಕೆ ಬಂದಿದ್ದು.

ಚಂದ್ರಗುಪ್ತನ ಮೊಮ್ಮಗನಾದ ದೇವಾನಾಂಪ್ರಿಯ ಅಶೋಕನು ಕ್ರಿ.ಪೂ.296ರಲ್ಲಿ ನಗರದಲ್ಲಿ ಮಗಧದ ಚಕ್ರವರ್ತಿಯಾಗಿ ಕಿರೀಟಧಾರಣೆ ಮಾಡಿದನು. ಸುಮಾರು 40 ವರ್ಷಗಳ ಇವನ ದೀರ್ಘ ಆಳ್ವಿಕೆಯಲ್ಲಿ ಪಾಟಲೀಪುತ್ರದ ರೂಪ ಪೂರ್ಣ ಬದಲಾಯಿತು. ನಗರದ ಸುತ್ತಲೂ ಇವನು ಬಲವಾದ ಕಲ್ಲಿನ ಕೋಟೆಯನ್ನು ಕಟ್ಟಿಸಿದನು. ಅದೇ ರೀತಿಯಲ್ಲಿ ಇವನ ಕಾಲದಲ್ಲಿ ಅನೇಕ ಹೊಸ ಮಹಲುಗಳು, ಮಠ–ಮಂದಿರಗಳು ನಿರ್ಮಾಣವಾದವು. ಇವನ ಕಾಲದಲ್ಲಿ ಇಲ್ಲಿ ಒಂದು ಬೌದ್ಧಧರ್ಮ ಪರಿಷತ್ತು ಸಮಾವೇಶಗೊಂಡಿತ್ತು.

ಅಶೋಕನ ನಂತರ ಸಮರ್ಥ ರಾಜರು ಪಾಟಲಿಪುತ್ರಕ್ಕೆ ದೊರೆಯಲಿಲ್ಲ. ಈ ಕಾರಣದಿಂದ ಗ್ರೀಕ್–ಯವನರಂತಹ ಶತ್ರುಗಳು ಪಾಟಲಿಪುತ್ರವನ್ನು ಗೆಲ್ಲುವ ಸಾಹಸ ಮಾಡತೊಡಗಿದರು. ಗ್ರೀಕ್ ಸೇನಾಪತಿಯಾದ ಡೆಮೆಟ್ರಿಯಸ್ಸನು ಪಾಟಲಿಪುತ್ರದ ಮೇಲೆ ಆಕ್ರಮಣ ನಡೆಸಿ ಅಪಾರ ಸಂಪತ್ತನ್ನು ಸೂರೆಗೊಂಡ. ಕಳಿಂಗದ ದೊರೆಯಾದ ಖಾರವೇಲನೂ ಎರಡು ಬಾರಿ ಈ ನಗರದ ಮೇಲೆ ದಾಳಿ ಮಾಡಿದ. ಈ ಸಮಯದಲ್ಲಿದ್ದ ಮೌರ್ಯವಂಶದ ಕೊನೆಯ ದೊರೆ ಬೃಹದ್ರಥನನ್ನು ಅವನ ಶೃಂಗವಂಶೀಯ ಸೇನಾಪತಿಯಾದ ಪುಷುಮಿತ್ರನು ಕೊಂದು ಮಗಧಸಾಮ್ರಾಜ್ಯದ ಸೂತ್ರವನ್ನು ಕೈಗೆತ್ತಿಕೊಂಡ. ಇವನು ತನ್ನ ಪರಾಕ್ರಮದಿಂದ ಗ್ರೀಕ್ ಯವನರನ್ನು ಗಡಿಯಾಚೆ ಓಡಿಸಿದ.

ಪುಷ್ಯಮಿತ್ರನ ನಂತರದ ಕೆಲವು ವರ್ಷಗಳು ಪಾಟಲಿಪುತ್ರದ ಬದುಕಿನಲ್ಲಿ ಅತ್ಯಂತ ದುರ್ದೈವದಿಂದ ಕೂಡಿದ್ದವು. ಕಣ್ವ ಮತ್ತು ಶಕರ ಆಕ್ರಮಣದಿಂದ ಈ ನಗರ ತತ್ತರಿಸಿತು. ನಂತರ ಮತ್ತೊಮ್ಮೆ ಗುಪ್ತರ ಆಳ್ವಿಕೆಯಲ್ಲಿ ಈ ನಗರದ ಶೋಭೆ ಹೆಚ್ಚಿತು. ಮೊದಲನೆ ಚಂದ್ರಗುಪನಿಂದ ಪ್ರಾರಂಭವಾದ ಇವರ ಆಳ್ವಿಕೆ ಸಮುದ್ರಗುಪ್ತನ ಕಾಲದಲ್ಲಿ ವೈಭವದ ಸ್ಥಿತಿ ತಲುಪಿತು. ಇವನು ಸಾಮ್ರಾಜ್ಯವನ್ನು ವಿಸ್ತರಿಸಿ ಅಶ್ವಮೇಧವನ್ನು ಮಾಡಿದನು. ಎರಡನೆ ಚಂದ್ರಗುಪ್ತನ ಕಾಲದಲ್ಲಿ ಸುಮಾರು ಕ್ರಿ.ಶ.406ರಲ್ಲಿ ಚೀನೀ ಯಾತ್ರಿಕ ಪಾಹಿಯಾನನು ಪಾಟಲಿಪುತ್ರಕ್ಕೆ ಭೇಟಿ ನೀಡಿದ್ದ. ಇವನು ಇಲ್ಲೇ ಮೂರು ವರ್ಷ ನೆಲೆಸಿ ಸಂಸ್ಕೃತವನ್ನು ಕಲಿತನೆಂದು ಇತಿಹಾಸದಲ್ಲಿದೆ. ಗುಪ್ತ ಕಾಲವನ್ನು 'ಸ್ವರ್ಣ ಯುಗ' ಎಂದು ಕರೆದಿದ್ದಾರೆ.

ಗುಪ್ತಸಾಮ್ರಾಜ್ಯ ಪತನವಾದ ಬಳಿಕ ಮಗಧವು ಹರ್ಷನ ಸಾಮ್ರಾಜ್ಯವನ್ನು ಸೇರಿತು. ಇವನ ಕಾಲದಲ್ಲಿ ಕ್ರಿ.ಶ.637ರಲ್ಲಿ ಚೀನಿ ಯಾತ್ರಿಕ ಹುಯೇನ್ ತ್ಸಾಂಗನು ಭಾರತಕ್ಕೆ ಭೇಟಿ ನೀಡಿದ್ದ. ಹರ್ಷನು ಕನೋಜದ ಮೂಲಕ ಆಳುತ್ತಿದ್ದನಾದ್ದರಿಂದ ಪಾಟಲಿಪುತ್ರವು ತನ್ನ ಹಿರಿಮೆಯನ್ನು ಕಳೆದುಕೊಂಡಿತ್ತು. ನಂತರ ಈ ನಗರದ ಬಾಳಿನಲ್ಲಿ ಒಳ್ಳೆಯ ದಿನಗಳು ಬರಲಿಲ್ಲ, ಮುಸಲ್ಮಾನರ ಆಕ್ರಮಣಕ್ಕೂ ಇದು ತುತ್ತಾಯಿತು. ಬ್ರಿಟಿಷರೂ ಸಾಕಷ್ಟು ಅತ್ಯಾಚಾರವನ್ನು ಇಲ್ಲಿ ನಡೆಸಿದ್ದಾರೆ. 1857ರ ಸ್ವಾತಂತ್ರ್ಯ ಸಂಗ್ರಾಮ ವಿಫಲಗೊಂಡ ಬಳಿಕ ಇದು ಬ್ರಿಟಿಷರ ಅಧೀನವಾಯಿತು.

ಪಾಟಲಿಪುತ್ರವು ಪ್ರಾಚೀನ ಭಾರತದ ಅತ್ಯಂತ ಮಹತ್ವದ ನಗರವಾಗಿತ್ತು. ಈ ನಗರದ ಇತಿಹಾಸವೆಂದರೆ ಅದು ತತ್ಕಾಲೀನ ಭಾರತದ ವಿಜಯದ ಮತ್ತು ಕೀರ್ತಿ ವೈಭವಗಳ ಇತಿಹಾಸ. ಯೂರೋಪಿನ ಇತಿಹಾಸದಲ್ಲಿ ರೋಮ್‌ನಗರಕ್ಕಿರುವ ಸ್ಥಾನ ಭಾರತೀಯ ಇತಿಹಾಸದಲ್ಲಿ ಪಾಟಲಿಪುತ್ರಕ್ಕಿದೆ. ಕ್ರಿ.ಪೂ. 5ನೇ ಶತಮಾನದಿಂದ ಕ್ರಿ.ಶ. 6ನೇ ಶತಮಾನದವರೆಗಿನ ಪ್ರದೀರ್ಘ ಕಾಲಖಂಡದಲ್ಲಿ ಈ ನಗರವು ರಾಜಧಾನಿಯಾಗಿ ಗೌರವಿಸಲ್ಪಟ್ಟಿದೆ. ಈ ಅವಧಿಯಲ್ಲಿ ಇಲ್ಲಿನ ಅರಸರು ಭಾರತದಲ್ಲಿ ಮಾತ್ರವಲ್ಲ, ಭಾರತದ ಹೊರಗೂ ತಮ್ಮ ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸಿದರು. ಇಲ್ಲಿಂದ ಬೌದ್ಧಭಿಕ್ಷುಗಳು ಗಾಂಧಾರ (ಆಫ್‌ಘಾನಿಸ್ತಾನ್), ಶ್ರೀಲಂಕಾ, ಜಪಾನ್, ನೇಪಾಳ, ಟಿಬೇಟ್, ತುರ್ಕಿಸ್ತಾನ, ಚೀನ, ಬರ್ಮಾ, ಇಂಡೋನೇಷಿಯಾ ಜಾವಾ, ಸುಮಾತ್ರಾ ಇತ್ಯಾದಿ ಸುದೂರ ದೇಶಗಳಿಗೆ ಧರ್ಮದಿಗ್ವಿಜಯಕ್ಕಾಗಿ ತೆರಳಿದರು. ಈ ಎಲ್ಲ ದೇಶಗಳಲ್ಲಿ ಇಂದಿಗೂ ಭಾರತದ ಬಗ್ಗೆ ಕೃತಜ್ಞತೆ ಇದೆ. ತಕ್ಷಶಿಲೆಯ ಮೇಲೆ ವಿದೇಶಿಯರ ಆಕ್ರಮಣವಾದಾಗ ಅಲ್ಲಿನ ಆಚಾರ್ಯರು, ವಿದ್ಯಾರ್ಥಿಗಳು ಪಾಟಲಿಪುತ್ರದಲ್ಲಿ ಆಶ್ರಯ ಪಡೆದರು. ಶಾಸ್ತ್ರಕಾರರು ಮತ್ತು ವಿದ್ವಾಂಸರು ಇಲ್ಲಿನ ಪಂಡಿತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ರಾಜಮಾನ್ಯತೆ ಗಳಿಸುತ್ತಿದ್ದರು. ವರ್ಷ, ಉಪವರ್ಷ,



ದೆಹಲಿ – ಭಾರತದ ರಾಜಧಾನಿ.

ಪಾಣಿನಿ, ಪಿಂಗಳ, ವ್ಯಾಡಿ, ವರರುಚಿ, ಪತಂಜಲಿ ಮುಂತಾದ ಪಂಡಿತರೂ ಪಾಟಲಿಪುತ್ರದ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರವೇ ವಿದ್ವಾಂಸರೆಂದು ಮಾನ್ಯತೆ ಗಳಿಸಿದರು ಎಂಬುದಾಗಿ ರಾಜಶೇಖರನ 'ಕಾವ್ಯಮೀಮಾಂಸೆ'ಯಲ್ಲಿದೆ. ಖ್ಯಾತ ಖಗೋಳ ಶಾಸ್ತ್ರಜ್ಞ ಆರ್ಯಭಟನು ಜನಿಸಿದ್ದು ಪಾಟಲಿಪುತ್ರದಲ್ಲಿ.

ಇಲ್ಲಿನ ಮಹಾವಿದ್ಯಾಲಯದಲ್ಲಿ ಆಯುರ್ವೇದ ಮತ್ತು ಶಸ್ತ್ರಚಿಕಿತ್ಸೆಗಳ ಶಿಕ್ಷಣ ನೀಡಲಾಗುತ್ತಿತ್ತು. ಇಲ್ಲಿ ಶಿಕ್ಷಣ ಪಡೆದ ಶಸ್ತ್ರಚಿಕಿತ್ಸೆಯ ವಿಶಾರದರನ್ನು ಅರಬ್ ದೇಶಗಳಲ್ಲಿ ಅತ್ಯಂತ ಗೌರವದಿಂದ ಕಾಣುತ್ತಿದ್ದರು. ವಿಶೇಷ ಶಿಕ್ಷಣಕ್ಕಾಗಿ ಅರಬ್ ಬಾದಶಹನು ತನ್ನ ಹಕೀಮರನ್ನು ಪಾಟಲಿಪುತ್ರಕ್ಕೆ ಕಳುಹಿಸುತ್ತಿದ್ದ. ಅರಬ್ ಖಲೀಫನು ಎಂಟನೆ ಶತಮಾನದಲ್ಲಿ ಮಾಣಿಕ್ಯ ಮತ್ತು ಧನ್ವಂತರಿ ಎಂಬ ಇಬ್ಬರು ವಿದ್ವಾಸರನ್ನು ಚರಕ–ಸುಶ್ರುತರ ಗ್ರಂಥಗಳನ್ನು ಭಾಷಾಂತರಿಸುವ ಸಲುವಾಗಿ ಕರೆಸಿಕೊಂಡಿದ್ದ. ಕಾತ್ಯಾಯನ (ಕ್ರಿ.ಪೂ. 5ನೇ ಶತಮಾನ), ಚಾಣಕ್ಯ, ಮೆಗಾಸ್ಥನೀಸ್ (ಕ್ರಿ.ಪೂ. 4ನೇ ಶತಮಾನ) ಉಪಗುಪ್ತ (ಕ್ರಿ.ಪೂ. 3ನೇ ಶತಮಾನ), ಆರ್ಯಭಟ್ಟ (ಕ್ರಿ.ಶ. 5ನೇ ಶತಮಾನ) ಇತ್ಯಾದಿ ಅನೇಕ ಮಹನೀಯರು ಇಲ್ಲಿ ನೆಲೆಸಿದ್ದರು. ಮೌರ್ಯರ ಕಾಲದಿಂದ ಇಲ್ಲಿ ರಾಜನೀತಿ ಮತ್ತು ಗೂಢಚರ್ಯೆಗಳಿಗೆ ಸಂಬಂಧಿಸಿದ ಶಿಕ್ಷಣ ನೀಡುವ ವ್ಯವಸ್ಥೆ ಪ್ರಾರಂಭವಾಯಿತು. ಅಶೋಕನ ಕಾಲದಲ್ಲಿ ಬೌದ್ಧ ತತ್ತ್ವಜ್ಞಾನದ ಶಿಕ್ಷಣಕೇಂದ್ರವಾಗಿ ಖ್ಯಾತಿ ಪಡೆಯಿತು. ಮೌರ್ಯರ ಕಾಲದಲ್ಲಿ ಇಲ್ಲಿನ ಶಿಕ್ಷಣಮಾಧ್ಯಮ ಪಾಳಿಬಾಷೆಯಾಗಿತ್ತು. ಶುಂಗ, ಕಣ್ವ, ಗುಪ್ತ ಮುಂತಾದವರ ಕಾಲದಲ್ಲಿ ಪಾಳಿಭಾಷೆಯ ಸ್ಥಾನ ಸಂಸ್ಕೃತಕ್ಕೆ ದೊರೆಯಿತು. ಗುಪ್ತರ ನಂತರ ಪಾಟಲೀಪುತ್ರದ ಶೈಕ್ಷಣಿಕ ಮಹತ್ವ ಕಡಿಮೆಯಾಗಿ ನಲಂದಾ, ವಿಕ್ರಮಶಿಲಾ ಮುಂತಾದ ವಿದ್ಯಾಕೇಂದ್ರಗಳು ಮೇಲೆ ಬಂದವು.

ಪಾಟ್ನಾ ಒಂದು ಶಕ್ತಿಪೀಠವೂ ಆಗಿದೆ. ದಕ್ಷಯಜ್ಞದಲ್ಲಿ ಆತ್ಮಸಮರ್ಪಿಸಿದ ಸತಿದೇವಿಯ ಶರೀರವನ್ನು ಹೊತ್ತುಕೊಂಡು ಶಿವನು ಸಂಚರಿಸುತ್ತಿದ್ದಾಗ ಈ ಕ್ಷೇತ್ರದಲ್ಲಿ ಅವಳ ವಸ್ತ್ರ ಬಿದ್ದಿತು. ಆ ಕಾರಣದಿಂದ ಇಲ್ಲಿ ಪಾಟ್ನಾದೇವಿಯ ಮಂದಿರವು ನಿರ್ಮಾಣವಾಯಿತು. ಇಲ್ಲಿ ಪಾಟ್ನಾದೇವಿಯ ಎರಡು ಮಂದಿರಗಳಿವೆ. ಕ್ರಿ.ಶ.1660ರಲ್ಲಿ ಪಾಟ್ನಾದಲ್ಲಿ ಸಿಖ್ಖ್ ಸಂಪ್ರದಾಯದ ಹತ್ತನೇ ಗುರುಗಳಾದ ಗುರುಗೋವಿಂದ ಸಿಂಹರು ಜನಿಸಿದರು. ಈ ಕಾರಣದಿಂದ ಇದು ಸಿಖ್ಖಪಂಥೀಯರ ಪಾವನತೀರ್ಥವೆನಿಸಿತು. ರಾಜಾ ರಣಜಿತಸಿಂಹನು ಗೋವಿಂದ ಸಿಂಹರ ಜನ್ಮಸ್ಥಳದಲ್ಲಿ ಒಂದು ಸ್ಮೃತಿಮಂದಿರವನ್ನು ಕಟ್ಟಿಸಿದ್ದಾನೆ. ಈ ಮಂದಿರದಲ್ಲಿ ಗೋವಿಂದಸಿಂಹನು ಶೈಶವದಲ್ಲಿ ಮಲಗಿದ್ದ ತೊಟ್ಟಿಲು, ಅವರ ಪಾದುಕೆ, ಪವಿತ್ರ ಗ್ರಂಥಸಾಹೇಬಗಳನ್ನು ಇಡಲಾಗಿದೆ. ಹದಿನೈದು ದಿನಗಳಿಗೊಮ್ಮೆ ಈ ವಸ್ತುಗಳನ್ನು ಭಕ್ತರಿಗೆ ತೋರಿಸಲಾಗುವುದು ಇಲ್ಲಿರುವ ಗುರುಗ್ರಂಥ ಸಾಹೇಬವು ಗುರುಗೋವಿಂದ ಸಿಂಹರೆ ಉಪಯೋಗಿಸುತ್ತಿದ್ದರಂತೆ. ಅದರ ಮೇಲೆ ಬಾಣದಿಂದ ಅವರು ತಮ್ಮ ಹೆಸರನ್ನು ಬರೆದಿದ್ದಾರೆ.

ಧರೆಗಿಳಿದ ದಿವ್ಯತೇಜ...

# ಭಾಷ್ಯ ರಚನಾರಂಭ

–ಲೇ: ಲ.ನ.ಶಾಸ್ತ್ರೀ

ಆ ರಾತ್ರಿಯೆಲ್ಲಾ ಬಾಲಗುರುವು ತಮ್ಮ ಶಿಷ್ಯರ ನೆರವಿನಿಂದ ಓಲೆಯ ಹಸ್ತಪ್ರತಿಗಳನ್ನು ಓರಣವಾಗಿ ಜೋಡಿಸಿಟ್ಟರು. ಕೇಳಿದ ತಕ್ಷಣ ಸಿಕ್ಕುವಂತೆ ಅವುಗಳನ್ನು ಅಚ್ಚುಗಟ್ಟಾಗಿ ಅಣಿ ಮಾಡಿದರು ಶಿಷ್ಯರು. ಬ್ರಹ್ಮಸೂತ್ರಗಳು, ವೇದ ಉಪನಿಷತ್ತುಗಳು, ಸ್ಮೃತಿಗಳು ಶಾಸ್ತ್ರಗ್ರಂಥಗಳು ಇತಿಹಾಸ ಪುರಾಣಗಳು ಎಲ್ಲವೂ ಅಲ್ಲಿ ವ್ಯವಸ್ಥಿತವಾಗಿ ಪೇರಿಸಲ್ಪಟ್ಟಿತು.

ಯತಿ ಸನಂದನ, ಸದಾಶಿವ, ಪರಮೇಶ್ವರ, ಕಾಶಿಯ ರಾಮಶರ್ಮ ಲಕ್ಷ್ಮಣಮಿಶ್ರರು ಸರದಿಯಂತೆ ಗುರುವಿನ ಬಳಿ ಇದ್ದುಕೊಂಡು, ಅವರ ಸೇವೆ ಮತ್ತು ಶುಶ್ರೂಷೆ ಮಾಡುವಂತೆ ಪರಸ್ಪರ ಒಪ್ಪಂದವನ್ನು ಮಾಡಿಕೊಂಡರು. ಹೊರಗಿನ ಓಡಾಟಕ್ಕೆ, ರಾಜಾ ಬ್ರಹ್ಮಗುಪ್ತನು ಸೂಕ್ತ ವ್ಯವಸ್ಥೆ ಮಾಡಿದ್ದನು. ಬಾಲಗುರುವಿಗೂ, ಅವರ ಶಿಷ್ಯವರ್ಗಕ್ಕೂ ಪ್ರತಿನಿತ್ಯದ ಭಿಕ್ಷೆ, ಫಲಾಹಾರಗಳಿಗೆ ಸಮರ್ಪಕವಾದ ಏರ್ಪಾಡು ಮಾಡಿ ಬದರೀ ಕ್ಷೇತ್ರವಾಸಿಗಳಾದ ಹಲವರು ಬ್ರಹ್ಮಚಾರಿಗಳನ್ನು ಸೇವೆಗೆ ನೇಮಿಸಿದ್ದನು. ಒಣಗಿದ ಹಣ್ಣುಗಳು, ಹಾಲು, ಸಕ್ಕರೆ, ತುಪ್ಪ, ಬೆಣ್ಣೆ, ಗೋಧಿಯ ಹಿಟ್ಟು ಎಲ್ಲವೂ ಸಂಗ್ರಹಿಸಲ್ಪಟ್ಟವು. ಬಾಲ ಗುರುವಿನ ಶಿಷ್ಯವರ್ಗ ಹತ್ತಾರು ಜನವಲ್ಲದೆ, ಅವರೊಡನೆ ಬದರೀ ಯಾತ್ರೆಗೆಂದು ಬಂದ ಹಲವಾರು ಜನಕ್ಕೂ ಅನುಕೂಲವಾಗುವಂತೆ, ಬ್ರಹ್ಮಗುಪ್ತನು ಎಲ್ಲವನ್ನೂ ಸಿದ್ಧಮಾಡಿದ್ದನು.

ಬಾಲಗುರುವು ಮಾರನೆಯ ದಿನದಿಂದಲೇ ಗ್ರಂಥರಚನೆಯನ್ನು ಕೈಗೆತ್ತಿಕೊಂಡರು. ಶ್ರೀ ವಿಘ್ನೇಶ್ವರನನ್ನು, ಶ್ರೀ ಶಾರದೆಯನ್ನು ಮತ್ತು ಶ್ರೀ ಗುರುಗೋವಿಂದ ಭಗವತ್‌ಪಾದರನ್ನು ಪ್ರಾರ್ಥಿಸಿ, ಮನಸಾ ವಂದಿಸಿ, ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ, ಎಂದು ಗ್ರಂಥಾರಂಭ ಮಾಡಿದರು ಅವರು ಹಾಗೆ ಮಾಡಿದ ಮೊದಲ ರಚನೆಯೇ ಶ್ರೀ ಬಾದರಾಯಣ ಮುನಿ ಪ್ರಣೀತವಾದ ಬ್ರಹ್ಮಸೂತ್ರ ಭಾಷ್ಯಗ್ರಂಥ. ಶ್ರೀಬಾದರಾಯಣರನ್ನು ವಂದಿಸಿ, ತಮ್ಮ ಕೆಲಸವನ್ನು ಸುಸೂತ್ರವಾಗುವಂತೆ ಪ್ರಾರ್ಥಿಸಿದರು, ಆಚಾರ್ಯರು.



ಧಾರಿವಾಲ್ (ಪಂಜಾಬ್) – ಉಣ್ಣೆ (ತುಪ್ಪಳದ) ವಸ್ತುಗಳಿಗೆ ಪ್ರಸಿದ್ಧ ಪಡೆದಿದೆ.

ಆಚಾರ್ಯರು ಹೇಳಿದುದನ್ನು ಬರೆದುಕೊಳ್ಳಲು ಸನಂದನರೂ, ಇತರ ಶಿಷ್ಯರೂ ಸಿದ್ಧರಾಗಿ ಕುಳಿತಿದ್ದರು. ಆತ್ಮವೊಂದೇ ಪರಮಾರ್ಥ ಸತ್ಯ, ಅನಾತ್ಮವೆಲ್ಲವೂ ಮಿಥ್ಯ, ಎಂದು ತಿಳಿಸುವ, ಅದ್ವೈತ ಸಿದ್ಧಾಂತದ ಅಡಿಗಲ್ಲಾದ 'ಆತ್ಮಬ್ರಹ್ಮ' ತತ್ತ್ವವನ್ನು ಕುರಿತು ಆಚಾರ್ಯರು ತಮ್ಮ ವಿಚಾರ ಧಾರೆಯನ್ನು ಧೀರ ಗಂಭೀರವಾಗಿ ಪ್ರತಿಪಾದಿಸಲು ಆರಂಭಿಸಿದರು.

ಗ್ರಂಥರಚನೆ, ಮಧ್ಯೆ ಮಧ್ಯೆ ಶಿಷ್ಯರಿಗೆ ಅದರ ಪ್ರವಚನ ಹೀಗೆ ಸಾಗಿತು ಕಾರ್ಯಕ್ರಮ.

ವೇದಾಂತ ಸೂತ್ರಗಳೆಂದೂ ಪ್ರಸಿದ್ಧವಾಗಿರುವ ಬ್ರಹ್ಮ ಸೂತ್ರಗಳಿಗೆ ಶಾರೀರಿಕ ಮೀಮಾಂಸೆಯೆಂದೂ ಹೆಸರುಂಟು.

ಶಾರೀರಿಕ ಮೀಮಾಂಸೆ ಎಂದರೆ ಶರೀರದಲ್ಲಿ ಇರುವ ಜೀವನ ನಿಜ ಸ್ವರೂಪವನ್ನು ಕುರಿತು ಮಾಡುವ ವಿಚಾರ-ಶಾಸ್ತ್ರ, ಶರೀರದಲ್ಲಿ ತಾನು ಇರುವೆನೆಂದು ಬಗೆದು ಅಥವಾ ಶರೀರದ ಸಂಬಂಧವು ತನಗೆ ಇರುವುದೆಂದು ನಂಬಿರುವ ಜೀವನಿಗೆ ಶಾರೀರಿಕ ಎಂದು ಹೆಸರು. ಮೀಮಾಂಸೆ ಎಂದರೆ ಗಹನವಾದ ಗಾಢವಾದ ವಿಚಾರ, ಪೂಜ್ಯವಾದ ಆತ್ಮ ವಿಚಾರ, ಈ ಪ್ರಪಂಚದಲ್ಲೆಲ್ಲಾ ಗಹನವಾದದ್ದೆಂದರೆ ಬ್ರಹ್ಮ ವಸ್ತು, ಬ್ರಹ್ಮವೇ ಇದಕ್ಕೆಲ್ಲಾ, ಈ ಪ್ರಪಂಚಕ್ಕೆಲ್ಲಾ ತಿರುಳು, ಆಧಾರ ಅಥವಾ ಅಧಿಷ್ಠಾನ, ಈ ಬ್ರಹ್ಮವೇ ನಮ್ಮೆಲ್ಲರ ಆತ್ಮವಾಗಿರುವುದು. ಅದರಲ್ಲಿ ಆರೋಪಿಸಲ್ಪಡತಕ್ಕ ಕರ್ತೃತ್ವ (ನಾನು ಮಾಡುವವರು ಎಂಬ ಭಾವನೆ), ಭೋಕ್ತೃತ್ವ (ನಾನು ಭೋಗಿಸುವವನು ಎಂಬ ಭಾವನೆ) ಸ್ವರೂಪವಾದ ಸಂಸಾರವು ನಿಜವಾಗಿರುವುದಿಲ್ಲ.

ಶಾರೀರಿಕ ಎಂದರೆ ಜೀವನ, ನಿಜವಾದ ಸ್ವರೂಪವು ಕರ್ತೃತ್ವ ಭೋಕ್ತೃತ್ವವಿಲ್ಲದ ಪೂಜ್ಯವಾದ ಬ್ರಹ್ಮ ಸ್ವರೂಪವೇ ಆಗಿದೆ. ಇದನ್ನು ಎಂದರೆ ಬ್ರಹ್ಮ ವಿಚಾರವನ್ನು ತಿಳಿಸುವ ಈ ಶಾಸ್ತ್ರಕ್ಕೆ ಶಾರೀರಿಕ ಮೀಮಾಂಸೆ ಎಂದು ಹೆಸರು.

'ನೀನು' 'ನಾನು' ಎಂಬ ಅರಿವುಗಳಿಗೆ (ತಿಳಿವಿಗೆ) ಗೋಚರವಾಗಿರುವ ವಿಷಯ, ವಿಷಯವೆಂದರೆ ಆತ್ಮದ ಅರಿವಿಗೆ ಗೋಚರವಾಗುವ ಮನಸ್ಸು, ಇಂದ್ರಿಯ, ಶರೀರ ಮತ್ತು ಹೊರಜಗತ್ತು ಇವುಗಳು; ವಿಷಯ ಎಂದರೆ-ಈ ಎಲ್ಲವನ್ನು ಬೆಳಗುವ ಆತ್ಮ-ಇವುಗಳು ಕತ್ತಲೆ ಬೆಳಕುಗಳಂತೆ ಒಂದಕ್ಕೊಂದು ವಿರುದ್ಧವಾದ ಸ್ವಭಾವವುಳ್ಳವುಗಳು. ಇವುಗಳಲ್ಲಿ ಒಂದರ ಧರ್ಮವು ಮತ್ತೊಂದರಲ್ಲಿ ಇಲ್ಲ, ಎಂದರೆ ಆತ್ಮನ ಧರ್ಮಗಳಾದ ಚೈತನ್ಯ, ವಿಷಯಿತ್ವ, ಸಾಕ್ಷಿತ್ವ, ಅವಿಕಾರಿತೆ ಇವು ಅನಾತ್ಮನಾದ 'ವಿಷಯ'ದಲ್ಲಿ ಇಲ್ಲ. ಹಾಗೆಯೇ ಅನಾತ್ಮನ ಧರ್ಮಗಳಾದ ಜಡತ್ವ, ವಿಷಯತ್ವ, ವಿಕಾರವಾಗುವಿಕೆ ಮುಂತಾದುವು ಆತ್ಮನಾದ ವಿಷಯಿಯಲ್ಲಿಯೂ ಇರುವುದಿಲ್ಲ.

ಆದ್ದರಿಂದ 'ನಾನು' ಎಂಬ ಅರಿವಿಗೆ ಗೋಚರವಾಗಿಯೂ, ಜ್ಞಾನ ಸ್ವರೂಪವಾಗಿಯೂ ಇರುವ ವಿಷಯಿಯಲ್ಲಿ (ಆತ್ಮನಲ್ಲಿ) ನೀನು ಎಂಬ ಅರಿವಿಗೆ ಗೋಚರವಾಗುವ ವಿಷಯವನ್ನು (ದೇಹಾದಿ ಅನಾತ್ಮವನ್ನು) ಅದರ ಧರ್ಮಗಳನ್ನೂ ಅಧ್ಯಾಸ ಮಾಡುತ್ತಾರೆಂಬುದೂ (ಆರೋಪಿಸುವುದು) ಇದಕ್ಕೆ ವಿಪರೀತವಾಗಿ ವಿಷಯಿಯನ್ನೂ (ಆತ್ಮವನ್ನು) ಅದರ ಧರ್ಮಗಳನ್ನೂ ವಿಷಯದಲ್ಲಿ (ಅನಾತ್ಮದಲ್ಲಿ) ಅಧ್ಯಾಸ ಮಾಡುತ್ತಾರೆಂಬುದೂ 'ಮಿಥ್ಯಾ' ಎಂದಾಗಬೇಕು.

ಹೀಗಿದ್ದರೂ ಒಂದರ ಸ್ವರೂಪವನ್ನು (ಆತ್ಮನ) ಮತ್ತೊಂದರಲ್ಲಿ (ಅನಾತ್ಮವಾದ ಶರೀರಾದಿಗಳಲ್ಲಿ) ಒಂದರ ಧರ್ಮವನ್ನು (ಆತ್ಮನ) ಮತ್ತೊಂದರಲ್ಲಿ (ಅನಾತ್ಮವಾದ ಶರೀರಾದಿಗಳಲ್ಲಿ) ಜನರು ವ್ಯವಹರಿಸುತ್ತಾರೆ. ಅತ್ಯಂತ ವಿರುದ್ಧವಾಗಿರುವ ಈ ಆತ್ಮ ಅನಾತ್ಮರ ಸ್ವರೂಪವನ್ನು ವಿಂಗಡಿಸಿ, ತಿಳಿದುಕೊಳ್ಳದೇ ಇರುವುದೇ ಈ ತಪ್ಪು ತಿಳುವಳಿಕೆಗೆ ದುಃಖಗಳಿಗೆ ಕಾರಣವಾಗಿರುವುದು. ಆತ್ಮನು ಸತ್ಯ, ದಿಟ 'ಅನಾತ್ಮನು ಮಿಥ್ಯಾ, ಸಟೆ; ಇದನ್ನು ಅರಿಯದೆ ಸಟೆಯಾದ ಅನಾತ್ಮನಲ್ಲಿ 'ನಾನು' 'ನನ್ನದು' (ದೇಹದಲ್ಲಿ ನಾನು ಎಂಬ ಭಾವನೆ, ಇಂದ್ರಿಯ ಇತ್ಯಾದಿ ನನ್ನದು ಎಂಬ ಭಾವನೆ) ಎಂದು ಭಾವಿಸಿಕೊಂಡು ಜನರು ವ್ಯವಹರಿಸುತ್ತಾರೆ, ಇದೇ ಅಧ್ಯಾಸ.

ಹಿಂದೆ ಒಮ್ಮೆ ಕಂಡಿದ್ದ ಒಂದು ವಸ್ತುವು ಮತ್ತೊಂದರಲ್ಲಿ ಸ್ಮೃತಿರೂಪವಾಗಿ ತೋರುವುದೇ ಅಧ್ಯಾಸ. ಒಂದರಲ್ಲಿ ಮತ್ತೊಂದರ ಧರ್ಮವು ತೋರುವುದೇ ಅಧ್ಯಾಸ. ಕತ್ತಲಲ್ಲಿ ಇರುವ ಹಗ್ಗವು ಹಾವಿನಂತೆ ಕಾಣುತ್ತದೆ. ಮೋಟು ಮರವು ಮನುಷ್ಯನಂತೆ ಕಾಣುತ್ತದೆ. ಮರಳರಾಶಿಯ ಮೇಲೆ ಬಿದ್ದಿರುವ ಕಪ್ಪೆಯ ಚಿಪ್ಪು ಬೆಳ್ಳಿಯ ತಗಡಿನ ಹಾಗೆ ತೋರುತ್ತದೆ. ಬಿಸಿಲಲ್ಲಿ ಮರೀಚಿಕೆಯು ನೀರಿನಂತೆ ಕಾಣುತ್ತದೆ. ಒಬ್ಬ ಚಂದ್ರನೊಡನೆ ಇನ್ನೊಬ್ಬ ಚಂದ್ರನಿರುವಂತೆ ತೋರುತ್ತಾನೆ. (ಕಣ್ಣು ಕೆಳರೆಪ್ಪೆಯ ತಳಭಾಗವನ್ನು, ಮೃದುವಾಗಿ ಮೇಲಕ್ಕೆ ಒತ್ತಿದರೆ ಎಲ್ಲವೂ ಎರಡೆರಡಾಗಿ ತೋರುತ್ತದೆಯಲ್ಲವೆ?)

ಇಂತಹ ಲಕ್ಷಣವುಳ್ಳ ಅಧ್ಯಾಸವನ್ನು ವಿದ್ವಾಂಸರು 'ಅವಿದ್ಯೆ'ಯೆಂದು ಕರೆಯುತ್ತಾರೆ. ಅದನ್ನು ವಿವೇಚನೆ ಮಾಡಿ ಯಾವುದು ಆತ್ಮ ಯಾವುದು ಅನಾತ್ಮ, ಎಂಬ ವಸ್ತು ಸ್ವರೂಪವನ್ನು ನಿಶ್ಚಯಿಸುವುದನ್ನು 'ವಿದ್ಯೆ'ಯೆನ್ನುತ್ತಾರೆ.

ಅಧ್ಯಾಸವೆಂದರೆ ಅಲ್ಲದ್ದನ್ನು ಅದೆಂದು ಭಾವಿಸಿಕೊಂಡು ಪರಿತಪಿಸುವುದು. ಹೇಗೆಂದರೆ ಹೆಂಡತಿ ಮಕ್ಕಳು ಬಡವಾದರೆ ಅಥವಾ ಮೈಗೂಡಿಕೊಂಡರೆ ತಾನೆ ಬಡವಾದೆ ತಾನೇ ಮೈಗೂಡಿಕೊಂಡೆ, ಎಂದು ಭಾವಿಸಿಕೊಳ್ಳುವುದು (ಅಧ್ಯಾಸ ಮಾಡಿಕೊಳ್ಳುವುದು)

ಹಾಗೆಯೇ ನಾನು ದಪ್ಪ, ನಾನು ತೆಳ್ಳಗಿದ್ದೇನೆ. ನಾನು ಬಡವನಾಗಿದ್ದೇನೆ, ನಡೆಯುತ್ತಿದ್ದೇನೆ ಇತ್ಯಾದಿ ದೇಹದ ಧರ್ಮಗಳನ್ನೂ; ನಾನು ಮೂಕ, ನಾನು ಬಧಿರ, ನಾನು ಕುರುಡ ಇತ್ಯಾದಿ ಇಂದ್ರಿಯ ಧರ್ಮಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುತ್ತಾನೆ. ಇದರಂತೆಯೇ ಅಂತಃಕರಣದ (ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ) ಧರ್ಮಗಳಾದ-ಬಯಸುವುದು, ಯೋಚಿಸುವುದು, ಸಂಶಯ



ಫಿರೋಜಾಬಾದ್ (ಉತ್ತರ ಪ್ರದೇಶ) – ಗಾಜಿನ ಬಳೆಯ ಉದ್ಯಮಕ್ಕೆ ಹೆಸರಾಗಿದೆ.

ಪಡುವುದು, ನಿಶ್ಚಯಿಸುವುದು ಇವುಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುತ್ತಾನೆ. ಇದೇ ಅಧ್ಯಾಸವೇ ಎಲ್ಲ ದುಃಖಗಳಿಗೂ, ಎಲ್ಲ ಅನರ್ಥಗಳಿಗೂ ಕಾರಣ.

ಇದಕ್ಕೆಲ್ಲಾ– ಈ ದುಃಖ ಅನರ್ಥಗಳಿಗೆಲ್ಲಾ ಕಾರಣವಾಗಿರುವ ಈ ಅಧ್ಯಾಸವನ್ನು ನಾಶಗೊಳಿಸುವುದಕ್ಕೆ, ಆತ್ಮೈಕತ್ವ ವಿದ್ಯೆಯು ದೊರಕಲೆಂದು ವೇದಾಂತಗಳಾದ ಉಪನಿಷತ್ತುಗಳೆಲ್ಲಾ ಹೊರಟಿವೆ. ಸರ್ವ ವೇದಾಂತಗಳಿಗೂ ಇದೇ ಆತ್ಮೈಕತ್ವವೇ ತಾತ್ಪರ್ಯ. ಇದು ಹೇಗೆಂಬುದನ್ನು ನಾವು ಈ ಶಾರೀರಿಕ ಮೀಮಾಂಸೆಯಲ್ಲಿ ತೋರಿಸಿಕೊಡುತ್ತೇವೆ.

ಇದಿಷ್ಟನ್ನೂ ಉಪೋದ್ಘಾತರೂಪವಾಗಿ ಹೇಳಿ ಬರೆಯಿಸಿ, ಆಚಾರ್ಯರ ಬ್ರಹ್ಮಸೂತ್ರದ ಮೊದಲ ಸೂತ್ರವನ್ನು ಕೈಗೆತ್ತಿಕೊಂಡರು.

ಶ್ರೀರಾಮ ಕಥಾಸಾರ...

# ಋಷ್ಯಶೃಂಗನ ಅಯೋಧ್ಯಾಗಮನ

–ಲೇ: ಶ್ರೀ ಬಸ್ತಿ ಸದಾನಂದ ಪೈ

ದಶರಥನು ಅಶ್ವಮೇಧಯಾಗ ಮಾಡುವ ನಿಶ್ಚಯ ಕೈಗೊಂಡು ಅದರ ಸಿದ್ಧತೆಯ ಬಗ್ಗೆ ಮಂತ್ರಿ ಸುಮಂತ್ರನಿಗೆ ಆಜ್ಞಾಪಿಸುತ್ತಾನೆ. ಗುರುಗಳಾದ ವಸಿಷ್ಠರಾದಿಯಾಗಿ ಎಲ್ಲರೂ ಮಹದಾನಂದ ಹೊಂದುತ್ತಾರೆ.

ಮಂತ್ರಿಯಾದ ಸುಮಂತ್ರನು ದಶರಥನನ್ನು ಏಕಾಂತದಲ್ಲಿ ಕಂಡು, ನೀನು ಅಶ್ವಮೇಧಯಾಗ ಮಾಡುವ ವಿಚಾರವನ್ನು ಪೂರ್ವದಲ್ಲಿ ಸನತ್ಕುಮಾರ ಮಹರ್ಷಿಯು ಇತರ ಋಷಿಗಳ ಸಮ್ಮುಖದಲ್ಲಿ ಹೇಳಿದ್ದನ್ನು ಕೇಳಿದ್ದೇನೆ. ಮುಂದೆ ನಡೆಯತಕ್ಕ ವಿಚಾರವೆಂದು ಕಥಾರೂಪದಲ್ಲಿ ಹೇಳಿದ ವಿಷಯ ನಿನಗೆ ಅನುಕೂಲವಾಗಲಿದೆ. ಅದನ್ನು ನಿನಗೆ ಸತ್ಯವಾಗಿ ತಿಳಿಸುತ್ತೇನೆ.

ಇಕ್ಷ್ವಾಕು ವಂಶದಲ್ಲಿ ಸಂಪದ್ಯುಕ್ತನೂ ಸತ್ಯಪ್ರತಿಜ್ಞನೂ ಧರ್ಮನಿಷ್ಠನು ಆದ ದಶರಥನೆಂಬ ರಾಜನು ಅಯೋಧ್ಯೆಯನ್ನಾಳುವನು. ಅವನಿಗೆ ಮಕ್ಕಳಿಲ್ಲದ್ದರಿಂದ ಅಶ್ವಮೇಧಯಾಗ ಮಾಡಬೇಕೆಂದು ತೀರ್ಮಾನಿಸುತ್ತಾನೆ. ಅಂಗದೇಶದಲ್ಲಿ ರೋಮಪಾದನೆಂಬ ದಶರಥನ ಸ್ನೇಹಿತನು ರಾಜ್ಯವಾಳುತ್ತಿದ್ದನು. ಯಾಗ ಮಾಡಲು ಅಂಗದೇಶದಿಂದ ಮಹಾಮಹಿಮನಾದ ಋಷ್ಯಶೃಂಗನನ್ನು ಕರೆದುತರುತ್ತಾನೆ.

ಋಷ್ಯಶೃಂಗ ಮುನಿಯು ಮಹಾಮಹಿಮನು. ಕಶ್ಯಪ ಋಷಿಗೆ ವಿಭಾಂಡಕನೆಂಬ ಮಗನಿದ್ದನು. ಅವನ ಮಗ ಋಷ್ಯಶೃಂಗ. ಬ್ರಾಹ್ಮಣ ಶ್ರೇಷ್ಠನಾದ ಋಷ್ಯಶೃಂಗ ಮುನಿಯು ಕಾಡಿನಲ್ಲಿಯೇ ಹುಟ್ಟಿ ಕಾಡಿನಲ್ಲಿಯೇ ಬೆಳೆದಿರುವುದರಿಂದ ತಂದೆಯ ವಿನಹ ಬೇರೆ ಯಾರನ್ನು ನೋಡಿರುವುದಿಲ್ಲ.

ಅಂಗರಾಜ್ಯದಲ್ಲಿ ರೋಮಪಾದನ ಅಧರ್ಮದಿಂದಾಗಿ ಭೀಕರ ಕ್ಷಾಮ ಉಂಟಾಗುವುದು. ಕ್ಷಾಮದಿಂದ ಭೀತಿಯುಂಟಾಗಿ ಪಶ್ಚಾತ್ತಾಪ ಪಟ್ಟು ಬ್ರಾಹ್ಮಣರನ್ನು ಕರೆಸಿ ಪ್ರಾಯಶ್ಚಿತ್ತ ರೂಪವಾದ ವಿಧಾನವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾನೆ. ಬ್ರಾಹ್ಮಣರು ವಿಭಾಂಡಕ ಮುನಿಯ ಪುತ್ರನಾದ ಧರ್ಮಾತ್ಮನಾದ ಋಷ್ಯಶೃಂಗನನ್ನು ಇಲ್ಲಿಗೆ ಕರೆತಂದು ಸತ್ಕರಿಸಿ ನಿಲ್ಲಿಸಿಕೋ, ಅದರಿಂದ ರಾಜ್ಯಕ್ಕೆ ಕ್ಷೇಮ ಉಂಟಾಗುವುದು ಎಂದು ತಿಳಿಸುತ್ತಾರೆ.

ಋಷ್ಯಶೃಂಗ ಮುನಿಯನ್ನು ಕಾಡಿನಿಂದ ಕರೆತರಲು ಮಂತ್ರಿಗಳಿಗೂ ಪುರೋಹಿತರಿಗೂ ಹೇಳುವನು. ನಾವು ಅವನನ್ನು ಕರೆತರಲು ಭಯಪಡುವೆವು ನಾವು ಹೋಗಲಾರೆವು ಎಂದು ವಿಜ್ಞಾಪಿಸಿಕೊಳ್ಳುತ್ತಾರೆ. ಮುಂದೇನು ಮಾಡಬೇಕೆಂದು ರೋಮಪಾದನು ಚಿಂತಿಸುತ್ತಿರುವಾಗ ಮಂತ್ರಿಗಳು ಅಪಾಯವಿಲ್ಲದ ಉಪಾಯವನ್ನು ನಾವು ಯೋಚಿಸಿದ್ದೇನೆ. ಮುನಿಯು ಕಾಡಿನಲ್ಲಿಯೇ ಹುಟ್ಟಿ ಕಾಡಿನಲ್ಲಿಯೇ ಬೆಳೆದಿರುವುದರಿಂದ ಸ್ತ್ರೀಯರನ್ನು ವಿಷಯಸುಖವನ್ನೂ ಕಂಡವನಲ್ಲ. ವೇಶ್ಯಾಸ್ತ್ರೀಯರು ನಾನಾ ಉಪಾಯಗಳಿಂದ ಅವನನ್ನು ವಂಚಿಸಿ ಇಲ್ಲಿಗೆ ಕರೆದುತರುವಂತೆ ಮಾಡು ಎನ್ನುತ್ತಾರೆ. ರೋಮಪಾದನು ಅದನ್ನು ಸಮ್ಮತಿಸುತ್ತಾನೆ.

ಋಷಿಪುತ್ರನು ಯಾವಾಗಲೂ ಆಶ್ರಮದಿಂದ ಹೊರಬರುತ್ತಿರಲಿಲ್ಲ. ಸದಾ ತಂದೆಯನ್ನು ಉಪಚರಿಸುತ್ತಾ ಅದರಿಂದಲೇ ತೃಪ್ತಿಪಡುತ್ತಿದ್ದನು. ಮಂತ್ರಿಗಳ ಆದೇಶದಂತೆ ಉತ್ತಮರಾದ ವೇಶ್ಯಾ ಸ್ತ್ರೀಯರು ಚೆನ್ನಾಗಿ ಶೃಂಗರಿಸಿಕೊಂಡು ಆಶ್ರಮದ ಸಮೀಪದಲ್ಲಿ ತಿರುಗುತ್ತಾ ಆತನ ದರ್ಶನಕ್ಕಾಗಿ ಕಾಯುತ್ತಿದ್ದರು. ಒಂದು ದಿನ ಅಕಸ್ಮಾತ್ತಾಗಿ ಆ ಋಷಿಯು ಸ್ತ್ರೀಯರಿರುವ ಪ್ರದೇಶಕ್ಕೆ ಬರುತ್ತಾನೆ. ವಿಚಿತ್ರವಾಗಿ ವೇಷಭೂಷಣಗಳನ್ನು ತೊಟ್ಟು ಇಂಪಾದ ಸ್ವರದಿಂದ ಗಾನಮಾಡುತ್ತಾ ಋಷಿ ಪುತ್ರನ ಬಳಿಗೆ ಬಂದ ಬ್ರಾಹ್ಮಣನೇ ನೀನು ಯಾರು? ಏತಕ್ಕಾಗಿ ಇಲ್ಲಿದ್ದಿಯಾ? ಜನರಹಿತವಾದ ಘೋರಾರಣ್ಯದಲ್ಲಿ ಒಬ್ಬನೇ ಯಾಕೆ ಸಂಚರಿಸುವೆ? ಎಂದು ಕೇಳುತ್ತಾರೆ.

ಮನಸೆಳೆಯುವ ರೂಪವುಳ್ಳ ಆ ಸ್ತ್ರೀಯರನ್ನು ಕಂಡು ಸ್ನೇಹಭಾವದಿಂದ ತನ್ನ ತಂದೆ ವೃತ್ತಾಂತವನ್ನು ತಿಳಿಸುವನು. ತನ್ನ ಆಶ್ರಮಕ್ಕೆ ಬರುವಂತೆ ಅವರನ್ನು ಆಹ್ವಾನಿಸುವನು. ಸ್ತ್ರೀಯರೆಲ್ಲರೂ ಆಶ್ರಮಕ್ಕೆ ಹೋಗಿ ಮುನಿಯಿಂದ ಸತ್ಕರಿಸಲ್ಪಟ್ಟ ನಂತರ ಅವರೆಲ್ಲರೂ ಅವನಿಗಾಗಿ ಕೆಲವು ಭಕ್ಷ್ಯಗಳನ್ನು ಕೊಟ್ಟು ಇದನ್ನು ತಿನ್ನು ನಿನಗೆ ಮಂಗಳವಾಗಲಿ ಎನ್ನುತ್ತಾರೆ. ಎಂದೂ ಕಾಣದ ಪದಾರ್ಥಗಳನ್ನು ಹಣ್ಣುಗಳೆಂದೇ ತಿಳಿದು ತಿನ್ನುವನು. ಅವನ ತಂದೆಗೆ ಭಯಪಟ್ಟವರಂತೆ ತೋರಿಸಿಕೊಳ್ಳುತ್ತಾ ಸ್ತ್ರೀಯರು ಆಶ್ರಮದಿಂದ ಹೊರಡುತ್ತಾರೆ. ಅವರು ಹೊರಟುಹೋದ ನಂತರ ಋಷಿಗೆ ಮನಸ್ಸಿನಲ್ಲಿ ಕಳವಳ ಉಂಟಾಗುತ್ತದೆ.



ಗಾಜಿಪುರ (ಉತ್ತರ ಪ್ರದೇಶ) – ಸರ್ಕಾರದ ಅಫೀಮ್ ಕಾರ್ಖಾನೆ ಇದೆ.

ಮರುದಿನ ಕೂಡಾ ಅದೇ ಸಮಯಕ್ಕೆ ಸರಿಯಾಗಿ ಸ್ತ್ರೀಯರಿದ್ದ ಪ್ರದೇಶಕ್ಕೆ ಹೋಗುತ್ತಾನೆ. ಆಗ ಅವರೆಲ್ಲರೂ ಬ್ರಾಹ್ಮಣನೇ ನೀನು ನಮ್ಮ ಆಶ್ರಮಕ್ಕೆ ಬಂದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ನಿನ್ನನ್ನು ಸತ್ಕರಿಸುವೆವು ಎಂದು ಹೇಳುತ್ತಾರೆ. ಅವರು ಹೃದಯಂಗಮವಾಗಿ ಮಾತಾಡಿದ್ದನ್ನು ಕೇಳಿ ಅವರೊಂದಿಗೆ ಹೊರಡುವುದಕ್ಕೆ ಮನಸ್ಸು ಮಾಡುತ್ತಾನೆ. ಆ ವೇಶ್ಯಾಸ್ತ್ರೀಯರು ಹೀಗೆ ಅವನನ್ನು ರಾಜನ ಅರಮನೆಗೆ ಕರೆದುಕೊಂಡು ಬರುತ್ತಾರೆ.

ಮಹಾತ್ಮನಾದ ವಿಪ್ರನು ರಾಜ್ಯಕ್ಕೆ ಬಂದೊಡನೆ ಪರ್ಜನ್ಯನಿಯ ಚೆನ್ನಾಗಿ ಮಳೆಗರೆಯುತ್ತಾನೆ. ಕ್ಷಾಮ ತೊಲಗುತ್ತದೆ. ಜನರೆಲ್ಲಾ ಸಂತೋಷಭರಿತರಾಗುವರು. ಅವನನ್ನು ವಂಚಿಸಿ ಕರೆತಂದುದಕ್ಕಾಗಿ ರೋಮಪಾದನು ಕ್ಷಮೆ ಯಾಚಿಸುತ್ತಾನೆ. ಅವನನ್ನು ಅರಮನೆಯಲ್ಲಿಯೇ ನಿಲ್ಲಿಸಿಕೊಳ್ಳುತ್ತಾನೆ.

ಅಂತಹ ಧರ್ಮಾತ್ಮನಾದ ಋಷ್ಯಶೃಂಗನನ್ನು ದಶರಥನು ಅಯೋಧ್ಯೆಗೆ ಕರೆದುಕೊಂಡು ಹೋಗಿ ಅವನಿಂದ ಯಾಗ ಮಾಡಿಸಿ ಮಕ್ಕಳನ್ನು ಪಡೆಯುತ್ತಾನೆ ಎಂದು ಕೃತಯುಗದಲ್ಲಿಯೇ ಹೇಳಿದ್ದಾರೆ. ಆದ್ದರಿಂದ ನೀನು ಮಂತ್ರಿಗಳಿಂದೊಡಗೂಡಿ ಅಂಗದೇಶಕ್ಕೆ ಹೋಗಿ ರೋಮಪಾದನನ್ನು ಕಂಡು ಋಷ್ಯಶೃಂಗನನ್ನು ಕಳುಹಿಸುವಂತೆ ಕೇಳುವವನಾಗು ಎಂದು ಹೇಳುತ್ತಾನೆ.

ಸುಮಂತ್ರನ ಮಾತಿನಿಂದ ಸಂತೋಷಪಟ್ಟ ದಶರಥನು ಅಂತಃಪುರದ ಸ್ತ್ರೀಯರನ್ನೂ, ಸೈನ್ಯವನ್ನು ತೆಗೆದುಕೊಂಡು ವಸಿಷ್ಠರ ಅಪ್ಪಣೆ ಪಡೆದು ಅಂಗದೇಶಕ್ಕೆ ಹೋಗುತ್ತಾನೆ. ಸ್ನೇಹಿತನಾದ ದಶರಥನು ಬಂದುದನ್ನು ಕಂಡು ಧರ್ಮಶಾಲಿಯಾದ ರೋಮಪಾದನು ಆತನನ್ನು ಸತ್ಕರಿಸಿ ಕುಶಲವನ್ನು ವಿಚಾರಿಸಿ ಬಂದ ಕಾರಣವನ್ನು ಕೇಳುತ್ತಾನೆ.

ಋಷ್ಯಶೃಂಗನನ್ನು ಮಗಳು ಶಾಂತಾದೇವಿಯನ್ನು ನಮ್ಮ ರಾಜ್ಯಕ್ಕೆ ಕಳುಹಿಸು, ಅವರಿಂದ ಮಹತ್ತರವಾದ ಕಾರ್ಯವಾಗಬೇಕಾಗಿದೆ ಎಂದು ತಿಳಿಸುತ್ತಾನೆ. ರೋಮಪಾದನು ಅದಕ್ಕೆ ಸಮ್ಮತಿಸಿ ಋಷ್ಯಶೃಂಗನಿಗೆ ತನಗೂ ದಶರಥನಿಗೂ ಇರುವ ಸ್ನೇಹದ ವಿಚಾರ ತಿಳಿಸಿ, ದಶರಥನು ಬಂದ ಕಾರಣವನ್ನು ತಿಳಿಸುತ್ತಾನೆ. ಋಷ್ಯಶೃಂಗನು ಅದಕ್ಕೆ ಸಮ್ಮತಿಸಿ ದಶರಥನೊಡನೆ ಅಯೋಧ್ಯೆಗೆ ಬರುತ್ತಾನೆ. ದಶರಥನು ಶಾಂತಾದೇವಿಯನ್ನೂ ಕರೆತರುತ್ತಾನೆ.

ಅಯೋಧ್ಯೆಯ ಪ್ರಜೆಗಳಿಗೆ ಬಹಳ ಸಂತೋಷವಾಗುತ್ತದೆ. ಋಷ್ಯಶೃಂಗನನ್ನು ವಿಶೇಷವಾಗಿ ಸತ್ಕರಿಸಿ, ಯಥಾವತ್ತಾಗಿ ಪೂಜಿಸಿ ದಶರಥನು ಕೃತಾರ್ಥನಾದೆನೆಂದು ಭಾವಿಸುತ್ತಾನೆ. ಶಾಂತಾದೇವಿಯು ಅಂತಃಪುರದ ಸ್ತ್ರೀಯರಿಂದಲೂ ರಾಜನಿಂದಲೂ ಪೂಜಿಸಲ್ಪಡುತ್ತಾಳೆ ಮತ್ತು ಕೆಲವು ಕಾಲ ಸುಖವಾಗಿ ಅಲ್ಲಿಯೇ ಇರುತ್ತಾಳೆ.

ವಸಂತಕಾಲ ಪ್ರಾಪ್ತವಾದೊಡನೆ ವಸಿಷ್ಠರ ಹಿರಿತನದಲ್ಲಿ ಋಷ್ಯಶೃಂಗನು ದಶರಥನಿಗಾಗಿ ಪುತ್ರಕಾಮೇಷ್ಠಿ ಯಾಗ ಮಾಡುತ್ತಾನೆ. ಅಗ್ನಿಯಿಂದ ಎದ್ದುಬಂದ ಪ್ರಜಾಪತ್ಯು ಪ್ರಸಾದರೂಪವಾಗಿ ಪಾಯಸ ಕೊಟ್ಟು ದಶರಥನ ಮನದಿಚ್ಛೆಯನ್ನು ಪೂರೈಸುತ್ತಾನೆ.

ಪ್ರತಿಯೊಂದು ಕಾರ್ಯವೂ ಧರ್ಮರೀತ್ಯಾ ಧರ್ಮಾತ್ಮರಿಂದಲೇ ನಡೆಸಬೇಕು. ಆಗ ದೇವತೆಗಳು ನಮ್ಮ ಮನಸ್ಸಿನ ಕೋರಿಕೆಗಳನ್ನು ಈಡೇರಿಸುತ್ತಾರೆ ಎಂಬುದಕ್ಕೆ ಋಷ್ಯಶೃಂಗ ಮುನಿಗಳನ್ನು ಕರೆತಂದು ದಶರಥನು ಯಾಗಮಾಡಿಸಿದ್ದೇ ಉದಾಹರಣೆಯಯಾಗಿದೆ.

ಈಗಲೂ ನಮ್ಮಲ್ಲಿ ದುಷ್ಕೃತ್ಯಗಳಲ್ಲಿ ತೊಡಗಿದವನಿಗೆ ನೀನಿದ್ದಲ್ಲಿ ಮಳೆಯೂ ಬರುವುದಿಲ್ಲ. ಎಂದು ಹೇಳುವ ರೂಢಿಯಿದೆ. ಹಾಗೆಯೇ ಸಜ್ಜನರ ಸಂಗ ಹೆಜ್ಜೇನು ಸವಿದಂತೆ. ಅಷ್ಟು ಸಂತೋಷ ಕೊಡುತ್ತದೆ ಎಂಬುದು ಪ್ರಚಲಿತವಿರುವ ಹಿರಿಯರ ನುಡಿ.

# ಮನೆಮದ್ದು.

–ಸಂಗ್ರಹ: ಸಿ.ಆರ್.ಜನಾರ್ಧನ

1. ಮೂತ್ರವಿಸರ್ಜನೆ ಸಲೀಸಾಗುವುದಕ್ಕೆ ಕಲ್ಲಂಗಡಿ ಹಣ್ಣು ನೆರವಾಗುತ್ತದೆ. ಕಲ್ಲಂಗಡಿ ಹಣ್ಣಿಗೆ ನಿಂಬೆಯ ರಸ ಬೆರಸಿ, ಸೇವಿಸಿದರೆ ವಿಪರೀತ ಬಾಯಾರಿಕೆಯಾಗುವುದು ತಪ್ಪುತ್ತದೆ, ದೇಹದಲ್ಲಿ ಜಲಾಂಶದ ಕೊರತೆಯಿದ್ದರೆ ನಿವಾರಣೆಯಾಗುತ್ತದೆ.

2. ನೇರಳೆ ಹಣ್ಣಿನ ಶರಬತ್ತು ಕುಡಿದರೆ ಬೇಧಿ ವಾಸಿ. ಶರಬತ್ತಿಗೆ ಜೇನುತುಪ್ಪ ಬೆರಸಿ ಸೇವಿಸಿದರೆ ಅಂಗೈ, ಅಂಗಾಲು ಉರಿ ಉಪಶಮನ.

3. ಚೇಳುಕುಟುಕಿದರೆ, ಆ ಜಾಗಕ್ಕೆ ಮೂಲಂಗಿ ಮತ್ತು ಉಪ್ಪು ಅರೆದು ಲೇಪಿಸಿರಿ. ವಿಷ ಏರುವುದಿಲ್ಲ, ಉರಿ ನಿಲ್ಲುತ್ತದೆ. ಬೆಳ್ಳುಳ್ಳಿ ಎಸಳನ್ನು ಅರೆದು ಲೇಪಿಸುವುದು ಮತ್ತೊಂದು ಮದ್ದು.

4. ನಿಂಬೆ ರಸದೊಂದಿಗೆ ಹಾಲಿನ ಕೆನೆ ಮತ್ತು ಕಡಲೆಹಿಟ್ಟು ಕಲಸಿ ದಿನಾ ಮುಖಕ್ಕೆ ಹಚ್ಚಿಕೊಂಡರೆ ಚರ್ಮ ಮೃದುವಾಗುತ್ತದೆ, ಮುಖದ ಕಾಂತಿ ಹೆಚ್ಚುತ್ತದೆ. ನಿಂಬೆರಸವನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡುವುದರಿಂದ ಕೂದಲ ಕಾಂತಿಯೂ ಹೆಚ್ಚುತ್ತದೆ.



ಗಯಾ (ಬಿಹಾರ) – ಬುದ್ಧನಿಗೆ ಜ್ಞಾನೋದಯವಾದ ಸ್ಥಳ. ಹಿಂದೂಳಿಗೂ ಪವಿತ್ರ ಕ್ಷೇತ್ರ.

5. ಬಾಳೆಹಣ್ಣನ್ನು ಜೇನುತುಪ್ಪ ಮತ್ತು ಸಕ್ಕರೆಯೊಂದಿಗೆ ಸೇವಿಸಿದರೆ ಕೆಮ್ಮು ಮತ್ತು ಎದೆನೋವು ಉಪಶಮನವಾಗುತ್ತದೆ. ಬಾಳೆಹಣ್ಣಿನ ತಿರುಳನ್ನು ಹಾಲುಸಕ್ಕರೆಯೊಂದಿಗೆ ಮಕ್ಕಳಿಗೆ ನೀಡಿದರೆ ಮಲಬದ್ಧತೆಯೂ ನಿವಾರಣೆಯಾಗುವುದು.

6. ಬದನೆಕಾಯಿ ಹೋಳುಗಳನ್ನು ನೆನೆಸಿದ ನೀರಲ್ಲಿ ಹಾಕಿ, ಅದರಲ್ಲಿ ಕೈತೊಳೆಯುತ್ತಿದ್ದರೆ ಬೆವರುವುದು ನಿಲ್ಲುತ್ತದೆ. ನೆಲ್ಲಿಕಾಯಿ ರಸವನ್ನು ಅಂಗೈಗೆ ಹಚ್ಚಿಕೊಂಡು ಎರಡು ಗಂಟೆ ತೊಳೆಯದೇ ಬಿಟ್ಟರೂ ಇದೇ ಫಲಿತಾಂಶ.

7. ಮೆಂತ್ಯವನ್ನು ನೀರಿನಲ್ಲಿ ನೆನೆಹಾಕಿ, ನುಣ್ಣಗೆ ಅರೆದು, ಹಾಲಿನೊಂದಿಗೆ ಬೆರೆಸಿ, ರಾತ್ರಿ ಮಲಗುವುದಕ್ಕೆ ಮುಂಚೆ ಮುಖಕ್ಕೆ ಈ ಮಿಶ್ರಣವನ್ನು ಲೇಪಿಸಿ. ಮರುದಿನ ಬೆಳಿಗ್ಗೆ ಬಿಸಿನೀರಿನಿಂದ ಮುಖ ತೊಳೆದರೆ ಮುಖದ ಸುಕ್ಕು ಕಡಿಮೆಯಾಗಿ ಹೊಳಪು ಹೆಚ್ಚುತ್ತದೆ.

8. ಬಿಳಿ ಈರುಳ್ಳಿ ರಸವನ್ನು ಅರಿಶಿನಪುಡಿಯಲ್ಲಿ ಕಲಸಿ ದೇಹಕ್ಕೆ ಹಚ್ಚಿಕೊಂಡರೆ ಕಜ್ಜಿ, ತುರಿಕೆ ಮೊದಲಾದ ಚರ್ಮರೋಗಗಳು ವಾಸಿ ಆಗುತ್ತವೆ. ಕುಂಬಳಸೊಪ್ಪಿನ ರಸವನ್ನು ಚರ್ಮಕ್ಕೆ ಲೇಪಿಸುವುದರಿಂದ ಹುಳುಕಡ್ಡಿ ಮಾಯವಾಗುವುದು.

9. ಸೌತೆಕಾಯಿಯನ್ನು ಉಪ್ಪು ಮತ್ತು ಕಾಳುಮೆಣಸಿನ ಪುಡಿ ಜೊತೆಗೆ ತಿಂದರೆ ಜೀರ್ಣಶಕ್ತಿ ವೃದ್ಧಿಯಾಗುತ್ತದೆ. ಉರಿಮೂತ್ರ ಮತ್ತು ಮೂಲವ್ಯಾಧಿ ನಿವಾರಣೆಯಲ್ಲೂ ಸೌತೆಕಾಯಿ ಉಪಯೋಗಕ್ಕೆ ಬರುತ್ತದೆ.

10. ಮಧುಮೇಹ ರೋಗಿಗಳಿಗೆ ಹೀರೇಕಾಯಿ ಪಲ್ಯ ಒಳ್ಳೆಯದು. ಹೀರೇಕಾಯಿಯನ್ನು ದಿನವೂ ಊಟದಲ್ಲಿ ಬಳಸುತ್ತಿದ್ದರೆ ಮೂಗಿನಲ್ಲಿ ರಕ್ತಸೋರುವುದೂ ನಿಲ್ಲುತ್ತದೆ.

11. ಬೆಣ್ಣೆಯಲ್ಲಿ ಒಂದಿಷ್ಟು ಉಪ್ಪಿನ ಪುಡಿ ಸೇರಿಸಿ ತುಟಿಗಳಿಗೆ ಲೇಪಿಸುವುದರಿಂದ ತುಟಿ ಒಡೆಯುವುದು ನಿಲ್ಲುತ್ತದೆ. ಜೊತೆಗೆ ತುಟಿಗೆ ಮೃದುತ್ವವೂ ಹೆಚ್ಚುತ್ತದೆ.

12. ಜಜ್ಜಿದ ಈರುಳ್ಳಿಯನ್ನು ಗಾಢವಾಗಿ ಮೂಸಿ ನೋಡುವುದರಿಂದ ತಲೆನೋವು ಮತ್ತು ನೆಗಡಿ ವಾಸಿಯಾಗುತ್ತದೆ. ಪ್ರತಿನಿತ್ಯ ಹಸೀಈರುಳ್ಳಿ ಸೇವನೆ ಹೃದಯರೋಗವನ್ನು ತಡೆಗಟ್ಟುತ್ತದೆ.

13. ಒಣಶುಂಠಿಯನ್ನು ಹಸುವಿನ ಹಾಲಲ್ಲಿ ತೇದು ಆ ಗಂಧವನ್ನು ಹಣೆಗೆ ಪಟ್ಟಿಹಾಕಿದರೆ ತಲೆನೋವು ಉಪಶಮನವಾಗುವುದು. ಹಸಿಶುಂಠಿಯನ್ನು ನೀರಲ್ಲಿ ತೇದು ಹಣೆಗೆ ಹಚ್ಚಿ ಬೆಚ್ಚಗೆ ಹೊದ್ದು ಮಲಗಿದರೂ ತಲೆನೋವು ವಾಸಿ.

14. ಹಸಿ ಕೆಂಪು ಮೂಲಂಗಿಯನ್ನು ಜಗಿದು ತಿನ್ನುವುದರಿಂದ ಹಲ್ಲುಗಳು ಸ್ವಚ್ಛವಾಗುತ್ತವೆ ಹಾಗೂ ವಸಡುಗಳಿಂದ ಬರುವ ರಕ್ತಸ್ರಾವ ನಿಂತುಹೋಗುತ್ತದೆ. ಕೆಂಪು ಮೂಲಂಗಿ ಸೇವನೆಯಿಂದ ಅಜೀರ್ಣದ ಭಯವೂ ಇರುವುದಿಲ್ಲ.

15. ಈರುಳ್ಳಿಯನ್ನು ಮದ್ಯಪಾನ ಮಾಡಿದವರು ರಾತ್ರಿ ತಿಂದು ಮಲಗಿದರೆ ಬೆಳಿಗ್ಗೆ ಹ್ಯಾಂಗೋವರ್ ಮಾಯ.

16. ಪುದೀನ ಸೊಪ್ಪನ್ನು ದಿನವೂ ಚೆನ್ನಾಗಿ ಜಗಿದು ತಿನ್ನುತ್ತಿದ್ದರೆ ಬಾಯಿಯ ದುರ್ವಾಸನೆ ದೂರ. ವಸಡು ಗಟ್ಟಿಯಾಗುತ್ತದೆ. ಹಲ್ಲುಗಳು ಬಾಳಿಕೆ ಬರುತ್ತವೆ. ಪುದೀನ ಚಟ್ನಿಯಿಂದ ಜೀರ್ಣಶಕ್ತಿ ಹೆಚ್ಚುವುದು.

17. ದಿನಾ ಬೆಳಿಗ್ಗೆ ಒಂದು ಟೊಮೆಟೋ ಹಣ್ಣನ್ನು ತಿನ್ನುತ್ತಾ ಬಂದಲ್ಲಿ ಬೊಜ್ಜು ಕರಗಿ ರಕ್ತಶುದ್ಧವಾಗುತ್ತದೆ. ಹಲ್ಲು ಮತ್ತು ವಸಡು ಗಟ್ಟಿಯಾಗುವುದಕ್ಕೂ ಟೊಮೆಟೋ ಸೇವನೆ ಒಳ್ಳೆಯದು.

18. ಕೈಗೆ ಗಾಯವಾದರೆ ಬ್ಯಾಂಡೇಡ್ ಹಚ್ಚುವುದು ಸಹಜ. ಅದಕ್ಕೆ ಮುಂಚೆ ಗಾಯವಾದ ಜಾಗಕ್ಕೆ ಎರಡು ಹನಿ ಜೇನುತುಪ್ಪ ಸವರಿ. ಜೇನಿಗೆ ಬ್ಯಾಕ್ಟೀರಿಯಾಗಳನ್ನು ಸಾಯಿಸುವ ಶಕ್ತಿ ಇದೆ. ಇಂಥಾದ್ದೇ ಶಕ್ತಿ ಇರುವ ಇನ್ನೊಂದು ವಸ್ತುವೆಂದರೆ ಅರಿಶಿಣ.

19. ಡಯಾಬಿಟೀಸ್ ರೋಗಿಗಳಿಗೆ ಕುಂಬಳಕಾಯಿ ಒಳ್ಳೆಯ ಮದ್ದು. ಇದರ ಸೇವನೆಯಿಂದ ಮೂತ್ರದಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತದೆ. ಬೊಜ್ಜುದೇಹದವರು ಸಿಹಿಕುಂಬಳಕಾಯಿ ಗೊಜ್ಜು ಸೇವಿಸಿ ತೆಳ್ಳಗಾಗಬಹುದು.

20. ಬಿ.ಪಿಯಿಂದ (ರಕ್ತದೊತ್ತಡದಿಂದ) ಬಳಲುತ್ತಿರುವವರು ಸೋರೆಕಾಯಿ ಹಲ್ವವನ್ನು ನಿಯಮಿತವಾಗಿ ಸೇವಿಸಿರಿ. ಗರ್ಭಿಣಿಯರಿಗೂ ಸೋರೆಕಾಯಿ ಹಿತ. ಅದರಿಂದ ಹೊಟ್ಟೆಯಲ್ಲಿರುವ ಮಗುವಿಗೆ ಪೌಷ್ಟಿಕಾಂಶ ಸಿಗುತ್ತದೆ.

## ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ

ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿಯಲ್ಲಿ ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲಿನ ವಿದ್ಯಾರ್ಥಿಗಳ ಸಾಧನೆ. ಪ್ರಥಮ–23, ದ್ವಿತೀಯ–07, ತೃತೀಯ–04, ಸ್ಥಾನಗಳನ್ನು ಪಡೆದಿರುತ್ತಾರೆ. ಪ್ರಥಮ ಸ್ಥಾನಗಳಿಸಿದ 23 ವಿದ್ಯಾರ್ಥಿಗಳು ವಲಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ಸಹಕರಿಸಿದ ಶಿಕ್ಷಕರನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಗುರೂಜಿಯವರು, ಕಾರ್ಯದರ್ಶಿಗಳು, ಶಾಲೆಯ ಶೈಕ್ಷಣಿಕ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಅಭಿನಂದಿಸಿದ್ದಾರೆ.



ಗಿಲ್‌ಗಿಟ್ (ಕಾಶ್ಮೀರ) – ಸದ್ಯಕ್ಕೆ ಪಾಕಿಸ್ತಾನ ಆಕ್ರಮಿಸಿಕೊಂಡ ಕಾಶ್ಮೀರದ ಭಾಗದಲ್ಲಿದೆ.

ಮಧುರ ಪ್ರಕಾಶನದ ಸೌಜನ್ಯದೊಂದಿಗೆ... 

# ಆಲೋಚನೆಗಳೇ ಉದ್ವೇಗಕ್ಕೆ ಕಾರಣ

–ಲೇ:ಶ್ರೀ ಎಂ.ಎಲ್.ರಾಘವೇಂದ್ರರಾವ್.

**(ಉದ್ವೇಗದಿಂದಾಗಿ ನೀವು ಪ್ರತಿ ವಿಷಯವನ್ನೂ ಭಯದಿಂದ ನೋಡುತ್ತೀರಿ. ಯಾವುದನ್ನೂ ಯಥಾವತ್ತಾಗಿ ನೋಡಲಾರಿರಿ. ಅವು ನಿಮ್ಮನ್ನು ಭಯಪಡಿಸುತ್ತಿರುವಂತೆ ಅನಿಸುತ್ತವೆ. ಸಮಸ್ಯೆಗಳೇ ಇಲ್ಲದೆ ಕಡೆ ನಿಮಗೆಲ್ಲವೂ ಸಮಸ್ಯೆಯಾಗೇ ಗೋಚರಿಸುತ್ತವೆ.)**

ತಪ್ಪುಗಳು ಆಗುವುದರ ಮೇಲೇ ನಿಮ್ಮ ದೃಷ್ಟಿ ಹೋಗುತ್ತದೆ. ಒಳ್ಳೆಯದರ ಮೇಲೆ ನಿಮ್ಮ ದೃಷ್ಟಿ ಹೋಗುವುದೇ ಇಲ್ಲ. ಕೂದಲೆಳೆಯ ಗ್ರಾತದ ಸಮಸ್ಯೆಯನ್ನು ಬೆಟ್ಟದಂತೆ ಊಹಿಸಿಕೊಳ್ಳುತ್ತೀರಿ ಅವುಗಳ ಮೂಲಕ ನಿಮಗೆ ಮನೋಕ್ಷೋಭೆ ಉಂಟಾಗುತ್ತದೆ. ಕೆಟ್ಟದು ನಡೆದರೆ ನೀವು ಅದರ ಬಗ್ಗೆ ಬಹಳಷ್ಟು ದೊಡ್ಡದನ್ನಾಗಿ ಮಾಡಿ ಆಲೋಚಿಸುತ್ತೀರಿ. ನಿಮ್ಮ ಆಲೋಚನೆಗಳೆಲ್ಲ ಆಗಲಿರುವ ಅಥವಾ ಬರಲಿರುವ ಸಮಸ್ಯೆಗಳ ಮೇಲೆ ನೆಟ್ಟಿರುತ್ತವೆ. ಅದರ ಮೂಲಕ ನಿಮಗೆ ಆಗಲಿರುವ ಒಳಿತನ್ನು ಕೂಡಾ ನೀವು ಗ್ರಹಿಸಲಾರದೇ ಹೋಗುತ್ತಿರುವಿರಿ. ಗುರ್ತಿಸಲಾರದೇ ಹೋಗುತ್ತಿದ್ದೀರಿ. ನಿಮಗೆ ಆಗುತ್ತಿರುವ ಸಂಘಟನೆಗಳನ್ನು ನೀವು ಕಡೆಗಣಿಸುತ್ತಿದ್ದೀರಿ. ನೀವು ಉದ್ವೇಗ ಹೊಂದಿದಾಗ ನಿಮ್ಮ ಆಲೋಚನೆಗಳು ಅಸ್ತವ್ಯಸ್ತವಾಗಿರುತ್ತವೆ. ನಿಮ್ಮ ಆಲೋಚನೆಗಳ ಮೇಲೆ ಉದ್ವೇಗದ ಪ್ರಭಾವ ಇದ್ದೇ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ನಿಮ್ಮ ಆಲೋಚನೆಗಳು ಉದ್ವೇಗದ ತಾಪಕ್ಕೆ ಕರಗಿ ಹೋಗಬಹುದು. ಇಲ್ಲವೇ ಒಣಗಿ ಹೋಗಬಹುದು. ಆಗ ನೀವುನಿಜಕ್ಕೂ ಆಲೋಚಿಸಲಾರಿರಿ. ಅವೇ ಆಲೋಚನೆಗಳು ನಿಮ್ಮಲ್ಲಿ ಪದೇಪದೇ ತಲೆದೋರಬಹುದು. ನಿಮ್ಮನ್ನು ಭಯಾತಂಕಿತರನ್ನಾಗಿ ಮಾಡುವ ಆಲೋಚನೆಗಳನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಬಹುದು. ಇಲ್ಲದ ಪಕ್ಷದಲ್ಲಿ ನೀವು ಅವುಗಳನ್ನು ಪೂರ್ತಿಯಾಗಿ ಬಿಟ್ಟಿರುತ್ತೀರಿ. ಉದ್ವೇಗದ ಮೂಲಕ ನೀವು ಪ್ರತಿ ಆಲೋಚನೆಯನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳುವುದರಿಂದ ನೀವು ಇನ್ನಷ್ಟು ಉದ್ವೇಗ ಹೊಂದುತ್ತೀರಿ. ಅಪ್‌ಸೆಟ್ ಆಗುತ್ತೀರಿ. ಈ ರೀತಿಯಾಗಿ ಅಪ್‌ಸೆಟ್ ಮಾಡುವ ಆಲೋಚನೆಗಳು ನಿಮ್ಮ ಮನಸ್ಸನ್ನು ಸುಳಿಯುತ್ತಿರುತ್ತವೆ. ಅವು ಜ್ಞಾಪಕಕ್ಕೆ ಬಂದಾಗಲೆಲ್ಲ ನಾವು ಇನ್ನಷ್ಟು ಉದ್ವೇಗಕ್ಕೆ ಒಳಗಾಗುತ್ತಿರುತ್ತೇವೆ.

ಉದಾಹರಣೆಗೆ–"ಆತ ನನ್ನನ್ನು ಬಿಟ್ಟು ಹೋಗುತ್ತಾನೆ", "ನನ್ನ ಹೃದಯ ಅರ್ಪಿಸಿದ್ದೇನೆ", "ನನ್ನ ಹೃದಯ ಒಡೆದುಹೋಗಿದೆ", "ನಾನು ಪ್ರಜ್ಞೆತಪ್ಪಿ ಬಿದ್ದುಹೋದೆ."

"ನನ್ನನ್ನು ನೋಡಿ ಎಲ್ಲರೂ ಅವಹೇಳನ ಮಾಡುತ್ತಾರೆ"

"ನನ್ನನ್ನು ಎಲ್ಲರೂ ಹೊರಹಾಕುತ್ತಾರೆ"

"ನಾನು ಆ ಕೆಲಸಕ್ಕೆ ಸರಿಹೋಗುವುದಿಲ್ಲ"

ಕೆಲವು ಸಂದರ್ಭಗಳಲ್ಲಿ ಇಂತಹ ವಿಪರೀತದ ಆಲೋಚನೆಗಳು ಹೊರಬರುವುದಿಲ್ಲ. ಅವು ಅಂತಃಚೇತನದಲ್ಲಿ ಗುಟ್ಟಾಗಿರುತ್ತವೆ. ಅವು ಹೊರಬರುವುದಿಲ್ಲ. ಅವು ಚಿತ್ರಗಳ ರೂಪದಲ್ಲೋ, ವಸ್ತು ರೂಪದಲ್ಲೋ ಇರುತ್ತವೆ. ಅವು ಮಾತುಗಳಾಗೋ ಅಥವಾ ವಾಕ್ಯಗಳಾಗೋ ಇರುತ್ತವೆ. ಕೆಲವು ಸಂದರ್ಭಗಳಲ್ಲಿ ಇಂತಹ ಅಸ್ಥವ್ಯಸ್ಥ ಚಿಂತನೆಗಳನ್ನು ಊಹಿಸುವುದು ಕೂಡಾ ಕಷ್ಟಸಾಧ್ಯವೇ! ಅವು ಆಟೋಮೇಟಿಕ್ಕಾಗಿ ಬರುತ್ತಿರುತ್ತವೆ. ಎಷ್ಟೋ ರಭಸದಿಂದ ಬಂದು ಹೋಗುತ್ತಿರುತ್ತವೆ. ಪ್ರಪಂಚವನ್ನು ಭಯಾಂದೋಳನದಿಂದ ನೋಡುವುದೂ ಯಾರನ್ನಾದರೂ ಉದ್ವೇಗಕ್ಕೆ ಒಳಗಾಗಿಸುತ್ತದೆ. ಇವುಗಳನ್ನು ಕುರಿತು ಆಲೋಚಿಸುವುದು ಕೂಡಾ ಉದ್ವೇಗಕ್ಕೆ ಕಾರಣವೇ! ಉದ್ವೇಗಕ್ಕೆ ಒಳಗಾದವರೆಲ್ಲ ಒಂದೇ ರೀತಿ ಸ್ಪಂದಿಸುವುದಿಲ್ಲ. ಅವರವರ ಮಾನಸಿಕ ತತ್ವಗಳನ್ನು ಅನುಸರಿಸಿ, ವಸ್ತುಗಳನ್ನು ಹಿಡಿದು ಪ್ರತಿಸ್ಪಂದಿಸುತ್ತಿರುತ್ತಾರೆ. ನಡೆಯುತ್ತಿರುವ ಸಂಘಟನೆಗಳನ್ನು ಅನುಸರಿಸಿ, ಅವರ ಆಲೋಚನೆಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ನಡೆಯುವ ಸಂಘಟನೆಗಳಲ್ಲಿ ಅವರು ಎಷ್ಟೋ ಪ್ರಮಾದಗಳನ್ನು ಎಷ್ಟೋ ಸಮಸ್ಯೆಗಳನ್ನು ಊಹಿಸಿಕೊಳ್ಳುತ್ತಾರೆ. ಅವರನ್ನು ಗೊಂದಲಕ್ಕೆ ನೀಡುವ ಆಲೋಚನೆಗಳ ಬಗ್ಗೆಯೇ ಯೋಚಿಸುತ್ತಿರುತ್ತಾರೆ. ಆದ್ದರಿಂದ ಅವರು ಇನ್ನಷ್ಟು ಉದ್ವೇಗ ಹೊಂದುತ್ತಿರುತ್ತಾರೆ. ಅದು ಹೇಗಿರುತ್ತದೆ ಅಂದರೆ ನಾವು ಬಣ್ಣದ ಕನ್ನಡಕ ಧರಿಸಿದಂತೆಯೇ ಆಗುತ್ತದೆ. ನಾವು ತೊಡುವ ಬಣ್ಣದ ಕನ್ನಡಿಗಳಲ್ಲಿ ಕೆಲವು ಬಣ್ಣಗಳು ತೇಜೋಮಯವಾಗೂ ಮತ್ತೆ ಕೆಲವು ಬಣ್ಣಗಳು ಮತ್ತೊಂದು ರೀತಿಯಾಗಿ ವ್ಯತ್ಯಾಸದಿಂದ ಕೂಡಿರುತ್ತದೆ. ವಾಸ್ತವವಾಗಿ ಬಣ್ಣಗಳಲ್ಲಿ ವ್ಯತ್ಯಾಸ ಇರುವುದಿಲ್ಲ ಆದರೆ ಅವು ಹಾಗೆ ಕಾಣಿಸುತ್ತವೆ. ಅಷ್ಟೇ! ನೀವು ಕೆಂಪುಬಣ್ಣದ ಕನ್ನಡಕ ಧರಿಸಿದರೆ ಎಲೆ ಹಸಿರು ವಸ್ತುಗಳು ನಿಮಗೆ ಕಪ್ಪಾಗಿ ಕಾಣಿಸುತ್ತವೆ. ಅದೇ ಕೆಂಪಾದ ವಸ್ತುಗಳೇ ಆದರೆ ತುಂಬಾ ಪೇಲವವಾಗಿರುತ್ತವೆ. ಇವುಗಳನ್ನು ನೀವು ನೋಡುತ್ತೀರಿ ಅಷ್ಟೇ! ಆದರೆ ವಸ್ತುಗಳ ಅಸಲೀ ಬಣ್ಣಗಳಲ್ಲಿ ಸ್ವಲ್ಪವೂ ಬದಲಾವಣೆ ಇರುವುದಿಲ್ಲವಲ್ಲ! ಪ್ರತಿಯೊಬ್ಬರಿಗೂ ಅವರವರ ದೃಷ್ಟಿಯನ್ನು ಅನುಸರಿಸಿ ಅವು ದರ್ಶನ ಕೊಡುತ್ತವೆ. ಕನ್ನಡಕವನ್ನು ತೆಗೆದು ಹಾಕಿದರೆ ನೀವು ಕೂಡಾ ಅಷ್ಟೇ. ಉದ್ವೇಗಕ್ಕೆ ಒಳಗಾದೋರು ಕೂಡಾ ಅದೇ ರೀತಿ ಇರುತ್ತಾರೆ. ವಸ್ತುಗಳನ್ನು ಅವರು ನೋಡುವ ವಿಧಾನವನ್ನು ಅನುಸರಿಸಿ ಅವರು ಉದ್ವೇಗಕ್ಕೆ ಒಳಗಾಗುತ್ತಿರುತ್ತಾರೆ. ಅವರಿಗೆ ಕೆಲವನ್ನು ನೋಡಿದಾಗ ಮಾತ್ರವೇ ಭಯ ಉಂಟಾಗುತ್ತಿರುತ್ತದೆ. ಕೆಲವು ಸಮಸ್ಯೆಗಳಷ್ಟೇ ಅವರಿಗೆ ಪರಿಹಾರ ರಹಿತವಾಗಿ ಅನಿಸುತ್ತಿರುತ್ತವೆ.



ಸ್ವರ್ಣಮಂದಿರ (ಪಂಜಾಬ್) – ಅಮೃತಸರದಲ್ಲಿನ ಸಿಖ್ ಬಾಂಧವರ ಪವಿತ್ರ ಸ್ಥಳ.

ಉದ್ವೇಗ ಎಂದೊಡನೆ ಮನಸ್ಸಿಗೆ ಚಿಂತೆ ಏರ್ಪಡುತ್ತದೆ. ಅದು ತುಂಬಾ ಬಾಧಕರವಾಗಿರುತ್ತದೆ. ಅದು ಭಯಾನಕವಾಗಿರುತ್ತದೆ. (ನೀವು ಅದನ್ನು ಕುರಿತು ಅಪಾಯವಿಲ್ಲವೆಂದು ತಿಳಿದುಕೊಂಡ ಹೊರತು) ಆ ಭಯ ಕೂಡಾ ಹೆಚ್ಚುಕಾಲ ಇರುವುದಿಲ್ಲ. ಆದ್ದರಿಂದ ನೀವು ಉದ್ವೇಗ ಕುರಿತು ಕೂಡಾ ಭಯ ಪಡಬಹುದು. ಉದ್ವೇಗ ಅನ್ನೋದು ಒಂದು ವಿಷ ವೃತ್ತದಂಥದ್ದು. ಆಲೋಚನೆಗಳು ನಿಮ್ಮನ್ನು ಉದ್ವೇಗಕ್ಕೆ ಗುರಿಪಡಿಸುತ್ತವೆ. ಆಲೋಚನೆಗಳು ನಿಮ್ಮನ್ನು ಉದ್ವೇಗದಲ್ಲಿ ಇರಿಸುತ್ತವೆ. ಉದ್ವೇಗ ನಿಮಗೆ ಇನ್ನಷ್ಟು ಉದ್ವೇಗವನ್ನು ಉಂಟಾಗಿಸುತ್ತದೆ.

ಆಲೋಚನೆಗಳನ್ನು ಬದಲಾಯಿಸಿಕೊಳ್ಳಬಹುದು. ವಿಷಯಗಳನ್ನು ಯಥಾವತ್ತಾಗಿ ನೋಡಬಹುದು. ನಿಮ್ಮ ಸಮಸ್ಯೆಗಳನ್ನು ವರ್ಗೀಕರಿಸಬಹುದು. ಅಂದರೆ ಸಾರ್ಟ್‌ಔಟ್ ಮಾಡಿಕೊಳ್ಳಬಹುದು. ಸಮಸ್ಯೆಗಳು ಎರಡು ವಿಧವಾಗಿರುತ್ತವೆ. ನಿಜವಾದುದು: ನಿಜ ಅನಿಸುವುದು. ಅಂದರೆ ಬಣ್ಣದ ಕನ್ನಡಕಗಳನ್ನು ತೊಡುವ ವ್ಯಕ್ತಿಯಂತೆ ನಿಜವಾದ ಸಮಸ್ಯೆಗಳನ್ನು ಯಥಾರ್ಥವಾಗಿ ಎದುರಿಸಬೇಕಾಗಿರುತ್ತದೆ. ಅವುಗಳನ್ನು ಎದುರಿಸುವುದು ದೊಡ್ಡ ಸಮಸ್ಯೆ ಅಲ್ಲ. ನಿಜವಾಗಲೂ ಅನಿಸುವ ಸಮಸ್ಯೆಗಳನ್ನು ಮಾತ್ರ ಪರಿಹರಿಸಬೇಕಾದ ಅಗತ್ಯವಿಲ್ಲ. ಅವುಗಳನ್ನು ತಕ್ಷಣವೇ ವಜಾ ಮಾಡಬಹುದು. ಆಗ ನಿಮ್ಮ ಉದ್ವೇಗ ಬಹಳ ಮಟ್ಟಿಗೆ ಕಡೆಮೆಯಾಗುತ್ತದೆ. ಇದಕ್ಕೆ ನಿಮ್ಮ ಪ್ರಯತ್ನ ಅಗತ್ಯ. ಅಂದರೆ ಬದಲಾವಣೆ ಬರುವುದೆಂದು ಅರ್ಥ. ಬದಲಾವಣೆ ಅನ್ನೋದು ಅಷ್ಟು ಸುಲಭ ಅಲ್ಲ. ಬದಲಾವಣೆ ಆಶಿಸತಕ್ಕದ್ದೇ ಆದರೆ ಕಷ್ಟ. ಅದಕ್ಕೆಷ್ಟೋ ಶ್ರಮ, ಕೃಷಿ ಅಗತ್ಯ.

ಮೊದಲ ಸೋಪಾನ (ಮೆಟ್ಟಿಲು) ಅದರ ಬಗ್ಗೆ ತಿಳಿದಿರುವುದು. ಅಂದರೆ ಅರ್ಥಮಾಡಿಕೊಳ್ಳುವುದು ಅಂತ.

# ನಿತ್ಯೋಪಯೋಗಿ ಮಂತ್ರಗಳು

–ಸಂಗ್ರಹ

**1. ಸ್ಮರಣಶಕ್ತಿ ವರ್ಧಕ ಶಾಬರ ಮಂತ್ರ.**

ನಮೋ ದೇವೀ ಕಾಮಾಕ್ಷಾ । ತ್ರಿಶೂಲ, ಖಡ್‌ಗ–ಹಸ್ತ, ಪಾಧಾ–ಪಾತೀ ಗರುಡ,

ಸರ್ವ–ಲಖೀ ತೂ । ಪ್ರೀತಯೇ ಸಮಾಗಮ, ತತ್ತ್ವ–ಚಿಂತಾಮಣಿ ನರಸಿಂಹ ।

ಚಲ–ಚಲ, ಕ್ಷೀನ ಕೋಟೋ ಕಾತ್ಯಾನೀ, ತಾಲವ–ಪ್ರಸಾದ ಕೇ ।

ಹ್ರೀಂ ಹ್ರೀಂ ಕ್ರೂಂ ತ್ರಿಭುವನ ಚಾಲಿಯಾ–ಚಾಲಿಯಾ ಸ್ವಾಹಾ ॥

**ವಿಧಾನ:–** 14 ತುಳಸಿ ಎಲೆಗಳ ಜೊತೆಗೆ ಈ ಮಂತ್ರವನ್ನು 108 ಸಲ ಪಠಿಸಿ, ಎಲೆಗಳನ್ನು ಸೇವಿಸಬೇಕು. ಈ ಉಪಾಯವನ್ನು ಶುಕ್ಲ ಪಕ್ಷದ ರೋಹಿಣಿ ನಕ್ಷತ್ರದಲ್ಲಿ ಪ್ರಾರಂಭಿಸಿ, ಮುಂದಿನ ರೋಹಿಣಿ ನಕ್ಷತ್ರದವರೆಗೂ ಮಾಡುತ್ತಿರಬೇಕು. ನಂತರ, ಪ್ರತಿನಿತ್ಯ ತುಳಸಿಯ 7 ಎಲೆಗಳನ್ನು ತೆಗೆದುಕೊಂಡು ಒಂದೊಂದು ಸಲ ಮಂತ್ರವನ್ನೂ ಪಠಿಸುತ್ತ, ಒಂದೊಂದಾಗಿ ಏಳು ಎಲೆಗಳನ್ನು ಸೇವಿಸುತ್ತಿರಬೇಕು ಇದರಿಂದ ಸ್ಮರಣ ಶಕ್ತಿ ತೀವ್ರವಾಗುತ್ತದೆ.

**2. ಓದಿದ್ದನ್ನು ಮರೆಯದಿರಲು ಮಂತ್ರ.**

ನಮಃ ಭಗವತೀ ಸರಸ್ವತಿ ಪರಮೇಶ್ವರೀ ವಾಗ್–ವಾದಿನೀ ।

ಮಮ ವಿದ್ಯಾಂ ದೇಹಿ, ಭಗವತಿ ಹಂಸ–ವಾಹಿನೀ ಸಮಾರೂಢಾ ।

ಬುದ್ಧಿ ದೇಹಿ ದೇಹಿ, ಪ್ರಜ್ಞಾ ದೇಹಿ ದೇಹಿ ವಿದ್ಯಾಂ ದೇಹಿ ದೇಹಿ ।

ಪರಮೇಶ್ವರೀ ಸರಸ್ವತೀ ಸ್ವಾಹಾ ।

**ವಿಧಾನ:–** ಯಾವುದಾದರೂ ರವಿವಾರದಂದು ಒಂದು ಕಟ್ಟಿಗೆಯ ಮಣೆಯ ಮೇಲೆ, ಹೊಸ ನೀಲಿವರ್ಣ ವಸ್ತ್ರವನ್ನು ಹಾಸಿ, ಅದರ ಮೇಲೆ ಭಗವತಿ ಸರಸ್ವತಿಯ ಚಿತ್ರಪಟವನ್ನು ಸ್ಥಾಪಿಸಬೇಕು; ಯಥಾಶಕ್ತಿ ಧೂಪ, ದೀಪ, ಪುಷ್ಪ–ಪ್ರಸಾದಾದಿಗಳಿಂದ ಪೂಜೆ ಸಲ್ಲಿಸಬೇಕು. ಈ ಮೇಲಿನ ಮಂತ್ರವನ್ನು ಪ್ರತಿನಿತ್ಯ ಒಂದು ಮಾಲೆ (108 ಸಲ) ಜಪಿಸಬೇಕು. ಬ್ರಹ್ಮಚರ್ಯ ಪಾಲಿಸಬೇಕು ಮತ್ತು ಅಧ್ಯಯನದಲ್ಲೂ ತೊಡಗಬೇಕು. ಮಂತ್ರ ಜಪದೊಡನೆ, ಹಾಲಿನೊಡನೆ ಸರಸ್ವತಿ–ಚೂರ್ಣ, ಅಥವಾ ಬ್ರಾಹ್ಮೀ–ವಟಿ ಅಥವಾ ಶಂಖಪುಷ್ಪೀ–ಚೂರ್ಣವನ್ನು ಈ ಮೇಲಿನ ಮಂತ್ರದೊಡನೆ ಅಭಿಮಂತ್ರಿತಗೊಳಿಸಿ, ಪ್ರಾತಃ ಕಾಲದಲ್ಲಿ ಸೇವಿಸಬೇಕು. ಇದರಿಂದ ಓದಿರುವುದು ಖಂಡಿತಾ ನೆನಪಿನಲ್ಲಿರುತ್ತದೆ ಮತ್ತು ನೆನಪಿನ ಶಕ್ತಿ ವೃದ್ಧಿಯಾಗುತ್ತದೆ. ಆಲಸ್ಯ, ಕುಸಂಗ ಮತ್ತು ದುರ್ವ್ಯಸನದಿಂದ ದೂರವಿರಬೇಕು. 21 ದಿನಗಳಲ್ಲಿಯೇ ಶುಭ ಫಲ ಕಂಡು ಬರುತ್ತದೆ. ನಂತರ, ಕೂಡ ನಿತ್ಯ ಒಂದೊಂದು ಮಾಲೆ ಮಂತ್ರ ಜಪಿಸುತ್ತಿರಬೇಕು.



ಹಂಪಿ (ಕರ್ನಾಟಕ) – ವಿಜಯನಗರ ಸಾಮ್ರಾಜ್ಯದ ರಾಜಧಾನಿ ಆಗಿತ್ತು.

**3. ಪರೀಕ್ಷೆಯಲ್ಲಿ ಸಫಲತೆಗಾಗಿ ಸಾಧನೆ.**

ಮೋಹಿ ಸಾಧಾರಿಹ ಸೋ ಸಬ ಭಾಂತೀ । ಜಾಸು ಕೃಪಾ ನಹಿ ಕೃಪಾ ಅಘಾತೀ ॥

**ವಿಧಾನ:–** ಈ ಮಂತ್ರವನ್ನು ದೀರ್ಘ ಅವಧಿಯವರೆಗೆ ಜಪಿಸಬೇಕು. ಇದರಿಂದ ಮಂತ್ರ ಸಿದ್ಧಿಯಾಗುತ್ತದೆ. ನಂತರ, ಪರೀಕ್ಷೆಗೆ ಹೋಗಬೇಕಾದಾಗ, ಈ ಮಂತ್ರವನ್ನು 108 ಸಲ ಜಪಿಸಿ ಹೋಗಬೇಕು. ಇದರಿಂದ ಪರೀಕ್ಷೆಯಲ್ಲಿ ಯಶಸ್ಸು ದೊರೆಯುತ್ತದೆ.

**4. ವಿದ್ಯಾ–ಸ್ಮರಣ ಮಂತ್ರ.**

ಓಂ ನಮಃ ಸರಸ್ವತ್ಯೈ ಹ್ರೀಂ ಶ್ರೀಂ ಹೂಂ ।

ಓಂ ನಮಃ ಕಾಮಾಕ್ಷಾಯ್ಯೈ ಹ್ರೀಂ ಕ್ರೀ ಫಟ್ ಸ್ವಾಹಾ ॥

**ವಿಧಾನ:–** ಶನಿವಾರದಂದು ಸ್ನಾನಮಾಡಿ, ಶನಿದೇವನಿಗೆ ಪೂಜೆ ಮಾಡಬೇಕು. ಈ ಮೇಲಿನ ಮಂತ್ರವನ್ನು 108 ಸಲ ಜಪಿಸಬೇಕು. ತದನಂತರ, ಬ್ರಾಹ್ಮಿ ಬೂಟೀ ಮತ್ತು ದುಂಡು ಮೆಣಸಿನ 5 ಗ್ರಾಮ್ ಚೂರ್ಣವನ್ನೂ ಒಂದು ಲೋಟ ನೀರಿನಲ್ಲಿ ಹಾಕಿ ಕಲಿಸಬೇಕು; ನಂತರ ಈ ಮೇಲಿನ ಮಂತ್ರದಿಂದ 7 ಸಲ ಅಭಿಮಂತ್ರಿಸಿ ಕುಡಿಯಬೇಕು. ಇದರಿಂದ ಕೆಲವೇ ದಿನಗಳಲ್ಲಿ ಸ್ಮರಣ ಶಕ್ತಿ ವೃದ್ಧಿಯಾಗುತ್ತದೆ.

**5. ವಿದ್ಯಾ–ಪ್ರಾಪ್ತಿ ಸಾಧನೆ.**

ಹ್ರೀಂ ವೇದ–ಮಾತೃಭ್ಯ ಸ್ವಾಹಾ ।

**ವಿಧಾನ:–** ಶುಭ ಮುಹೂರ್ತದಲ್ಲಿ ಅಥವಾ ವಿಶಿಷ್ಠ ಯೋಗದಲ್ಲಿ ಅಥವಾ ಸಾಧಕನ ಚಂದ್ರನು ಬಲಿಷ್ಠನಾಗಿರುವಾಗ, ಈ ಸಾಧನೆಯನ್ನು ಪ್ರಾರಂಭಿಸಬೇಕು. ಸಾಧನೆಗಾಗಿ ಒಟ್ಟು 25 ಸಾವಿರ ಸಂಖ್ಯೆಯ ಜಪ ಮಾಡಬೇಕು. ಇದಕ್ಕಿಂತ ಹೆಚ್ಚು ಜಪ ಮಾಡಿದರೂ ತೊಂದರೆಯಿರದು. ನಂತರ, ಪಂಚ ಒಣ–ಫಲಗಳಿಂದ ದಶಾಂಶ ಹವನ ಮಾಡಬೇಕು. ಇದರಿಂದ ಮಂತ್ರ ಸಿದ್ಧಿಯಾಗುತ್ತದೆ. ವಿದ್ಯಾ ಪ್ರಾಪ್ತಿಯಲ್ಲಿಯ ಎಲ್ಲ ವಿಘ್ನಗಳು ದೂರವಾಗುತ್ತವೆ.

**6. ಸರಸ್ವತಿ ಶಾಬರ ಮಂತ್ರ.**

ಹ್ರೀಂ ಶ್ರೀಂ ಐಂ ವಾಗ್–ವಾದಿನಿ, ಭಗವತಿ ।

ಅರ್ಹನ್–ಮುಖ–ನಿವಾಸಿನೀ–ಸರಸ್ವತೀ ।

ಮಮಾಂಶೇ ಪ್ರಕಾಶಂ ಕುರು–ಕುರು ಸ್ವಾಹಾ, ಐಂ ನಮಃ ।

**ವಿಧಾನ:–** ದೀಪಾವಳಿಯ ರಾತ್ರಿಯಂದು ಪವಿತ್ರರಾಗಿ ಶ್ವೇತವಸ್ತ್ರ ಶ್ವೇತಮಾಲೆಯನ್ನು ಧರಿಸಬೇಕು ಮತ್ತು ಉತ್ತರಾಭಿಮುಖವಾಗಿ ಆಸನದ ಮೇಲೆ ಕುಳಿತು, ಭಗವತಿ ಸರಸ್ವತಿಯ ಪ್ರತಿಮೆ ಅಥವಾ ಚಿತ್ರಪಟವನ್ನು ಎದುರಿಗೆ ಯಾವುದಾದರೂ ಮಣೆ–ವೇದಿಕೆಯ ಮೇಲೆ ಸ್ಥಾಪಿಸಬೇಕು. ದೀಪ, ಧೂಪಾದಿಗಳಿಂದ ಪಂಚೋಪಚಾರದಿಂದ ಭಗವತಿಗೆ ಪೂಜೆ ಸಲ್ಲಿಸಬೇಕು. ನಂತರ, ಈ ಮೇಲಿನ ಮಂತ್ರವನ್ನು 12 ಸಾವಿರ ಸಲ ಜಪಿಸಬೇಕು. ಈ ಉಪಾಯದಿಂದ ಭಗವತಿ ಸರಸ್ವತಿ ಪ್ರಸನ್ನಳಾಗುವಳು ಮತ್ತು ವಾಕ್–ಸಿದ್ಧಿಯ ಪ್ರಾಪ್ತಿಯಾಗುವುದು.

## ಭಾವಪೂರ್ಣ ಶ್ರದ್ಧಾಂಜಲಿ



ಗೇರಸೊಪ್ಪದ ಜಡ್ಡಿ ಊರಿನ ನಿವಾಸಿಯಾದ ಮಂಜುನಾಥ ಹೆಗಡೆ ಇವರ ಪುತ್ರ ಕು. ಪವನ ಮಂಜುನಾಥ ಹೆಗಡೆ ಇವನು ದಿ. 26–08–2016 ರ ಶುಕ್ರವಾರ ಅಕಾಲಿಕ ಮರಣಕ್ಕೆ ಒಳಗಾಗಿರುವುದು ಈ ಊರಿನ ಜನತೆಗೆಲ್ಲಾ ದುಃಖವನ್ನು ತಂದ ವಿಷಯವಾಗಿದೆ. ಇವನು 10ನೇ ತರಗತಿಯ ವಿದ್ಯಾರ್ಥಿಯಾಗಿದ್ದು, ಸಂಸ್ಕೃತ ವಿಷಯದಲ್ಲಿ ಆಸಕ್ತನಾಗಿದ್ದು ಪ್ರಥಮಾ ಮತ್ತು ಕಾವ್ಯ ತರಗತಿಗಳನ್ನು ಅಭ್ಯಾಸ ಮಾಡುತ್ತಿದ್ದುದು ವಿಶೇಷವಾಗಿದೆ. ಇವನ ಆತ್ಮಕ್ಕೆ ಚಿರಶಾಂತಿ ಮತ್ತು ಅವರ ಕುಟುಂಬವರ್ಗಕ್ಕೆ ದುಃಖ ನೀಗಿಸುವ ಶಕ್ತಿ ಲಭಿಸಲೆಂದು ಶ್ರೀದೇವರಲ್ಲಿ ಪ್ರಾರ್ಥಿಸುವ–

**–ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮತ್ತು ಸದಸ್ಯರು,**
**ಶಿಕ್ಷಕ ಹಾಗೂ ವಿದ್ಯಾರ್ಥಿವೃಂದದವರು, ಸಿಬ್ಬಂದಿ ವರ್ಗದವರು.**
**ಶ್ರೀಕ್ಷೇತ್ರ ಬಂಗಾರಮಕ್ಕಿ.**




ಇಂಡಿಯಾ ಗೇಟ್ (ನವದೇಹಲಿ) – ರಾಷ್ಟ್ರಪತಿ ಭವನದ ಎದುರಿನ ರಸ್ತೆಯಲ್ಲಿ ಇರುವ ಸ್ಮಾರಕ.

ಶ್ರೀಧರ ಸ್ಮರಣೆ...

# ವೈದ್ಯರ ಕಣ್ಣು ತೆರೆಸಿದ ಶ್ರೀಗಳು

–ಲೇ: ಜಿ.ಟಿ.ಶ್ರೀಧರಶರ್ಮಾ



ಶ್ರೀಧರರು ಎಂದಿನಂತೆ ಸಂಚಾರ ಮಾಡುತ್ತಾ ಚಿಕ್ಕಮಗಳೂರಿನಲ್ಲಿ ಒಮ್ಮೆ ತಂಗಿದ್ದರು. ಒಂದು ದಿನ ಪುಟ್ಟ ಹೆಣ್ಣುಮಗುವೊಂದು ಓಡಿ ಬಂದು ತನ್ನ ತಾಯಿಗೆ ತುಂಬ ಜ್ವರ ಬಂದಿರುವುದಾಗಿಯೂ, ವೈದ್ಯರು ಏನೇನೋ ಹೇಳುತ್ತಿರುವುದಾಗಿಯೂ ಹೇಳಿ ಉಮ್ಮಳಿಸಿದಳು. ಎಲ್ಲವನ್ನೂ ಶಾಂತವಾಗಿ ಆಲಿಸಿದ ಶ್ರೀಧರರು "ಅಳದಿರು ಕಂದ! ನಿನ್ನ ತಾಯಿಗೆ ಇನ್ನೂ ಆಯುಷ್ಯ ಇದೆ. ಮಂತ್ರಿಸಿರುವ ಈ ಹಣ್ಣನ್ನು ನಿನ್ನ ತಾಯಿಗೆ ಕೊಡು. ಕೂಡಲೇ ಆಕೆ ಚೇತರಿಸಿಕೊಳ್ಳುವಳು" ಎಂದು ಹೇಳಿ ಮಂತ್ರಿಸಿದ ಒಂದು ಹಣ್ಣನ್ನು ಕೊಟ್ಟು ಕಳುಹಿಸಿದರು. ಅದರಂತೆ ಆ ಹಣ್ಣನ್ನು ತಿಂದ ಆ ಮಗಳ ತಾಯಿಯ ಜ್ವರ ವಾಸಿಯಾಗಿ ಆ ಮನೆಯವರೆಲ್ಲರೂ ಶ್ರೀಧರರಿದ್ದಲ್ಲಿಗೆ ಬಂದು ಆಶೀರ್ವಾದ ಪಡೆದು ಸುಖವಾಗಿದ್ದರು. ಗುರುಭಕ್ತರೂ ಆಗಿ ಗುರುಮಹಿಮೆಯನ್ನು ಕೊಂಡಾಡಿದರು.

ಅದೇ ಸಮಯದಲ್ಲಿ ಚಿಕ್ಕಮಗಳೂರಿನಲ್ಲಿ ಒಬ್ಬ ಮೇಧಾವಿ ವೈದ್ಯರಿದ್ದರು. ಅವರು ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿಗಳ ಪರಮಭಕ್ತರಾಗಿದ್ದರು. ಶ್ರೀಧರರು ಅಲ್ಲಿರುವಾಗ ಒಂದು ದಿನ ಆ ವೈದ್ಯರ ಕನಸಿನಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಕಾಣಿಸಿಕೊಂಡು "ನಾನು ಇಲ್ಲಿಗೆ ಬಂದು ಇಷ್ಟು ದಿನಗಳಾದರೂ ನೀನೇಕಿನ್ನೂ ನನ್ನ ದರ್ಶನಕ್ಕೆ ಬಂದಿಲ್ಲ?" ಎಂದು ಪ್ರಶ್ನಿಸಿ, ಕೂಡಲೇ ದರ್ಶನ ಪಡೆಯುವಂತೆ ತಿಳಿಸಿ ಅದೃಶ್ಯರಾದರು.

ಮರುದಿನ ಆ ವೈದ್ಯರು ತಮ್ಮ ಕಾರ್ಯ ಮುಗಿಸಿ ಸಾಯಂಕಾಲ ಅಂಥ ಮಹಾತ್ಮರು ಈ ಊರಿನಲ್ಲಿ ಯಾರಿರಬಹುದೆಂದು ಹುಡುಕಿ ಕೊನೆಗೆ ವರದಪುರದ ಶ್ರೀಧರಸ್ವಾಮಿಗಳೇ ಇರಬೇಕೆಂದು ತಿಳಿದು ನೇರವಾಗಿ ಗುರುಗಳಿದ್ದಲ್ಲಿಗೇ ಬಂದರು. ಅವರು ಬಂದಾಗ ಶ್ರೀಧರರು ತಮ್ಮ ಆಸನದಲ್ಲಿ ಕುಳಿತು ಧ್ಯಾನಸ್ಥರಾಗಿ ಸಮಾಧಿಸ್ಥಿತಿಯಲ್ಲಿದ್ದರು. ಈ ದೃಶ್ಯವನ್ನು ನೋಡಿದ ಕೂಡಲೇ ಆ ವೈದ್ಯರು ಬವಳಿ ಬಂದಂತಾಗಿ ಧರೆಗಿಳಿದು ಹೋದರು! ಅಲ್ಲಿದ್ದವರೆಲ್ಲಾ ಗಾಬರಿಪಡಲು "ನಾನೆಂಥ ಅಪರಾಧ ಮಾಡಿದೆ. ಇಂಥ ಮಹಾತ್ಮರ ದರ್ಶನವನ್ನು ನಾನು ಕೋಟು, ಪ್ಯಾಂಟು, ಬೂಟುಗಳಿಂದ ಮಾಡಿದೆ. ಅಯ್ಯೋ ನನ್ನ ವಿಧಿಯೇ! ಇವರು ಮನುಷ್ಯರಲ್ಲ, ಸಾಕ್ಷಾತ್ ಪರಮಾತ್ಮನೇ ಸರಿ. ನನಗೊಂದು ಪಂಚೆ, ಶಲ್ಯ ಕೊಡಿರಿ" ಎಂದು ಪರಿ ಪರಿಯಾಗಿ ಮರುಗಿ, ಕೈಕಾಲು ತೊಳೆದು ಪಂಚೆಯನ್ನುಟ್ಟು ಶ್ರೀಧರರ ದರ್ಶನಕ್ಕೆ ಮಹಡಿ ಮೇಲೆ ಹೋದರು.

ಗುರುಗಳು ಧ್ಯಾನದಿಂದ ಈಚೆ ಬರುವ ತನಕ ಕಾದು ಕೊನೆಗೆ ನಮಸ್ಕರಿಸಿ ತಮ್ಮ ಅನುಭವಗಳನ್ನೆಲ್ಲ ಹೇಳಿ ಗುರುಗಳ ಮಂತ್ರಾಕ್ಷತೆ, ಆಶೀರ್ವಾದಗಳನ್ನು ಪಡೆದು ಧನ್ಯತೆಯ ಭಾವದಿಂದ ತೆರಳಿದರು. ಅಲ್ಲಿ ಸೇರಿದ್ದ ಶಿಷ್ಯರಿಗೆ ಹೊಸ ಅನುಭವವೇ ಆದಂತಾಯಿತು. ಗುರುಗಳ ಮಹಿಮೆಗೆ ಕೊನೆ ಎಲ್ಲಿಯದು?

**ಚತುರ್ವಿಧ ಕಂಠ ಚಲನೆಗಳು:–** 1)ಸುಂದರಿ, 2)ಪರಿವರ್ತನ, 3)ಪ್ರಕಂಪಿತ, 4)ತಿರಚ್ಛೀನ. ಕುತ್ತಿಗೆಯನ್ನಡ್ಡ ತಿರುಗಿಸುವುದು, ಅರ್ಧಚಂದ್ರಾಕಾರ ತಿರುಗಿಸುವುದು, ಕಪೋತದಂತೆ ಅಲ್ಲಾಡಿಸುವುದು, ಹಾವಿನಂತೆ ಮೇಲ್ಭಾಗಕ್ಕೆ ತಿರುಗಿಸುವುದು (ನಾ.ಶಾ)

**ಚತುರ್ವಿಧ ಕರ್ಮಪ್ರಕಾರಗಳು:–** ಪುಣ್ಯಕರ್ಮ, ಪಾಪಕರ್ಮ, ಪುಣ್ಯಪಾಪ ಮಿಶ್ರಣಕರ್ಮ, ಪಾಪಪುಣ್ಯ ಜನಿತ ಕರ್ಮಗಳು. (ಕರ್ಮಫಲ–ವಿಪಾಕ).

**ಚತುರ್ವಿಧ ಕ್ರೀಡೆಗಳು:–** ಆತ್ಮವಿನೋದಾರ್ಥ, ಪ್ರೇಕ್ಷಣಾನಂದಾರ್ಥ, ಧರ್ಮೋತ್ಸವಪ್ರಧಾನ ಹಾಗೂ ಸಮ್ಮಿಶ್ರಣ ರೂಪ–ಕ್ರೀಡೆಗಳು.

**ಚತುರ್ವಿಧ ಚಿದ್ಭೇದಗಳು:–** ಜೀವ, ಈಶ್ವರ, ಬ್ರಹ್ಮ, ಕೂಟಸ್ಥ. (ದೇಹಕ್ಕಾದಾರ) ಯೋ. ಶಾ.

**ಚತುರ್ವಿಧ ಜಾತ್ಯಶ್ವಗಳು:–** ಸಿಂಧು, ಕಾಂಭೋಜ, ಆರಟ್ಟ, ಬಾಹ್ಲೀಕ. (ವನಾಯಜಗಳು)

**ಚತುರ್ವಿಧ ಜ್ಞಾನವಿಶೇಷಗಳು:–** ಕೃತ್ಯಾಕೃತ್ಯ ವಿವೇಕ, ಪರಲೋಕ ಚಿಂತನ, ವಿಷ್ಣು ಪ್ರಾಪ್ತಿ ಸಾಧನ ಜ್ಞಾನ, ವಿಷ್ಣುರೂಪಜ್ಞಾನ.

**ಚತುರ್ವಿಧ ತಾಮಸಗುಣಗಳು:–** ಅಧರ್ಮ (ಅಪ್ರವೃತ್ತಿ) ಅಜ್ಞಾನ (ಪ್ರಮಾದ) ಅಭಿಮಾನ, ಅಶಕ್ತಿತ್ವ.

**ಚತುರ್ವಿಧ ತೇಜಸ್ಸುಗಳು:–** ಭೌಮ, ಆಕರಜ, ದಿವ್ಯ, ಔದಾರ್ಯ. (ರೂಪಗಳು–ದೀಪಾದಿಗಳು, ಸ್ವರ್ಣಾದಿಗಳು, ಸೂರ್ಯಚಂದ್ರಾದಿಗಳು, ಜಠರಾಗ್ನಿ.)

**ಚತುರ್ವಿಧ ದತ್ತಿಗಳು:–** 1)ದಯಾದತ್ತಿ–ಪ್ರಾಣಿದಯೆ, 2)ಪಾತ್ರದತ್ತಿ–ಸತ್ಪಾತ್ರನಿಗೆ ಕೊಡುವುದು. 3)ಸಮದತ್ತಿ–ಅನುರೂಪನಿಗೆ ಕನ್ಯಾದಾನ. 4)ಸಕಲದತ್ತಿ–ಮಗನಿಗೆ ಅಥವಾ ಗೋತ್ರಜನಿಗೆ ಗೃಹಾದಿಗಳನ್ನೊಪ್ಪಿಸುವುದು, (ಜೈ.ಧ)



ಜಡುಗೋಡಾ – (ಬಿಹಾರ) ಯುರೇನಿಯಂ ಅದಿರು ಗಿರಣಿಗಳಿಗೆ ಪ್ರಸಿದ್ಧ ಪಡೆದಿದೆ.

ವಚನಭಾಗವತ...

# ಪೃಥುಚಕ್ರವರ್ತಿ

–ಲೇ: ತ.ಸು.ಶಾಮರಾಯ

ಪೃಥುವಿನ ಪಟ್ಟಾಭಿಷೇಕವಾಗುವುದೆಂದು ಕೇಳಿ ಲೋಕವೆಲ್ಲವೂ ಸಂತೋಷದಿಂದ ಹಿಗ್ಗಿತು. ಸಕಲ ದಿಕ್ಕುಗಳಿಂದಲೂ ಜನರು ಪಟ್ಟಾಭಿಷೇಕಕ್ಕೆ ಅಗತ್ಯವಾದ ಸಾಮಾನುಗಳನ್ನು ಸಂಗ್ರಹಿಸಿಕೊಂಡು ಬಂದರು. ಮನುಷ್ಯರು ಮಾತ್ರವೇ ಅಲ್ಲ; ನದಿ, ಸಮುದ್ರ, ಪರ್ವತ, ಸರ್ಪ, ಗೋವು, ಹಕ್ಕಿ, ಭೂಮಿ, ಆಕಾಶಗಳು ಕೂಡ ಆತನ ಅಭಿಷೇಕ ಸಮಯದಲ್ಲಿ ಕಾಣಿಕೆಯನ್ನು ತಂದು ಒಪ್ಪಿಸಿದವು. ಕುಬೇರನು ಆತನಿಗೆ ಬಂಗಾರದ ಸಿಂಹಾಸನವನ್ನು ಕೊಟ್ಟನು; ವರುಣನು ಚಂದ್ರಬಿಂಬದಂತೆ ಬೆಳ್ಳಗಿರುವ, ನೀರು ಹನಿಯನ್ನು ತೊಟ್ಟಿಡುವಷ್ಟು ತಣ್ಣಗಿರುವ ಛತ್ರಿಯನ್ನು ನೀಡಿದನು; ವಾಯುದೇವನು ಎರಡು ಚಾಮರಗಳನ್ನೂ, ಧರ್ಮಪುತ್ರನು ಪುಷ್ಪಹಾರವನ್ನೂ, ದೇವೇಂದ್ರನು ರತ್ನದ ಕಿರೀಟವನ್ನೂ, ಯಮನು ದಂಡವನ್ನೂ ಒಪ್ಪಿಸಿದರು. ಬ್ರಹ್ಮನು ವೇದಮಯವಾದ ಒಂದು ಕವಚವನ್ನು ಆಶೀರ್ವಾದ ಮಾಡಿ ಕೊಟ್ಟನು. ಸರಸ್ವತಿಯು ಮುತ್ತಿನ ಹಾರವನ್ನು ಇತ್ತಳು. ಮಹಾವಿಷ್ಣುವು ಸುದರ್ಶನದ ಅಂಶದಿಂದ ಹುಟ್ಟಿದ ಚಕ್ರವನ್ನು ಅನುಗ್ರಹಿಸಿದನು. ಲಕ್ಷ್ಮೀದೇವಿಯು ಶಾಶ್ವತವಾದ ಐಶ್ವರ್ಯವನ್ನು ನೀಡಿದಳು. ರುದ್ರ ಅಂಬಿಕೆಯನ್ನು ಒಂದೊಂದು ಖಡ್ಗವನ್ನು ದಯಪಾಲಿಸಿದರು. ಚಂದ್ರನು ಕುದುರೆಗಳನ್ನೂ ಸುಂದರವಾದ ರಥವನ್ನೂ ಕೊಟ್ಟನು. ಅಗ್ನಿಯು ಬಿಲ್ಲನ್ನೂ ಸೂರ್ಯನು ಬಾಣಗಳನ್ನೂ, ಕೊಟ್ಟು ಮನ್ನಿಸಿದರು, ಭೂದೇವಿ ಆತನನ್ನು ಬೇಕಾದಲ್ಲಿಗೆ ಕೊಂಡೊಯ್ಯಬಲ್ಲ ಪಾದುಕೆಗಳನ್ನು ನೀಡಿದಳು. ಹೀಗೆ ಪೃಥುಚಕ್ರವರ್ತಿಯು ಸಮಸ್ತರಿಂದಲೂ ಸನ್ಮಾನಿತನಾದನು. ಇಡೀ ಭೂಮಂಡಲವನ್ನು ದರ್ಪದಿಂದ ಆಳುತ್ತಿದ್ದ ಆತನು 'ಆದಿರಾಜ'ನೆಂಬ ಕೀರ್ತಿಗೆ ಪಾತ್ರನಾದನು. ಪೃಥುಚಕ್ರವರ್ತಿಯು ಸಿಂಹಾಸನವನ್ನೇರಿದಾಗ ರಾಜ್ಯದ ಸ್ಥಿತಿಯೆಲ್ಲವೂ ಅಲ್ಲೋಲ ಕಲ್ಲೋಲವಾಗಿತ್ತು. ಭೂಮಿಯಲ್ಲಿ ಬೆಳೆಯೇ ಇಲ್ಲದೆ ಜನರೆಲ್ಲ ಉಪಾವಾಸದಿಂದ ಸಾಯುವ ಸ್ಥಿತಿಯಲ್ಲಿದ್ದರು. ಅವರೆಲ್ಲರೂ ರಾಜನ ಬಳಿಗೆ ಬಂದು 'ಸ್ವಾಮಿ, ನಾವು ಹಸಿವಿನಿಂದ ಸಾಯುತ್ತಿದ್ದೇವೆ. ನಮಗೆ ತಕ್ಷಣವೆ ಹೊಟ್ಟೆಗೆ ಹಿಟ್ಟು ಕೊಟ್ಟು ಕಾಪಾಡು' ಎಂದು ಅತಿ ದೀನರಾಗಿ ಬೇಡಿಕೊಂಡರು. ಅವರ ದೀನವಾಣಿಯನ್ನು ಕೇಳಿ ರಾಜನ ಕರುಳು ಕರಗಿತು. ಆತನು ಇದಕ್ಕೆ ಕಾರಣವೇನಿರಬಹುದೆಂದು ಅಳವಾಗಿ ಆಲೋಚಿಸಿದನು. ನೆಟ್ಟ ಬೀಜಗಳನ್ನು ಭೂಮಿಯೇ ನುಂಗುತ್ತಿದೆ; ಇದರಿಂದ ಬೆಳೆಯಿಲ್ಲದಂತಾಗಿದೆ. ಇದು ಅರ್ಥವಾಗುತ್ತಲೆ ಪೃಥುಚಕ್ರಗೆ ತ್ರಿಪುರಾಂತಕನಾದ ರುದ್ರನಂತೆ ಕೋಪುವುಕ್ಕಿತು. ಈ ಭೂಮಿಯನ್ನು ತುಂಡುತುಂಡಾಗಿ ಕತ್ತರಿಸಿಹಾಕಬೇಕೆಂದುಕೊಂಡು ತನ್ನ ಬಿಲ್ಲಿನಲ್ಲಿ ಬಾಣ ಹೂಡಿದನು. ಇದನ್ನು ಕಂಡು ಭೂದೇವಿ ಗಡಗಡ ನಡುಗುತ್ತಾ ಒಂದು ಹಸುವಿನ ರೂಪವನ್ನು ಧರಿಸಿ ಓಡಿಹೋಗಲಾರಂಭಿಸಿದಳು. ರಾಜನು ಹುಲ್ಲೆಯನ್ನು ಅಟ್ಟುವ ಬೇಡನಂತೆ ಆಕೆಯ ಬೆನ್ನಟ್ಟಿದನು. ತಾನಿನ್ನು ಉಳಿಯುವುದು ಅಸಾಧ್ಯವೆನಿಸಿದಾಗ ಆಕೆಯು ಪ್ರಥುರಾಜನಿಗೆ ಶರಣಾಗಿ 'ಮಹಾನುಭಾವ, ಲೋಕವೆಲ್ಲವನ್ನೂ ಕಾಪಾಡಲೆಂದು ಅವತರಿಸಿರುವ ನೀನು ನನ್ನನ್ನೇಕೆ ಕೊಲ್ಲಹೊರಟಿರುವೆ? ಧರ್ಮವನ್ನು ಬಲ್ಲ ನೀನು ಹೆಣ್ಣಾದ ನನ್ನನ್ನು ಕೊಲ್ಲಬಹುದೆ? ನಾನು ಮಾಡಿರುವ ಅಪರಾಧವಾದರೂ ಏನು? ನಾನು ಹಡಗಿನಂತೆ ನೀರಿನ ಮೇಲೆ ನಿಂತಿದ್ದೇನೆ. ಜಗತ್ತೆಲ್ಲವೂ ನನ್ನನ್ನು ಆಶ್ರಯಿಸಿ ನಿಂತಿದೆ. ನನ್ನನ್ನು ನಾಶಮಾಡಿದ ಮೇಲೆ ಈ ಜಗತ್ತನ್ನೆಲ್ಲ ನೀರುಪಾಲು ಮಾಡುವೆಯೇನು? ನೀನು ತಾನೆ ಎಲ್ಲಿ ನಿಲ್ಲುವೆ?' ಎಂದು ಕೇಳಿದಳು.

ಪೃಥುರಾಜನು ಭೂದೇವಿಗೆ ಉತ್ತರವಿತ್ತ–'ಎಲೆ ಭೂಮಿ, ನೀನು ನಿರಪರಾಧಿನಿಯೆಂದು ಹೇಳುತ್ತಿರುವೆಯಲ್ಲ! ನೀನು ಅನೇಕ ಅಪರಾಧಗಳನ್ನು ಮಾಡಿರುವೆ. ನೋಡು, ರಾಜನಾದ ನನ್ನ ಅಪ್ಪಣೆಯಂತೆ ನಡೆಯದಿರುವುದು ನಿನ್ನ ಮೊದಲನೆಯ ದೊಡ್ಡ ಅಪರಾಧ. ಪ್ರಾಣಿಗಳ ಆಹಾರವಾಗಿ ಬ್ರಹ್ಮನು ಸೃಷ್ಟಿಸಿರುವ ಬೀಜಗಳನ್ನು ಮೊಳೆಯುವುದಕ್ಕೆ ಬಿಡದೆ ನೀನೆ ನುಂಗುತ್ತಿರುವೆಯಲ್ಲ, ಇದು ಅಪರಾಧವಲ್ಲವೇನು? ಯಜ್ಞಗಳಲ್ಲಿ ಇತರ ದೇವತೆಗಳಂತೆ ನಿನಗೂ ಹವಿಸ್ಸನ್ನು ಕೊಡುತ್ತಿರುವೆವಲ್ಲ, ಆ ಕೃತಜ್ಞತೆಯಾದರೂ ನಿನಗೆ ಬೇಡವೆ? ಯಥೇಷ್ಟವಾಗಿ ಹುಲ್ಲುತಿಂದರೂ ಹಾಲುಕೊಡದೆ, ಒದೆಯುವ ಹಸು, ನೀನು. ರಾಜನಾದ ನಾನು ನನ್ನ ಪ್ರಜೆಗಳ ಹಸಿವನ್ನು ಹಿಂಗಿಸಬೇಕಾದುದು ನನ್ನ ಪವಿತ್ರ ಕರ್ತವ್ಯ. ಆದ್ದರಿಂದ ಈಗ ನಿನ್ನನ್ನು ಸೀಳಿ ನಿನ್ನ ಮಾಂಸದಿಂದಲೆ ಈ ಪ್ರಜೆಗಳ ಹಸಿವನ್ನು ಹೋಗಲಾಡಿಸುತ್ತೇನೆ. ನೀನು ಹೆಣ್ಣೆಂದು ಮುಂದುಮಾಡಿಕೊಂಡು ಬದುಕಬಯಸುವೆಯಾ? ಕ್ರೂರ ಸ್ವಭಾವದವರು ಹೆಣ್ಣಾಗಲಿ ಗಂಡಾಗಲಿ ಅವರನ್ನು ಕೊಂದರೆ ಪಾಪವೇನೂ ಇಲ್ಲ. ನೀನಿಲ್ಲದಿದ್ದರೆ ಜನರೆಲ್ಲ ಆಧಾರ ತಪ್ಪುವರೆಂದು ಹೆದರಿಸುತ್ತಿರುವೆಯಲ್ಲವೆ? ಕೇಳು, ನಿನ್ನನ್ನು ತುಂಡುತುಂಡಾಗಿ ಕತ್ತರಿಸಿದಮೇಲೆಯೂ ನನ್ನ ಪ್ರಜೆಗಳನ್ನು ನನ್ನ ಯೋಗ ಶಕ್ತಿಯಿಂದ ಹಿಂದಿನಂತೆಯೇ ನೆಲೆಯಾಗಿ ನಿಲ್ಲಿಸುತ್ತೇನೆ.'

ಕೋಪಗೊಂಡ ಯಮನಂತೆ ಬಿಲ್ಲನ್ನು ಹಿಡಿದು ನಿಂತು, ತನ್ನನ್ನು ಗದರಿಸಿ ನುಡಿದ ಪೃಥುಚಕ್ರವರ್ತಿಯನ್ನು ಕಂಡು ಭೂದೇವಿಯು ಬಿರುಗಾಳಿಗೆ ಸಿಕ್ಕ ಬಾಳೆಯಂತೆ ಗಡಗಡ ನಡಗುತ್ತಾ ಆತನಿಗೆ ಅಡ್ಡಬಿದ್ದು. ಅತಿ ಧೈನ್ಯದಿಂದ 'ಹೇ, ದೇವದೇವ, ನೀನು ಭಗವಂತನ ಅವತಾರವೆಂದು ನಾನು ಬಲ್ಲೆ. ಸರ್ವಜ್ಞನಾಗಿ ಸರ್ವಶಕ್ತನಾಗಿರುವ ನಿನ್ನನ್ನು ವಂಚಿಸುವುದಕ್ಕೆ ನನ್ನಿಂದ ಸಾಧ್ಯವೆ? ನೀನು ತ್ರಿಮೂರ್ತಿಸ್ವರೂಪನು. ನನ್ನ ಸೃಷ್ಟಿಗೆ ನೀನೇ ಕಾರಣ. ನೀನೇ ನನ್ನನ್ನು ಕೊಲ್ಲಹೊರಟರೆ ನನ್ನನ್ನು ರಕ್ಷಿಸುವವರಾರು? ಪ್ರಜೆಗಳನ್ನು ರಕ್ಷಿಸುವುದಕ್ಕಾಗಿಯೇ ನೀನೀಗ ಚಕ್ರವರ್ತಿಯಾಗಿ ಜನಿಸಿರುವೆ. ಆ ಪ್ರಜೆಗಳಿಗೆ ಭೋಗ ಭೂಮಿಯೆನಿಸಿರುವ ನನ್ನನ್ನು ಕೊಂದರೆ ಏನು ಗತಿ? ಹಿಂದೆ ಸಮುದ್ರದಲ್ಲಿ ಮುಳುಗಿ ಹೋಗಿದ್ದ ನನ್ನನ್ನು ವರಾಹರೂಪಿನಿಂದ ಮೇಲಕ್ಕೆತ್ತಿ ತಂದವನು ನೀನೆ



ಜಾಕ್ರಮ್ (ತ್ರಿಪುರಾ) – ಶಿಲ್ಲಾಂಗ್‌ನಿಂದ 64 ಕಿ.ಮೀ. ದೂರದಲ್ಲಿದೆ. ಬಿಸಿ ಬುಗ್ಗೆಗೆ ಹೆಸರಾಗಿದೆ.

ಅಲ್ಲವೆ? ನೀನೆ ಈಗ ನನ್ನನ್ನು ಕೊಲ್ಲುವನೆಂದು ಹೊರಟರೆ ನಾನೇನು ಮಾಡಲಿ? ಆದರೆ ಒಂದು ವಿಚಾರ. ಬ್ರಹ್ಮನು ಸೃಷ್ಟಿಸಿದ ಸಸ್ಯಗಳ ಬೀಜಗಳನ್ನು ನಾನು ನುಂಗಿದೆನೆಂದು ನೀನು ಇಷ್ಟು ಕೋಪಗೊಂಡಿರುವೆಯಲ್ಲ! ನಾನು ನುಂಗದೆ ಏನು ಮಾಡಬೇಕಾಗಿತ್ತು? ರಾಜ್ಯವೆಲ್ಲ ಅನಾಯಕವಾಗಿ, ಪಾಪಿಗಳು ಆ ಬೀಜಗಳನ್ನೆಲ್ಲ ನುಂಗಿಹಾಕುತ್ತಿದ್ದರು; ಅವರನ್ನು ತಡೆಯುವ ಮಹಾನುಭಾವರಾರೂ ಇರಲಿಲ್ಲ; ಅವರ ದೆಸೆಯಿಂದ ಸಸ್ಯಗಳೆಲ್ಲ ಸಮೂಲವಾಗಿ ನಾಶವಾಗುತ್ತಿದ್ದವು. ಕಳ್ಳಕಾಕರ ದೆಸೆಯಿಂದ ದೇಶ ಅನಾಯಕವಾಗಿತ್ತು. ಆದ್ದರಿಂದ ನಾನು ಅವುಗಳನ್ನು ಸಾಧ್ಯವಾದಷ್ಟು ಉಳಿಸಬೇಕೆಂದುಕೊಂಡು ನುಂಗಿದೆ. ಬಹುಕಾಲದವರೆಗೆ ರಕ್ಷಕನು ಬಾರದೆಹೋದುದರಿಂದ ಆ ಬೀಜಗಳು ಈಗ ನನ್ನ ಹೊಟ್ಟೆಯಲ್ಲಿ ಅರಗಿಹೋಗಿವೆ. ಅವನ್ನು ಮತ್ತೆ ಪಡೆಯಬೇಕಾದರೆ ಈ ಗೋರೂಪದಲ್ಲಿರುವ ನನಗೆ ಒಂದು ಕರುವನ್ನು ಕರುಣಿಸಿ; ನನ್ನ ಹಾಲನ್ನು ಕರೆಯಲು ತಕ್ಕುದಾದ ಒಂದು ಪಾತ್ರೆಯನ್ನು ಸಿದ್ಧಗೊಳಿಸು; ಹಾಲನ್ನು ಕರೆಯಲು ಶಕ್ತನಾದ ಮನುಷ್ಯನನ್ನು ನೇಮಿಸು. ಹಾಲಿನ ರೂಪದಿಂದ ಆ ಬೀಜಗಳೆಲ್ಲ ಹೊರಬರುತ್ತವೆ' ಎಂದಳು.

ಭೂದೇವಿಯ ಮಾತುಗಳನ್ನು ಕೇಳಿ ಪೃಥುರಾಜನ ಕೋಪ ಶಾಂತವಾಯಿತು. ಆತನು ಸ್ವಾಯಂ ಭುವಮನುವನ್ನು ಕರುವಾಗಿ ಮಾಡಿ, ತಾನೆ ಕರೆಯುವುದಕ್ಕೆ ಕುಳಿತು, ತನ್ನ ಬೊಗಸೆಯೊಳಕ್ಕೆ ಸಮಸ್ತ ಸಸ್ಯಗಳನ್ನೂ ಕರೆದನು. ಆಮೇಲೆ ಇತರರೂ ತಮ್ಮ ತಮ್ಮ ಇಷ್ಟಕ್ಕೆ ಅನುಸಾರವಾಗಿ ತಮಗೆ ಬೇಕಾದ ವಸ್ತುಗಳನ್ನೂ ಕರೆದುಕೊಂಡರು. ಮಹರ್ಷಿಗಳು ಬ್ರಹಸ್ಪತಿಯನ್ನು ಕರುವಾಗಿ ಮಾಡಿಕೊಂಡು, ವಾಕ್ಕು, ಕಿವಿ, ಮನಸ್ಸು ಎಂಬ ಪಾತ್ರೆಯಲ್ಲಿ ವೇದವೆಂಬ ಹಾಲನ್ನು ಕರೆದುಕೊಂಡು, ದೇವತೆಗಳು ಇಂದ್ರನನ್ನೇ ಕರುವಾಗಿ ಮಾಡಿಕೊಂಡು ಸೋಮರಸವೆಂಬ ಅಮೃತವನ್ನು ಕರೆದುಕೊಂಡರು. ಹೀಗೆಯೆ ರಾಕ್ಷಸರು ಹೆಂಡವನ್ನು, ಗಂಧರ್ವರು ಸೌಂದರ್ಯವನ್ನು, ಸಿದ್ಧರು ಅಣಿಮಾದಿ ಸಿದ್ಧಿಗಳನ್ನು, ಹಾವುಗಳು ವಿಷವನ್ನು, ಪಶುಗಳು ಹುಲ್ಲನ್ನು, ಕ್ರೂರಮೃಗಗಳು ಮಾಂಸವನ್ನು ಕರೆದುಕೊಂಡವು. ಯಾರು ಯಾರಿಗೆ ಯಾವುದು ಬೇಕೊ ಅದನ್ನು ಅವರವರು ಕರೆದುಕೊಂಡ ಮೇಲೆ, ಅತ್ಯಂತ ಸಂತೋಷಗೊಂಡ ಪೃಥುರಾಜನು ಭೂದೇವಿಯನ್ನು ತನ್ನ ಮಗಳಾಗಿ ಪರಿಗ್ರಹಿಸಿದನು. ಆತನ ಕೃಪೆಯಿಂದ ಪ್ರಜೆಗಳಿಗೆಲ್ಲ ಮನೆ ಮಠಗಳು, ಊರು ಕೇರಿಗಳು ನಿರ್ಮಾಣವಾದವು. ಜನರೆಲ್ಲ ಆತನ ಆಳ್ವಿಕೆಯಲ್ಲಿ ಸುಖಶಾಂತಿಗಳನ್ನು ಪಡೆದರು.

ಧರ್ಮದಿಂದ ರಾಜ್ಯಭಾರಮಾಡುತ್ತಿದ್ದ ಪೃಥುಚಕ್ರಿಗೆ ಅಶ್ವಮೇಧ ಯಾಗವನ್ನು ಮಾಡಬೇಕೆನ್ನಿಸಿತು. ಮನಸ್ಸಿಗೆ ಬಂದುದೇ ತಡ, ಆತನು ಬ್ರಹ್ಮಾವರ್ತವೆಂಬ ಪವಿತ್ರವಾದ ಪ್ರದೇಶದಲ್ಲಿ, ಪೂರ್ವದಿಕ್ಕಿಗೆ ಹರಿಯುತ್ತಿದ್ದ ಸರಸ್ವತೀ ನದಿಯ ದಡದಲ್ಲಿ ಯಾಗವನ್ನು ಮಾಡಿ ಮುಗಿಸಿದನು. ಒಂದಾದ ಮೇಲೆ ಒಂದರಂತೆ ಆತನು ತೊಂಬತ್ತೊಂಬತ್ತು ಯಾಗಗಳನ್ನು ಮಾಡಿ ಮುಗಿಸಿ, ನೂರನೆಯ ಯಾಗವನ್ನು ಕೈಗೊಂಡನು. ನೂರು ಯಾಗಗಳನ್ನು ಮಾಡಿದವನಿಗೆ ದೇವೇಂದ್ರಪದವಿ ತಾನೆ ? ಪೃಥುವಿನ ಯಾಗಗಳು ತನ್ನ ಯಾಗಕ್ಕಿಂತಲೂ ಮೇಲಾಗಿರುವುದನ್ನು ಕಂಡ ದೇವೇಂದ್ರನಿಗೆ ಆತನಲ್ಲಿ ಅಸೂಯೆ ಹುಟ್ಟಿತು. ಅಹುದು, ಪೃಥುಚಕ್ರವರ್ತಿಯ ಯಾಗ ವೈಭವ ಅಸೂಯೆ ಹುಟ್ಟಿಸುವಂತಹುದೇ. ಆತನ ಯಜ್ಞಕ್ಕೆ ಯಜ್ಞಪುರುಷನಾದ ನಾರಾಯಣನೇ ಪ್ರತ್ಯಕ್ಷನಾಗಿ ಬಂದು ಭಾಗವಹಿಸುತ್ತಿದ್ದನು. ಆದ್ದರಿಂದ ಬ್ರಹ್ಮರುದ್ರರೂ ದೇವಾನುದೇವತೆಗಳು ಋಷಿಗಳೂ ತಂಡತಂಡವಾಗಿ ಬಂದು ಅಲ್ಲಿ ನೆರೆದಿರುತ್ತಿದ್ದರು. ಭೂದೇವಿಯು ಆತನಿಗೆ ಬೇಕಾದ ವಸ್ತುಗಳನ್ನೆಲ್ಲ ಯಥೇಚ್ಛೆಯವಾಗಿ ತಂದು ಒಪ್ಪಿಸುತ್ತಿದ್ದಳು. ಹಾಲು, ಬೆಣ್ಣೆ, ತುಪ್ಪ, ಮೊದಲಾದವು ಅಲ್ಲಿ ಪ್ರವಾಹವಾಗಿ ಹರಿಯುತ್ತಿದ್ದವು. ಮರಗಿಡಗಳು ಜೇನುತೊಟ್ಟಿಕ್ಕುವಂತಹ ರಸಭರಿತವಾದ ಹಣ್ಣುಗಳನ್ನು ನೀಡುತ್ತಿದ್ದವು. ಪ್ರಜೆಗಳು ಕಪ್ಪಕಾಣಿಕೆಯನ್ನು ಒಪ್ಪಿಸುವುದಿರಲಿ, ಸಮುದ್ರಗಳರತ್ನರಾಶಿಗಳನ್ನೂ ಬೆಟ್ಟಗಳು ಅನ್ನರಾಶಿಗಳನ್ನೂ ತಂದು ಒಪ್ಪಿಸುತ್ತಿದ್ದವು. ಇಂತಹ ವೈಭವವನ್ನು ಕಂಡು ದೇವೇಂದ್ರನ ಕಣ್ಣು ಕುಕ್ಕಿದುದು ಆಶ್ಚರ್ಯವೇನೂ ಅಲ್ಲ. ಅವನು ಆ ಯಜ್ಞವನ್ನು ಹಾಳುಮಾಡಬೇಕೆಂದು ಹೊಂಚುಹಾಕುತ್ತಿದ್ದು, ಯಾವುದೊ ಮಾಯೆಯಿಂದ ಯಾಗದ ಕುದುರೆಯನ್ನು ಹೊತ್ತುಕೊಂಡು ಹೋದನು. ಇದರಿಂದ ಯಜ್ಞಕಾರ್ಯ ಅರ್ಧದಲ್ಲಿಯೇ ನಿಲ್ಲುವಂತಾಯಿತು.

**ಆದರಣೀಯ ಗುರುಬಂಧುಗಳೇ,**

ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿಯವರು ಲೋಕಕಲ್ಯಾಣಕ್ಕಾಗಿ 60 ದಿನಗಳ ಕಾಲ ನಡೆಸಿದ ಚಾತುರ್ಮಾಸ್ಯ ವ್ರತವು ದಿನಾಂಕ 16–09–2016 ರಂದು ಮುಕ್ತಾಯಗೊಳ್ಳಲಿದೆ. ಈ ಶುಭ ಸಂದರ್ಭದಲ್ಲಿ ಸಮಸ್ತ ಶಿಷ್ಯ ಭಕ್ತರು ಆಗಮಿಸಿ ತೀರ್ಥಪ್ರಸಾದ, ಆಶೀರ್ಮಂತ್ರಾಕ್ಷತೆಯನ್ನು ಸ್ವೀಕರಿಸಿ ಶ್ರೀ ಗುರುಗಳ ಹಾಗೂ ಶ್ರೀ ವೀರಾಂಜನೇಯ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**–ಅಧ್ಯಕ್ಷರು, ಸರ್ವಸದಸ್ಯರು.**
**ಚಾತುರ್ಮಾಸ್ಯ ನಿರ್ವಹಣಾ ಸಮಿತಿ.**



ಜೀಲೆಗೊರಾ –ಬಿಹಾರದಲ್ಲಿದೆ. ಇಂಧನ ಸಂಶೋಧನಾ ಸಂಸ್ಥೆಗೆ ಜೀಲೆಗೊರಾ ಹೆಸರಾಗಿದೆ.

॥ಪ್ರಸೀದತು ಶ್ರೀ ವೀರಾಂಜನೇಯಃ॥

# "ಯಕ್ಷ ಪೂರ್ಣಿಮೆ"

ಮಹನೀಯರೇ...

ಇದೇ ಬರುವ ದುರ್ಮುಖಿ ನಾಮ ಸಂ॥ದ ಆಶ್ವೀಜ ಶುದ್ಧ ಪಾಡ್ಯ ತಾ॥ 01–10–2016 ಶನಿವಾರದಿಂದ ಆಶ್ವೀಜ ಶು.ಹುಣ್ಣಿಮೆ ತಾ॥ 16–10–2016 ರವಿವಾರದವರಗೆ ನಡೆಯುವ ಯಕ್ಷಗಾನ ಪ್ರಸಂಗಗಳು.

| ದಿನಾಂಕ | ಪ್ರಸಂಗಗಳು |
|---|---|
| 1–10–2016 ಶನಿವಾರ | ಶರಸೇತು–ಚಕ್ರ ಚಂಡಿಕೆ (ಪೂರ್ಣರಾತ್ರಿ) |
| 2–10–2016 ರವಿವಾರ | ರತಿ ಕಲ್ಯಾಣ–ರಾಮಾಂಜನೇಯ (ಪೂರ್ಣರಾತ್ರಿ) |
| 3–10–2016 ಸೋಮವಾರ | ದಮಯಂತಿ |
| 4–10–2016 ಮಂಗಳವಾರ | ನರಕಾಸುರ ವಧೆ |
| 5–10–2016 ಬುಧವಾರ | ವಸಂತ ಸೇನೆ |
| 6–10–2016 ಗುರುವಾರ | ರಾಜಾ ಉಗ್ರಸೇನ |
| 7–10–2016 ಶುಕ್ರವಾರ | ತ್ರಿಜನ್ಮ ಮೋಕ್ಷ (ಪೂರ್ಣರಾತ್ರಿ) |
| 8–10–2016 ಶನಿವಾರ | ಯಮಲೋಕ ವಿಜಯ–ಸುದರ್ಶನ ವಿಜಯ(ಪೂರ್ಣರಾತ್ರಿ) |
| 9–10–2016 ರವಿವಾರ | ದಕ್ಷಯಜ್ಞ–ಕನಕಾಂಗಿ ಕಲ್ಯಾಣ (ಪೂರ್ಣರಾತ್ರಿ) |
| 10–10–2016 ಸೋಮವಾರ | ಶಾಪ ವಿಮೋಚನೆ (ಅಹಲ್ಯೋದ್ಧರಣ) |
| 11–10–2016 ಮಂಗಳವಾರ | ವರಕವಿ ಕಾಳಿದಾಸ |
| 12–10–2016 ಬುಧವಾರ | ತಾಮ್ರಧ್ವಜ ಕಾಳಗ |
| 13–10–2016 ಗುರುವಾರ | ರತ್ನಾವತಿ–ಮಾರುತಿ ಪ್ರತಾಪ (ಪೂರ್ಣರಾತ್ರಿ) |
| 14–10–2016 ಶುಕ್ರವಾರ | ವೈದೇಹಿ ಕಲ್ಯಾಣ |
| 15–10–2016 ಶನಿವಾರ | ಭಕ್ತ ವೀರಮಣಿ |
| 16–10–2016 ರವಿವಾರ | ವರಾನ್ವೇಷಣೆ–ವಜ್ರದುಂಬಿ (ಪೂರ್ಣರಾತ್ರಿ) |





ಅಧ್ಯಕ್ಷರು
ಶರನ್ನವರಾತ್ರಿ ಯಕ್ಷೋತ್ಸವ ಸಮಿತಿ,
ಶ್ರೀಕ್ಷೇತ್ರ ಬಂಗಾರಮಕ್ಕಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:– 9449548296.



ಝುರಿಯಾ – ಬಿಹಾರ ರಾಜ್ಯಕ್ಕೆ ಸೇರಿರುವ ಝುರಿಯಾ ಕಲ್ಲಿದ್ದಲು ಗಣಿಗಳಿಗೆ ಹೆಸರಾಗಿದೆ.